# ಹಿಂದು ವಾಣಿ

ಸಂಪುಟ – 22
ಸಂಚಿಕೆ – 12
ವೈಶಾಖ–ಜ್ಯೇಷ್ಠ
ಜೂನ್ 2024
ಬೆಲೆ ರೂ. 15.00

**HINDU VANI**
KANNADA MONTHLY

VOL - 22 ISSUE-12 JUNE 2024 BENGALURU PAGES-44 Rs:15/-







ಸಂಘದ ಕಾರ್ಯಕರ್ತ ವಿಕಾಸ ವರ್ಗ – ದ್ವಿತೀಯ, ನಾಗಪುರ





ಸೇವಿಕಾ ಸಮಿತಿ ಹೊಯ್ಸಳ ಪ್ರಾಂತ ಪ್ರವೇಶ ಮತ್ತು ಪ್ರಬೋಧ ವರ್ಗ, ಮೈಸೂರು




ಮಿಲಿಂದ್ ಪರಾಂಡೆ ಪತ್ರಿಕಾ ಗೋಷ್ಠಿ, ಬೆಳಗಾವಿ



ಪ್ರೊ. ಎಮ್.ಕೆ. ಶ್ರೀಧರ್,
ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ
ಪದ್ಮಶ್ರೀ ಪ್ರಶಸ್ತಿ




ಹೆಚ್.ಎಸ್.ಎಸ್. ಶಾಖೆ, ಅಟ್ಲಾಂಟ, ಅಮೆರಿಕ – ಬಿ.ಇ. ಸುರೇಶ ಉಪಸ್ಥಿತಿ

ಹಿಂದುವಾಣಿ
hinduvani@yahoo.com
ಶ್ರೀ ಕ್ರೋಧಿನಾಮ ಸಂವತ್ಸರ
ವೈಶಾಖ–ಜ್ಯೇಷ್ಠ
ಜೂನ್ 2024

ಗೌರವ ಸಂಪಾದಕ
ಟಿ.ಎ.ಪಿ. ಶೆಣೈ

ಪ್ರಕಾಶಕರು
ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004.
ದೂ. 080–26604641

ಪ್ರಸಾರ ಸಲಹೆ
ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

ಚಂದಾವಿವರ

| | |
|---|---|
| ಬಿಡಿಪ್ರತಿ | ರೂ. 15/– |
| ವಾರ್ಷಿಕ ಚಂದಾ | ರೂ. 130/– |
| ದ್ವೈವಾರ್ಷಿಕ ಚಂದಾ | ರೂ. 250/– |

ಮುದ್ರಕರು
ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018.
rmudrana@gmail.com

## ಸೂಕ್ತಿಶ್ರೀ

# ಸತ್ಯದ ನೈಜತೆ

– **ಬಿ.ಈ. ಸುರೇಶ,** ಬೆಂಗಳೂರು

**ಸತ್ಯಸ್ಯ ವಚನಂ ಶ್ರೇಯಃ ಸತ್ಯಾದಪಿ ಹಿತಂ ವದೇತ್ ।**
**ಯದ್ಭೂತಹಿತಮತ್ಯಂತಂ ಏತತ್ ಸತ್ಯಂ ಮತಂ ಮಮ ॥**

– ಮಹಾಭಾರತ

ಸತ್ಯವನ್ನು ಮಾತ್ರವೇ ನುಡಿಯಬೇಕು ಎನ್ನುವುದು ಎಂದೆಂದಿಗೂ ಶ್ರೇಯಸ್ಸಿಗೆ ಕಾರಣವಾಗುವ ಹಾದಿ. ಆದರೆ ಅಷ್ಟು ಸಾಕಾಗದು. ಅದನ್ನು ಆಡುವಾಗ ಅದರ ಪರಿಣಾಮವೇನೆಂದು ಯೋಚಿಸಿ ಹೇಳುವುದು ಇನ್ನೂ ಉತ್ತಮ. ಸತ್ಯವನ್ನು ಹೇಳಿದೆ ಎನ್ನುವ ಸಮಾಧಾನಕ್ಕಿಂತಲೂ ಹೇಳಿದ ಸತ್ಯವು ಉಳಿದವರಿಗೆ ಹಿತವನ್ನು ನೀಡುವಂತಿದ್ದರೆ ಮಾತ್ರ ಅದರ ಪರಿಣಾಮವು ಅತ್ಯಂತ ಉತ್ತಮವೆಂದೆನಿಸುತ್ತದೆ. ಕೊನೆಗಂತೂ ಇಷ್ಟು ಮಾತ್ರವೇ ಸತ್ಯ! ಸತ್ಯವನ್ನು ಆಡಬೇಕೆನ್ನುವುದು ನಿಜವಾದರೂ ಅದು ನಿಜವಾಗಿ ಇತರರಿಗೆ ಹಿತಕರವಾಗುವುದಾದಲ್ಲಿ ಮಾತ್ರ ಅದು ಸತ್ಯವೆನಿಸುತ್ತದೆ.

ಸತ್ಯದ ಕುರಿತು; ಆಡುವ ಮಾತಿನ ಕುರಿತು ನಮ್ಮ ಹಿರಿಯರು ಯೋಜಿಸಿದ ಅದರ ಹರವು ಮತ್ತು ಅದರ ಆಳವು ವಿಸ್ಮಯಕಾರಿಯಾದುದು. ಸುಳ್ಳನ್ನು ಆಡದಿರುವುದು ಮಾತ್ರ ಸತ್ಯ ಎನ್ನುವುದು ರೂಢಿಯಲ್ಲಿರುವ ರೀತಿ. ಆದರೆ ಅದರ ಮಥಿತಾರ್ಥವು ಬೇರೆಯೇ ಇದೆ ಎನ್ನುವುದು ಇಲ್ಲಿನ ಧ್ವನಿ. ಜೀವಿಗಳಿಗೆ ಹಿತಕರವಾಗುವುದು ಮಾತ್ರವೇ ಸತ್ಯ. ಅದು ಮಾತ್ರವೇ ಜಗತ್ತನ್ನು ರಕ್ಷಿಸುವ ರೀತಿ ಎನ್ನುವುದು ಇಲ್ಲಿಯ ಒಟ್ಟು ಅರ್ಥ.

ಮಹಾಭಾರತ ಯುದ್ಧದ ಕೊನೆಯಲ್ಲಿ ಬರುವ ಅಶ್ವತ್ಥಾಮ ವೃತ್ತಾಂತದಲ್ಲಿ ಒಂದು ಪ್ರಸಂಗವು ಓದುಗರ ಕಣ್ಣನ್ನು ತೇವಗೊಳಿಸುತ್ತದೆ. ಕ್ರೂರಿ ಅಶ್ವತ್ಥಾಮನು ಪಾಂಡವರ ವಂಶವನ್ನೇ ನಿರ್ನಾಮಗೊಳಿಸಬೇಕೆಂದು ನಿಶ್ಚಯಿಸುತ್ತಾನೆ. ಎಲ್ಲರೂ ನಿದ್ದೆಯಲ್ಲಿರುವ ಮುಂಜಾವಿನಲ್ಲಿ ಪಾಂಡವ ಸೈನ್ಯ ಶಿಬಿರವನ್ನು ಹೊಕ್ಕ ಅಶ್ವತ್ಥಾಮನು ಉಪಪಾಂಡವರು ಐದು ಜನರ ತಲೆಕಡಿದು ಅದನ್ನು ದುರ್ಯೋಧನನಿಗೆ ಬಳುವಳಿಯಂತೆ ತಂದು ತೋರಿಸಿದನಂತೆ. ಇಷ್ಟಕ್ಕೆ ನಿಲ್ಲದ ಆ ದುಷ್ಟನು ಇನ್ನು ಅಭಿಮನ್ಯುವಿಗೆ ಪತ್ನಿ ಉತ್ತರೆಯ ಗರ್ಭದಲ್ಲಿ ಬೆಳೆಯುತ್ತಿದ್ದ ಪಾಂಡವ ವಂಶದ ಕೊನೆಯ ಕುಡಿಯನ್ನೂ ಮುಗಿಸಲು ನಿರ್ಧರಿಸುತ್ತಾನೆ. ಇದಕ್ಕೆ ಅವನು ಹೂಡಿದುದು ಬ್ರಹ್ಮಾಸ್ತ್ರವನ್ನು. ಆ ಬ್ರಹ್ಮಾಸ್ತ್ರವು ಬೆಂಕಿಯನ್ನು ಕಾರುತ್ತಾ ಉತ್ತರೆಯನ್ನು ಸಮೀಪಿಸಿಸುತ್ತದೆ. ಪಾಂಡವ ಪಕ್ಷವಿಡೀ ಭಯವಿಹ್ವಲವಾಗಿ ದಿಗ್ಭ್ರಮೆಯಲ್ಲಿ ಇರುತ್ತದೆ. ಕುಂತಿಯು ಕೃಷ್ಣನನ್ನು ಸಂಭೋಧಿಸಿ 'ರಕ್ಷಿಸು' ಎಂದು ಮೊರೆಯಿಡುತ್ತಾಳೆ. ಧಾವಿಸಿ ಬಂದ ಕೃಷ್ಣನು ಉತ್ತರೆಯ ಕೈಹಿಡಿದು ಉಚ್ಚಕಂಠದಲ್ಲಿ ಘೋಷಿಸುತ್ತಾನೆ. "ನಾನು ಎಂದೂ ಕೂಡಾ ಸುಳ್ಳನ್ನು ಆಡಲಿಲ್ಲವೆಂದಾದರೆ ಈ ಮಗುವಿನ ಹೊಟ್ಟೆಯಲ್ಲಿರುವ ಶಿಶುವು ಬದುಕಲಿ" ಎಂದೆನ್ನುತ್ತಾನೆ. ಉತ್ತರೆಯು ಸುಖಪ್ರಸವದಲ್ಲಿ ಪರೀಕ್ಷಿತನಿಗೆ ಜನ್ಮವನ್ನು ನೀಡುತ್ತಾಳೆ. ಇದು ನಿಜಾರ್ಥದಲ್ಲಿ ನಡೆಯುವ ಸತ್ಯದ ಪರೀಕ್ಷೆ. ದುಷ್ಟ ಪರಿಸರದಲ್ಲಿ ಶಿಷ್ಟರ, ಸಜ್ಜನರ ರಕ್ಷಣೆಗೆ ಕಾರಣವಾಗುವುದೆಲ್ಲವೂ ಸತ್ಯವೆ. ಇದು ಶ್ರೀಕೃಷ್ಣನ ನಿಲುವು.

ಸತ್ಯವನ್ನೇ ನುಡಿ. ಆ ಸತ್ಯವು ಕೇಳಲು ಪಾಲಿಸಲು ಪ್ರಿಯವೆನಿಸುವಂತಿರಲಿ. ಎನ್ನುವ ನುಡಿಯೂ ಕೂಡಾ ಇದನ್ನೇ ಪ್ರತಿಪಾದಿಸುತ್ತದೆ. ಮುನಿಯೊಬ್ಬನು ತಪಸ್ಸು ಮಾಡುವಲ್ಲಿ ಧಾವಿಸಿ ಬಂದ ತೀರ್ಥಯಾತ್ರಾರ್ಥಿಗಳು ಮುನಿಯ ಬಳಿ ತಮಗೆ ರಕ್ಷಣೆ ನೀಡಲು ಕೇಳಿದರು. ಮುನಿಯು ಅವರಿಗೆ ಪಕ್ಕದಲ್ಲಿರುವ ಗವಿಯೊಳಗೆ ಅವಿತು ಇರಲು ಹೇಳಿದರು. ಅವರನ್ನು ಅಟ್ಟಿಸಿಕೊಂಡು ಬಂದ ದರೋಡೆಕೋರರು ಕೂಡಾ ಅದಾಗುತ್ತಲೇ ಅಲ್ಲಿಗೆ ಬಂದು ಮುಟ್ಟಿದರು. ಬಂದವರೇ 'ಓಡಿ ಬರುತ್ತಿದ್ದ ಗುಂಪು ಯಾವ ಕಡೆ ಹೋದರು ಎಂದು ಮುನಿಯನ್ನು ಕೇಳಿದರು. ಹಿಂದು ಮುಂದು ನೋಡದೆ ಮುನಿಯು ಕಳ್ಳರಿಗೆ ಇನ್ನೊಂದು ದಾರಿಯನ್ನು ಬೊಟ್ಟು ಮಾಡಿ ತೋರಿಸಿದರು. ಸಜ್ಜನ ಯಾತ್ರಾರ್ಥಿಗಳು ಜೀವ ಉಳಿಸಿಕೊಂಡರು. ಮಹಾಭಾರತವು ಪ್ರತಿಪಾದಿಸುವ ನಿಜಾರ್ಥದ ಸತ್ಯವೆಂದರೆ ಇದುವೆ.

ಭಾರತದ ಇತಿಹಾಸದಲ್ಲಿ ಹಲವು ಬಾರಿ ಸತ್ಯದ ವಾಡಿಕೆಯ ಅರ್ಥವನ್ನು ಭ್ರಮಿಸಿ ಅದರ ನಿಜಾರ್ಥವನ್ನು ವಿಶ್ಲೇಷಿಸಲು ಸಾಧ್ಯವಾಗದೆ ಎಡವಿದುದು ಇದೆ. ಕ್ರೂರರು, ಅಧರ್ಮಿಗಳು, ಎಂದೂ ಕೂಡಾ ಸತ್ಯದ ಮಾರ್ಗದ ಸಮೀಪದಲ್ಲೂ ಸುಳಿಯದವರ ಜೊತೆ ವಾಡಿಕೆಯ ಸತ್ಯಮಾರ್ಗವನ್ನು ಕ್ರಮಿಸುವ ಪ್ರಯತ್ನವನ್ನು ಮಾಡಿದುದು ಇದೆ. ಅದರಿಂದ ಅಪಾರ ಹಾನಿಗೀಡಾದುದು ಇತಿಹಾಸದ ನಿಚ್ಚಳವಾದ ಸತ್ಯ.

ವಿಶ್ವ ಹಿಂದು ಪರಿಷದ್ ಮಾಹಿತಿ ಮತ್ತು ಹಿಂದುವಾಣಿ epaper
www.vhp.org

## ಎಂದಿನಂತೆ




3 **ಸೂಕ್ತಿಶ್ರೀ**
ಅಧರ್ಮಿಗಳ ನಡುವೆ ಧರ್ಮಕ್ಕೆ ಜಯ

6 **ಪ್ರತಿಧ್ವನಿ**

7 **ಸಂಪಾದಕೀಯ**
ಚುನಾವಣೆ ಮುಗಿಯಿತು...

26 **ಕತೆಕತೆ ಕಾರಣ**
ಶಿಕ್ಷಣವು ಬದುಕಲು ಉಪಯೋಗ...

28 **ಕವನ**
ಕಶೀರದಲ್ಲಿ ಕಬೀರ

29 **ನಿಮಗೆಷ್ಟು ಗೊತ್ತು?**

30 **ಶಬ್ದಶೋಧ 198**

34 **ಕ್ಷೇತ್ರದರ್ಶನ**
ಬಾಳೆಹೊನ್ನರು ಶ್ರೀ ಜಗದ್ಗುರು...

38 **ಪ್ರಸ್ತುತ**
ಫೋಟೋ... ನಿನದೆಂಥಾ ಮಾಟವೆ

## ತಿಂಗಳ ವಿಶೇಷ


09 ಮಹಾಭಾರತ ಮತ್ತು ತತ್ಕಾಲದ ರಾಜನೀತಿ

17 ತುರ್ತು ಪರಿಸ್ಥಿತಿ...

22 ಬಿಲ್ಗೇಟ್ಸ್ ಎನ್ನುವ ಅಸಾಮಾನ್ಯ

24 ಪೌರತ್ವ ತಿದ್ದುಪಡಿ ಕಾಯಿದೆಯ ಜಾರಿ

32 ಈಗಿನ್ನು ಅಮೆರಿಕಾ ದೇಶಕ್ಕೆ...




## ಇಂಡಿಯಾ ಮತ್ತು ಭಾರತ

ಸಂಗ್ರಹಕ್ಕೆ ಯೋಗ್ಯವಾದ, ಆಕರದ ಮೂಲವಾಗಬಹುದಾದ ಸುಂದರ ಸಂಪಾದಕೀಯ. ಹಿಂದುವಾಣಿಯ ನಿಲುವು ಸದಾ ಭಾರತದ ನಿಲುವು. – **ರಾಜಾರಾಮ್ ರಾವ್, ಶಿರಸಿ**

## ಆದ್ಯರು ಮತ್ತು ಉತ್ತುಂಗರು

ಗೋವಿಂದ ಭಗವತ್ಪಾದರಿಗೆ ಶಂಕರರು ತಮ್ಮನ್ನು ಪರಿಚಯಿಸಿದ ರೀತಿ ಸುಂದರ ಕವನವೆ, 'ನಾನು ಆಕಾಶವಲ್ಲ ಮೆಟ್ಟುವ ಈ ಭೂಮಿಯಲ್ಲ. ಬೆಂಕಿಗಾಳಿಗಳಲ್ಲ. ನಾನು ಶುದ್ಧ ಆನಂದ ಅನುಭವ. ನಾನು ಶುಭಂಕರನು ನಾನು ಶಿವನು; ಆಚಾರ್ಯ ಶಂಕರರ ವ್ಯಕ್ತಿತ್ವ ಮತ್ತು ಜೀವನಗಳೆರಡೂ ಉತ್ತುಂಗ. – **ನಾಗಭೂಷಣಶಾಸ್ತ್ರೀ, ಹಿರಿಯೂರು**

## ಭಾರತದ ವೀರಗಾಥೆ

ಭಾರತದ ಗೆಲುವು ಸಾಹಸಗಳ ಆಧ್ಯಾಯಗಳನ್ನು ಪರಿಚಯಿಸುವ ಸರ್ದಾರ ಆಂಗ್ರೆಯ ಕಿರು ಪರಿಚಯ ಮತ್ತು ಶ್ರೀ ಕೃಷ್ಣದೇವರಾಯನ ಇತಿಹಾಸದ ಲೇಖನವು ಸ್ಮರಣೆಯವಾದುದು. – **ಚೇತನ ಸುಂದರ್, ಹೊಸೂರು**

## ಹಿಂದು ಅಮೆರಿಕಾ

ಅಮೆರಿಕಾದಲ್ಲಿ ನಡೆದ ಶ್ರೀರಾಮ ರಥಯಾತ್ರೆಯ ವರದಿಯು ಹಿಂದು ಧರ್ಮದ ಜೈತ್ರಯಾತ್ರೆಯ ಹೊಸ ಹೆಜ್ಜೆಯೆನಿಸುತ್ತದೆ. – **ಹಿರಣ್ಮಯಿ ಶ್ರೀರಾಮು, ಬೇಲೂರು**

## ಕಾರ್ಯಪ್ಪ ಕನಸು

1968ರಲ್ಲಿ ಜನರಲ್ ಕಾರ್ಯಪ್ಪ ನಮ್ಮ ಕಾಲೇಜಿಗೆ ಬಂದುದು ನೆನಪಾಗುತ್ತದೆ. ತಲೆ ಎತ್ತಿ ನೋಡಬೇಕಾದ ವ್ಯಕ್ತಿತ್ವ. ಶಿರಬಾಗಿ ನಮಿಸಬೇಕಾದ ದೇಶಭಕ್ತಿ.

– **ಸೂರ್ಯ ನಾರಾಯಣ ಅಡಿಗ, ಉಡುಪಿ**

## ಓದಲೇಬೇಕೆನಿಸುವ ಹಿಂದುವಾಣಿ

ಹಿಂದುವಾಣಿಯ ಪುಟಗಳೆಲ್ಲ ಓದುವಂತಹ ಲೇಖನಗಳು. ಅದರಲ್ಲೂ ಶಾರದಾ ಮೂರ್ತಿಯವರ ಪ್ರಸ್ತುತ ಅಂಕಣವನ್ನಂತೂ ತಪ್ಪಿಸಲಾಗದೆ ಓದುವೆ.

– **ವಿಶ್ವೇಶ್ವರ ಗಾಯತ್ರಿ, ಬೆಂಗಳೂರು**

# ಚುನಾವಣೆ ಮುಗಿಯಿತು. ಇನ್ನು ಮುಂದೆ ಶಾಂತ ಸಂವಾದಗಳು

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಮತದಾನದ ಪರ್ವವು ಪೂರ್ಣಗೊಂಡಿದೆ. 97 ಕೋಟಿ ಮತದಾರರು ಭಾಗವಹಿಸುವ ಈ ಚುನಾವಣೆಯಲ್ಲಿ ಯೂರೋಪಿನ ದೇಶಗಳ ಒಟ್ಟು ಜನಸಂಖ್ಯೆಗಿಂತ ಹೆಚ್ಚಿನ ಮತದಾರರು ಇರುವರು. ಎರಡೂವರೆ ತಿಂಗಳುಗಳ ಕಾಲ ಹರಡಿದ ಈ ಚುನಾವಣೆಯ ಸಂಭ್ರಮವು ಜೂನ್ 1ರ, 7ನೇ ಹಂತದ ಮತದಾನದೊಂದಿಗೆ 18ನೇ ಲೋಕಸಭೆಯ ರಚನೆಗೆ ದಾರಿಮಾಡಿಕೊಡಲಿದೆ. 11ಕೋಟಿ ಮತದಾನ ಕಟ್ಟೆಗಳನ್ನು ಒಂದೂವರೆ ಕೋಟಿ ಚುನಾವಣಾ ಸಿಬ್ಬಂದಿಗಳು ನಿರ್ವಹಿಸಿದರು. 55ಲಕ್ಷ ಸಂಖ್ಯೆಯ ಮತದಾನ ಯಂತ್ರಗಳು ಜೂನ್ ತಿಂಗಳ 4ರಂದು ತಮ್ಮಲ್ಲಿ ಅಡಗಿರುವ ಆಯ್ಕೆಯ ಗುಟ್ಟನ್ನು ಬಹಿರಂಗಗೊಳಿಸುವುವು.

ಚುನಾವಣಾ ಕಾಲದ ಈ ಗೌಜಿಗದ್ದಲಗಳಲ್ಲಿ ಹಲವು ಕಡೆ ಘರ್ಷಣೆಗಳು ನಡೆದವು. ಸಾವು ನೋವುಗಳು ಆದವು. ದೇಶದ ವಿಸ್ತಾರ, ಅಪಾರ ಜನಸಂಖ್ಯೆ, ವಿಭಿನ್ನ ಚಿಂತನೆಯ ರಾಜಕೀಯ ಪಕ್ಷಗಳು, ಇರುವಲ್ಲಿ ಇಂತಹ ಬೆಳವಣಿಗೆಯು ಸಲ್ಲದು ಎನ್ನುವುದು ನಿಜವಾದರೂ ಕೆಲವೊಮ್ಮೆ ಕೈಮೀರಿದ ಘಟನೆಗಳು ಅಲ್ಲಲ್ಲಿ ನಡೆಯುತ್ತವೆ. ಇಂತಹ ಚುನಾವಣೆ ಸುಲಲಿತವಾಗಲು ಪ್ರಾಜ್ಞರ ಸಹಯೋಗದ ಅವಶ್ಯಕತೆಯಿದೆ. ಪೊಲೀಸ್ ಮತ್ತು ನ್ಯಾಯಾಲಯಗಳು ಮಾತ್ರವೇ ಇದನ್ನು ಕಲ್ಪಿಸುವುದು ಅಸಾಧ್ಯ.

ಪೂರ್ಣ ಪ್ರಮಾಣದಲ್ಲಿ ಮತದಾರರು ಭಾಗವಹಿಸುವ ಚುನಾವಣೆಯನ್ನು ಸಾಧಿಸುವುದಾದರೆ ಮಾತ್ರ ಅದು ಯಶಸ್ವೀ ಚುನಾವಣೆ ಎನ್ನಬಹುದು. ಮತಗಟ್ಟೆಯ ಮುಂದೆ ದಿನವಿಡೀ ಉದ್ದದ ಸಾಲನ್ನು ಕಾಣಲು ಸಾಧ್ಯವೇ? ಕಡಿಮೆ ಮತದಾನಕ್ಕೆ ಹಲವು ಕಾರಣಗಳಿವೆ. ಅಂತಹ ಕ್ಷೇತ್ರಗಳಲ್ಲಿ ಘೋಷಣೆಯಾಗುವ ಫಲಿತಾಂಶವು ಪ್ರಜಾಪ್ರಭುತ್ವವೆನ್ನುವ ರಾಜಕೀಯ ಸಿದ್ಧಾಂತಕ್ಕೆ ಶೋಭೆ ತರುವುದಿಲ್ಲ. ಮೊದಲು ಮತದಾರ ಪಟ್ಟಿ ತಯಾರಿಯ ಲೋಪಗಳನ್ನು ತಿದ್ದುವುದು ಆಗಬೇಕು. ಇದೇನೂ ಅಸಾಧ್ಯ ಕಾರ್ಯವಲ್ಲ. ಆಗಲೇ ಕಡಿಮೆ ಮತದಾನ ಪ್ರಮಾಣದ ಒಂದೊಂದು ಕಾರಣವನ್ನೂ ಸರಿಪಡಿಸಬಹುದು.

ಹಿಂದೆ ಕಾಶ್ಮೀರದಲ್ಲಿ ಚುನಾವಣೆಯ ಬಹಿಷ್ಕಾರವನ್ನು ಚುನಾವಣೆಯು ನಡೆಯದಿರುವಂತೆ ಮಾಡುವ ಹಿಂಸೆಯನ್ನು, ಪ್ರಜಾಪ್ರಭುತ್ವ ಮಾದರಿಯ ಪ್ರತಿಭಟನೆ ಎಂದು ರಾಜಕಾರಣಿಗಳು ಮಾತ್ರವಲ್ಲ ಪತ್ರಿಕೆಗಳೂ ವಿಶ್ಲೇಷಿಸುತ್ತಿದ್ದವು. ಈಗ ಅಂತಹ ಸ್ಥಿತಿ ಆಗಿಹೋದ ದಿನಗಳು ಎಂದು ಹೇಳಬಹುದೇನೋ! ಕಾಶ್ಮೀರವು ಸ್ವತಂತ್ರವಾಗಬೇಕು ಎಂದೋ ಕಾಶ್ಮೀರವು ಪಾಕಿಸ್ತಾನದೊಂದಿಗೆ ವಿಲೀನವಾಗಬೇಕೆಂದೋ ಹೇಳುವ ಚುನಾವಣಾ ಅಭ್ಯರ್ಥಿಗಳು ಇನ್ನು ಮುಂದೆ ಕಾಣಸಿಗಲಾರರೇನೋ?

ಚುನಾವಣಾ ಸ್ಪರ್ಧೆಗಳು ಮುಚ್ಚಿಟ್ಟ ಹಲವು ವಿಚಾರಗಳನ್ನು ಬೆಳಕಿಗೆ ತರುತ್ತವೆ.ಅವು ಸಾಮಾನ್ಯ ಪೌರರ ಪಾಲಿಗೆ ಯಾವ ರೀತಿಯಲ್ಲಿ ಪರಿಣಾಮ ಬೀರುತ್ತವೆ ಎನ್ನುವ ವ್ಯಾಪಕ

ಚರ್ಚೆ ನಡೆಯಬೇಕು. ಅವುಗಳು ರಾಜಕೀಯದ ವ್ಯೂಹ ತಂತ್ರಗಳಿಂದಾಗಿ ದೇಶದ ಆರೋಗ್ಯಕರ ಬೆಳವಣಿಗೆಗೆ ಹೇಗೆ ತಡೆಯಾಗಲಿವೆ ಎನ್ನುವುದು ಬಹಿರಂಗವಾಗಬೇಕು. ಪೂರ್ವಾಗ್ರಹವಿಲ್ಲದ ಸಂವಾದ. ಶಾಂತರೀತಿಯ ಚರ್ಚೆಗಳು ಸಾಧ್ಯವಾದರೆ ಮಾತ್ರ ಅವುಗಳಿಂದ ಅಗತ್ಯವಾದ ಫಲಿತಾಂಶವು ಬರಬಲ್ಲುದು. ಇದು ಬರೇ ಚುನಾವಣಾ ಕಾಲದ ವಾದ ವಿವಾದದಲ್ಲಿ ಮುಗಿಯಬಾರದು. ಬಂಗಾಳದಲ್ಲಿ ಕಾನೂನಿಗೆ ವಿರುದ್ಧವಾಗಿ ಮೂರು ಲಕ್ಷ ಹಿಂದುಳಿದ ಜಾತಿಯ ಪ್ರಮಾಣ ಪತ್ರಗಳು ಅಪಾತ್ರರ ನಡುವೆ ಹಂಚಲಾಯಿತು ಎಂದರೆ, ಇದರಿಂದ ವಂಚಿತರಾದ ಅಮಾಯಕರು ಎಷ್ಟಿರಬಹುದು! ಅವರ ಜೀವನದ ದಾರಿಯನ್ನು ಮುಚ್ಚುವ ಇಂತಹ ಭ್ರಷ್ಟ ರಾಜಕೀಯವು ನಿಲ್ಲುವಂತಾಗುವುದು ತುರ್ತು ವಿಚಾರವಾಗಬೇಕಲ್ಲವೇ?

ಮುಸ್ಲಿಮರಿಗಾಗಿ ಇದ್ದ 4% ಮೀಸಲಾತಿಯನ್ನು 12%ಕ್ಕೆ ಏರಿಸಿದ ರೀತಿಯೂ ಇದೇ ಸಾಲಿನಲ್ಲಿ ಬರುತ್ತದೆ. ಮುಸ್ಲಿಮರ ಜನಸಂಖ್ಯೆ 12% ಇರುವುದರಿಂದ ಅವರಿಗೆ ಸಹಜ ನ್ಯಾಯ ಕೊಡಿಸಿದ ಈ ಅನ್ಯಾಯವು ಮೀಸಲಾತಿಯ ಹಿಂದಿನ ತಾತ್ವಿಕತೆಯನ್ನು ಸಾರಾ ಸಗಟು ಮೂಲೆ ಗುಂಪು ಮಾಡಿದಂತಾಯಿತು. ಪ್ರತಿಯೊಬ್ಬ ಮುಸ್ಲಿಮನಿಗೂ ಮೀಸಲಾತಿಯ ಮಿಠಾಯಿ ಸಿಗುವಂತೆ ಮಾಡಿ ಹಿಂದುಗಳ ಕೈಗಳು ಹಂಚುವ ಬಟ್ಟಲಿನ ಬಳಿಯೂ ಬಾರದಂತಹ ಅನ್ಯಾಯ ನಡೆಯಿತು. ಚುನಾವಣೆಯ ದಿನಗಳಲ್ಲಿ ಇದು ವ್ಯಾಪಕವಾಗಿ ಚರ್ಚೆಯಾಯಿತೇನೋ ನಿಜವೆ. ಆದರೆ ಇದಕ್ಕೆ ನ್ಯಾಯಮಾರ್ಗವಿರುವುದು ಚುನಾವಣಾ ನಂತರದ ದಿನಗಳಲ್ಲಿ.

ಯುವ ವಿದ್ಯಾರ್ಥಿಗಳ ತಾರುಣ್ಯದ ಸಮಸ್ಯೆಗಳ ವಿಚಾರವೂ ಈ ಚುನಾವಣೆಯಲ್ಲಿ ಚರ್ಚಿತವಾಗಬೇಕಾಯಿತು. ವಿದ್ಯಾರ್ಥಿನಿಯರ ಕೊಲೆ. ಹಾಡು ಹಗಲೇ ನೂರಾರು ಮಂದಿಯ ಮುಂದೆ ನಡೆದ ಹೀನಕೃತ್ಯಗಳಲ್ಲಿ ಮತನಂಬಿಕೆಗಳು ಪ್ರಮುಖ ಪಾತ್ರವಹಿಸಿದ್ದವು. ಇದನ್ನು ಯಾವ ನೆಲೆಗಳಲ್ಲಿ ತಡೆಯಬಹುದು ಎನ್ನವುದು ಮುಂದಿನ ದಿನಗಳಲ್ಲಿ ಸಮಾಜ ಶಾಸ್ತ್ರಜ್ಞರು ಮನಃಶಾಸ್ತ್ರಜ್ಞರು ವಿಶ್ಲೇಷಿಸಬೇಕಾದ ವಿಚಾರ. ಮನೆಯ ಹಿರಿಯರು, ಅಧ್ಯಾಪಕರು ಈ ಹರೆಯದ ಮಕ್ಕಳು ಆರೋಗ್ಯಕರ ಜೀವನವನ್ನು ಕಾಣುವಂತೆ ಮಾಡಬೇಕು.

ಸಂವಿಧಾನವನ್ನು ಬದಲಿಸುವುದು ಪ್ರಮುಖವಾಗಿ ಬಂದ ಚುನಾವಣೆಯ ವಿಚಾರ. ಇಲ್ಲಿ ಸಂವಿಧಾನವನ್ನು ಬದಲಿಸುವವರು ಮತ್ತು ಅದನ್ನು ಇದ್ದಂತೆ ಇಡುವೆ ಎನ್ನುವರ ನಡುವೆ ಬೈಗುಳಗಳು ವಿನಿಮಯವಾದುವಲ್ಲದೆ, ಸಂವಿಧಾನವನ್ನು ಬದಲಿಸಬಹುದೇ, ಬದಲಿಸಬೇಕೇ? ಅದು ಹೇಗೆ ಆಗಬೇಕಾಗಬಹುದು ಎಂದು ಚರ್ಚೆಯೇ ನಡೆಯಲಿಲ್ಲ. ಸಂವಿಧಾನ ಮತ್ತು ಏಕತೆಯ ಬಗ್ಗೆ ರಾಜ್ಯ ಸರ್ಕಾರವೊಂದು ವಿಚಾರ ಸಂಕಿರಣವನ್ನು ಏರ್ಪಡಿಸಿತು. ಅದರಲ್ಲಿ ರಾಷ್ಟ್ರದ ಸಮಗ್ರತೆಯನ್ನು ಪ್ರತಿನಿಧಿಸುವ ಸಂವಿಧಾನದ ಬಗ್ಗೆ ಮಾತನಾಡಲು ದೇಶದ ಭಾಗಗಳು ಸ್ವತಂತ್ರಗೊಳ್ಳಬೇಕು ಎಂದು ಪ್ರತಿಪಾದಿಸುವ ವಿದೇಶಿ ಭಾಷಣಗಾರರು ಬಂದಿದ್ದರು.

ಚುನಾವಣೆಗಳು ದೇಶದ ದಿಕ್ಕು ದೆಸೆಗಳನ್ನು ನಿರ್ಧರಿಸುವ ಉಪಕ್ರಮಗಳು. ಇದಕ್ಕೂ ಹೆಚ್ಚಾಗಿ ದೇಶದ ಸಮಗ್ರತೆ, ಕಟ್ಟಕಡೆಯ ವ್ಯಕ್ತಿಗೆ ತಲುಪಬೇಕಾದ ದೇಶದ ಸಂಪನ್ಮೂಲಗಳು, ಸರ್ಕಾರದಿಂದ ಹೊರಟ ರೂಪಾಯಿಯಲ್ಲಿ 100 ಪೈಸೆಗಳೂ ಜನಸಾಮಾನ್ಯನಿಗೆ ಮುಟ್ಟುವ ರೀತಿ, ಎಲ್ಲರು ಪರಸ್ಪರ ಸಮಾನರಾಗಿ ಸ್ವಾಭಿಮಾನಿಗಳಾಗಿ ಜೀವಿಸುವುದು ಮೊದಲಾಗಬೇಕು. ಚುನಾವಣೆ ಮುಗಿದಿದೆ. ಮುಂದೆ ಈ ದಿಕ್ಕಿನಲ್ಲಿ ಎಲ್ಲರ ಗಮನ ಹರಿಯಬೇಕು.

# ಮಹಾಭಾರತ ಮತ್ತು ತತ್ಕಾಲದ ರಾಜನೀತಿ

– ಟಿ.ಎ.ಪಿ.ಶೆಣೈ

ಅದು 2014ರ ಇಸವಿ. ನೆನಪಾಗುತ್ತದೆ; ಅದು ಕತ್ತಲು ಕವಿದ ಭಾರತ. ನಿರಾಶೆ ನಿರುತ್ಸಾಹಗಳೇ ತುಳುಕಾಡುತ್ತಿದ್ದ ಭಾರತ. ಕರಾಳ ಭವಿಷ್ಯವನ್ನು ಊಹಿಸಿ ಕೈಚೆಲ್ಲಿದ ಭಾರತ. 'ಅಚ್ಛೇ ದಿನ' ವನ್ನು ನಿರೀಕ್ಷಿಸಲು ಕೂಡಾ ಅಶಕ್ತವಾದ ಭಾರತ.

ಮಹಾಭಾರತದ ಶಾಂತಿ ಪರ್ವದಲ್ಲೊಂದು ಮಾತು ಬರುತ್ತದೆ. 'ಅರಾಜಕೇಷು ರಾಷ್ಟ್ರೇಷು ಧರ್ಮೋ ನ ವ್ಯವತಿಷ್ಠತೇ' – ರಾಜನಿಲ್ಲದ ದೇಶದಲ್ಲಿ ಧರ್ಮವೂ ಉಳಿಯದು ಎಂದು. ಅಕ್ಷರಶಃ ಭಾರತದ ಸ್ಥಿತಿಯು ಇದೇ ಆಗಿತ್ತು. ಅಲ್ಲೇ ಮುಂದೆ; 'ನಾರಾಜಕೇಷು ರಾಷ್ಟ್ರೇಷು ಹವ್ಯಮಗ್ನಿರ್ವಹತ್ಯುತ' – ರಾಜನಿಲ್ಲದ ದೇಶದಲ್ಲಿ ಅಗ್ನಿಯೂ ಕೂಡಾ ದೇವತೆಗಳಿಗೆ ಹವಿಸ್ಸನ್ನು ಒಯ್ಯುವುದಿಲ್ಲ ಎಂದೂ ಭೀಷ್ಮರು ಹೇಳುತ್ತಾರೆ. ಯಾವುದು ಸಹಜವಾಗಿ ನಡೆಯ ಬೇಕಾಗಿರುವುದೋ ಅದು ಕೂಡಾ ನಿಷ್ಕ್ರಿಯವಾಗುತ್ತದೆ. ಅರಾಜಕ ದೇಶದಲ್ಲಿ. ಹವಿಸ್ಸನ್ನು ಮುಟ್ಟದೇ ದೇವತೆಗಳಿಗೆ ತಲುಪಿಸಬೇಕಾದ ಅಗ್ನಿಯೂ ಇಲ್ಲಿ ಕರ್ತವ್ಯಚ್ಯುತನಾಗುತ್ತಾನೆ. ಅರಾಜಕ ಭಾರತವು ಕೂಡಾ ಆ ದಿನಗಳಲ್ಲಿ ಇದೇ ಸ್ಥಿತಿಯ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿದ್ದಿತು.



## ಭಾರತ – 2014

ದೇಶವನ್ನು ಮುನ್ನಡೆಸಬೇಕಾದವನು ನಗಣ್ಯನೆನಿಸಿದ್ದನು. ಸ್ವಂತ ಜನರಿಂದಲೇ ತಿರಸ್ಕೃತನಾದ ಪ್ರಧಾನಿಯ ಕೈಯಲ್ಲಿ ಭಾರತವಿತ್ತು. 'ಸತ್ಕೃತಂ ಸ್ವಜನೇನೇಹ ಪರೋಪಿ ಬಹುಮನ್ಯತೇ। ಸ್ವಜನೇನ ತ್ವವಜ್ಞಾತಂ ಪರೇ ಪರಿಭವನ್ತ್ಯುತ' ಸ್ವಜನರಿಂದ ಪುರಸ್ಕೃತನಾದವನನ್ನು ಇತರರೂ ಗೌರವಿಸುವರು. ಸ್ವಜನರಿಂದಲೇ ತಿರಸ್ಕೃತನಾದವನನ್ನು ಇತರರೂ ಅನಾದರಿಸುತ್ತಾರೆ. ಇದೂ ಶಾಂತಿ ಪರ್ವದ ಹೇಳಿಕೆ. ಜಪಾನಿನ ಸರಕಾರಿ ಗಣ್ಯರು ಆ ದಿನಗಳಲ್ಲಿ ಭೇಟಿಯಾಗಲು ಬಂದರೆ ಅವರು ತಮ್ಮ ಔಪಚಾರಿಕ ಶುಭಾಶಯಗಳನ್ನು ವಿನಿಮಯ ಮಾಡಿದುದು ಪ್ರಧಾನಿಯೆಂಬ ವ್ಯಕ್ತಿಯನ್ನು ನೇಮಿಸಿದ ಮಹಿಳೆಯೊಂದಿಗೆ! ಜೊತೆಗಿದ್ದ ಪ್ರಧಾನಿಯ ಕಡೆ ಕಣ್ಣೆತ್ತಿಯೂ ನೋಡದ ಸಂದರ್ಭ ಅಲ್ಲಿ ನಡೆಯಿತು. ಅದೇ ಮುಂದೆ ಕೆಲವೇ ವರ್ಷಗಳಲ್ಲಿ ದೇಶದ ಜನರಿಂದ ಪುರಸ್ಕೃತರಾದ ಪ್ರಧಾನಿ ಜಗತ್ತಿನ ಕಣ್ಮಣಿಯೆನಿಸಿದರು.

ಇಂತಹ ಸಂಕಟ ಕಾಲದಲ್ಲಿ ಶಾಂತಿ ಪರ್ವದ ಸಂದೇಶದಂತೆ ಭಾರತ ನಡೆಯಿತು. 'ರಾಷ್ಟ್ರಸ್ಯೈತತ್ಕೃತ್ಯತಮಂ ರಾಜ್ಞ ಏವಾಭಿಷೇಚನಮ್' ದೇಶವಾಸಿ ಪ್ರಜೆಗಳ ಮುಖ್ಯಕರ್ತವ್ಯವೆಂದರೆ ಯೋಗ್ಯನಾದ ರಾಜನಿಗೆ ಪಟ್ಟ ಕಟ್ಟುವುದು. ಎನ್ನುವುದನ್ನು ಭಾರತವು ನಡೆಸಿಕೊಟ್ಟಿತು. 'ರಾಜನಾದವನು ಸಂನ್ಯಾಸಿಯಾಗಬೇಕಾದ ಅಗತ್ಯವಿಲ್ಲ. ಆದರೆ ಯೋಗ್ಯನಾದ ರಾಜನಿಗೆ ಅವನ ಕರ್ತವ್ಯ ನಿರ್ವಹಣೆಯಿಂದ ಸಂನ್ಯಾಸಾಶ್ರಮದ ಪರಮಗತಿಯು ಲಭಿಸುತ್ತದೆ' ಎನ್ನುವ ಮಹಾಭಾರತದ ಆಶ್ವಾಸನೆಯಂತೆ ಆರಿಸಿ ಬಂದ ನಾಯಕನು ನಡೆದು ತೋರಿಸಿದನು.

## ಕಾಲಕ್ಕೆ ಕಾರಣನಾಗುವವನು ದೇಶದ ನಾಯಕ

ನಂತರದ ಒಂದು ದಶಕವು 'ರಾಜನೇ ಕಾಲದ ನಿರ್ಮಾಣಕ್ಕೆ ಕಾರಣನಾಗುತ್ತಾನೆ' ಎನ್ನುವ ಭೀಷ್ಮರ ಮಾತನ್ನು ದೃಢೀಕರಿಸಿತು. ಕಾಲವು ಅನುಕೂಲವಾದರೂ ಅಥವಾ ಅನುಕೂಲವಾಗಿರದಿದ್ದರೂ ಅದಕ್ಕೆ ರಾಜನೇ ಕಾರಣನಾಗುತ್ತಾನೆ. ರಾಜನು ಧರ್ಮಿಷ್ಟನಾಗಿದ್ದರೆ ಕಾಲವೂ ಧರ್ಮಿಷ್ಟವಾಗಿರುತ್ತದೆ. ರಾಜನ ದಂಡನೀತಿಯಲ್ಲಿ ದೋಷವಿಲ್ಲವಾದರೆ, ಅದರ ಪ್ರಭಾವದಿಂದ ಕಾಲವೂ ಧರ್ಮದಿಂದ ಕೂಡಿದ ಕೃತಯುಗವಾಗುತ್ತದೆ. ಈ ಮಾತು ಭಾರತದ ಪಾಲಿಗೆ ನಿಜವಾಯಿತು.

## 'ಲೋಕ ವೇದೋತ್ತರಾಶ್ಚೈವ ಕ್ಷಾತ್ರ ಧರ್ಮೇಸಮಾಹಿತಃ'

ಮಹಾಭಾರತವು ರಾಜಕಾರಣಕ್ಕೆ ನೀಡಿದ ಪ್ರಾಮುಖ್ಯತೆಯು ಸ್ಪಷ್ಟವಾಗಿದೆ. ಶ್ರೇಷ್ಟವಾದ ಲೌಕಿಕವೂ ಹಾಗೂ ವೇದ ಧರ್ಮಗಳೂ ಕ್ಷಾತ್ರಧರ್ಮದಲ್ಲೇ ಅಡಗಿವೆ. ದೇಶದ ಎಲ್ಲಾ ಕರ್ಮಗಳೂ ಕ್ಷಾತ್ರಧರ್ಮವನ್ನೇ ಅವಲಂಬಿಸಿವೆ. ಕ್ಷಾತ್ರಧರ್ಮವು ಅವ್ಯವಸ್ಥಿತವಾದರೆ, ಜಗತ್ತಿಗೆ ಅಶುಭವು ಕಾದಿರುತ್ತದೆ. ಎಲ್ಲ ಧರ್ಮಗಳಿಗಿಂತಲೂ ಕ್ಷಾತ್ರ ಧರ್ಮವು ಲೋಕದಲ್ಲಿ ಶ್ರೇಷ್ಠ–ಲೋಕ ಜ್ಯೇಷ್ಠಂ ಕ್ಷಾತ್ರಧರ್ಮಂ ವದಂತಿ. ಎನ್ನುವ ಭೀಷ್ಮ ನೀತಿಯು 'ಯುದ್ಧದಲ್ಲಿ ದೇಹತ್ಯಾಗ; ಸಮಸ್ತ ಜೀವಿಗಳ ಬಗ್ಗೆ ದಯೆ, ಲೋಕ ವ್ಯವಹಾರ ಜ್ಞಾನ, ಪ್ರಜಾಪಾಲನೆ, ದುಃಖ ಪರಿಹಾರಗಳು ಕ್ಷಾತ್ರ ಧರ್ಮವಾಗಿದ್ದು ಅವು ಉತ್ತಮ ರಾಜನ ಲಕ್ಷಣವೆನಿಸುತ್ತದೆ. – ಆತ್ಮತ್ಯಾಗ: ಸರ್ವಭೂತಾನುಕಂಪಾ, ಲೋಕ ಜ್ಞಾನಂ, ಪಾಲನಂ – ಇದು 2014 ರಲ್ಲಿ ಆರಿಸಿ ಬಂದವರ ಲಕ್ಷಣವಾದರೆ ವಿರೋಧಿಗಳು ಈ ಗುಣಗಳಿಗೆ ತದ್ವಿರುದ್ಧವಾಗಿದ್ದರು.

ಕಳೆದ ಒಂದು ದಶಕದ ಅವಲೋಕನವು ಮಹಾಭಾರತವು ನಿರೀಕ್ಷಿಸುವ ರಾಜನ ವರ್ತನೆಗಳನ್ನು ಉಲ್ಲೇಖಿಸುತ್ತದೆ. ರಾಜನು ಕ್ಷಮಾವಂತನಾಗಿದ್ದರೆ, ಆಚಾರ್ಯರನ್ನು ಗೌರವಿಸುವವನಾಗಿದ್ದರೆ, ಉಪಾಧ್ಯಾಯರನ್ನು ವಿನಯದಿಂದ ಕಾಣುವಂತನಾಗಿದ್ದರೆ, ಅವನಿಗೆ ಶುದ್ಧ ಸಂನ್ಯಾಸ ಧರ್ಮವನ್ನು ಪಾಲಿಸಿದವರಿಗೆ ಬರುವ ಫಲವು ದೊರಕುತ್ತದೆ ಎಂದು ಅದು ಆಶ್ವಾಸನೆಯನ್ನು ನೀಡುತ್ತದೆ. 'ಸಾಧೂನಾಂ ಅರ್ಚನೀಯನಾಂ ಪೂಜಾ ಸುವಿದಿರಾತ್ಮನಾಮ್। ಎನ್ನುವುದನ್ನು ನಾವು ಕಣ್ಣಾರೆ ಕಂಡೆವು. ರಾಷ್ಟ್ರಾಧ್ಯಕ್ಷರ ಭವನದಲ್ಲಿ ಆಚಾರ್ಯರಿಗೆ, ಸಂನ್ಯಾಸಿಗಳಿಗೆ ಪ್ರವೇಶ ದೊರಕಿದುದು ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದ ಕಾಲದಲ್ಲಿ. ನಂತರ ಭವನದ ಬಾಗಿಲು ಸಾಧು ಮಹಂತರಿಗೆ ತೆರೆದಿರಲಿಲ್ಲ. ಆದರೆ ಈ ಹತ್ತು ವರ್ಷಗಳಲ್ಲಿ ಪ್ರಧಾನಿಯವರ ನಿವಾಸಕ್ಕೆ ಸಾಧು ಸಂತರು ಬಂದು ಅವರೊಡನೆ ಸಮಾಲೋಚನೆಯನ್ನು ನಡೆಸುತ್ತಿರುವುದನ್ನು ಕಂಡೆವು. ಪೇಜಾವರ ಶ್ರೀಗಳ

ಕೃಶಕೈಗಳನ್ನು ಹಿಡಿದುಕೊಂಡ ಪ್ರಧಾನಿ ಅವರನ್ನು ವಿನಯದಿಂದ ಕರೆದುಕೊಂಡು ಅವರ ಆಸನದಲ್ಲಿ ಕುಳ್ಳಿರಿಸುವ ಪ್ರಸಂಗವನ್ನು ನಾವು ಕಂಡೆವು. ಅದುವೆ; ಇನ್ನೊಂದು ಕಡೆ ತನಗೆ ಪಾಠ ಕಲಿಸಿದ ಗುರುಗಳು ತನ್ನ ಕಾಲಿಗೆ ನಮಸ್ಕರಿಸುವಾಗ ಆತನು ಪಡುವ ಸಂತೋಷವನ್ನು ಕಾಣುವ 'ಸೌಭಾಗ್ಯವೂ' ನಮ್ಮದಾಯಿತು. ಹಿರಿಯ ಸಾಹಿತಿಗಳು ಕನ್ನಡದ ಕುರಿತು ಪತ್ರವನ್ನು ನೀಡಲೆಂದು ಬಂದಾಗ ಅದೇ ಮುಖ್ಯ ಮಂತ್ರಿಯು ಎದ್ದು ನಿಲ್ಲದೆ ಕಾಲು ಚಾಚಿ ಕೂತು; ಬಂದವರನ್ನು ನಿಕೃಷ್ಟವಾಗಿ ಕಂಡ ದೃಶ್ಯವೂ ನಮ್ಮ ಮುಂದೆ ಬಂದಿತ್ತು.

ಮೊದಲ ಬಾರಿಗೆ ಸಾಮಾನ್ಯರಂತೆ ಕಂಡ ಅಸಾಮಾನ್ಯರು ರಾಷ್ಟ್ರಾಧ್ಯಕ್ಷರ ದರ್ಬಾರ್ ಸಭಾಂಗಣದಲ್ಲಿ ಪ್ರಶಸ್ತಿ ಪುರಸ್ಕೃತರಾಗಿ ಬಂದ ಅದ್ಭುತ ದೃಶ್ಯ 2014ರ ನಂತರ ನಡೆಯಿತು. ಸಾಲುಮರದ ತಿಮ್ಮಕ್ಕರು ರಾಷ್ಟ್ರಾಧ್ಯಕ್ಷರ ತಲೆಯ ಮೇಲೆ ಕೈಯಿಟ್ಟು ಮನಸಾರೆ ಆಶೀರ್ವದಿಸಿದುದು ಹಿಂದೆಂದು ಕಂಡರಿಯದ ಪ್ರಸಂಗವಾಗಿದ್ದಿತು. ರಾಜನಾದವನು ವೃದ್ಧರಿಗೂ ಬಾಲಕರಿಗೂ ನೋವಾಗದಂತೆ ವರ್ತಿಸಬೇಕೆಂದು ಮಹಾಭಾರತವು ವಿಧಿಸುತ್ತದೆ. ಇದನ್ನೂ ನಾವು ಕಂಡೆವೇನು? ವಿಶಾಲ ಜನಸಮುದ್ರವೇ ಸೇರಿದ ಬಹಿರಂಗ ಸಭೆಯಲ್ಲಿ ತನ್ನ ಮಾತನ್ನು ಕೇಳಲೆಂದು ಬಂದು ಆಸನ ಸಿಗದಿದ್ದರೂ ತದೇಕ ಮನಸ್ಸಿನಿಂದ ನಿಂತ ವಯೋವೃದ್ಧೆಯೊಬ್ಬರಿಗೆ ಆಸನವೊಂದನ್ನು ಕೊಡಮಾಡಿದ ಪ್ರಧಾನಿ, ತನ್ನ ಭಾವಚಿತ್ರವನ್ನು ಬರೆದ ಬಾಲಕಿಯ ಬಳಿಯ ಆ ಚಿತ್ರವನ್ನು ಬಹಿರಂಗ ಸಭೆಯಲ್ಲಿ ಕಂಡು ಅದನ್ನು ತನಗೆ ತಲುಪಿಸುವಂತೆ ತನ್ನ ಭದ್ರತಾ ಸಿಬ್ಬಂದಿಗೆ ಆದೇಶ ನೀಡಿದುದು, ಈ ಹತ್ತು ವರ್ಷಗಳಲ್ಲಿ ಕಂಡ ಸಾಮಾನ್ಯ ಘಟನೆಗಳಾದವು. ಅವರೆಲ್ಲರಿಗೂ ತಮ್ಮ ಸ್ವಹಸ್ತಾಕ್ಷರದ ಪತ್ರ ಬರೆಯುವ ವಿನಯವಂತಿಕೆಯನ್ನು ಅನುಭವಿಸುವವರು ತಮ್ಮ ವ್ಯಕ್ತಿತ್ವವನ್ನು ಅದೇ ರೀತಿ ರೂಪಿಸಿಕೊಂಡರೆ ಆಶ್ಚರ್ಯವಿಲ್ಲ. ಯಾವ ರಾಜನು ಬಾಲಕರ ಮತ್ತು ವೃದ್ಧರ ವಿಚಾರಗಳಲ್ಲಿ ದಯಾಪೂರ್ಣನೋ ಅವನಿಗೆ ಎಲ್ಲಾ ಆಶ್ರಮಗಳನ್ನು ಪಾಲಿಸಿದವನ ಪುಣ್ಯ ಫಲವು ದೊರಕುತ್ತದೆ ಎಂದು ಶಾಂತಿ ಪರ್ವವು ಹೇಳುತ್ತದೆ.

## ಲೋಕ ಮರ್ಯಾದೆ

ಯಾವ ರಾಜನು ತನ್ನ ಪ್ರಜೆಗಳ ಸ್ಥಾನಮಾನಗಳನ್ನೂ, ಅವರ ವಯಸ್ಸಿಗೂ ತಕ್ಕ ಗೌರವಗಳನ್ನು ಕೊಟ್ಟು ಸನ್ಮಾನಿಸುವನೋ ಅಂತಹ ರಾಜನು ಜೀವನದ ಎಲ್ಲಾ ಆಶ್ರಮಗಳಲ್ಲಿ ಗೈದ ತಪಸ್ಸಿನ ಪೂರ್ಣ ಫಲವನ್ನು ಪಡೆಯುತ್ತಾನೆ. 'ಸ್ಥಾನಮಾನಂ ವಯೋಮಾನಂ ತಥೈವಚ' ಎನ್ನುವ ಮಾತು ಅದಕ್ಕಾಗಿಯೇ ಬಂದಿದೆ. ಕರ್ನಾಟಕದ ವಯೋವೃದ್ಧರೊಬ್ಬರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದುದಲ್ಲದೆ ಮಾಜಿ ಪ್ರಧಾನಿಗಳೂ ಆಗಿದ್ದವರು. ಅವರು ಭೇಟಿಯಾಗಲು ಬಂದಾಗಲೆಲ್ಲ ಅವರನ್ನು ತಾವೇ ಸ್ವತಃ ಅನುಚರಿಸುವ ಶ್ರಮವನ್ನು ದೇಶದ ಪ್ರಧಾನಿ ವಹಿಸಿದ್ದರು. ಅದುವೇ ಹಿಂದೊಮ್ಮೆ ಪ್ರಧಾನಿಯಾಗಿದ್ದವರು ರಾಜ್ಯದ ಮುಖ್ಯಮಂತ್ರಿಯೊಬ್ಬರು ಹೆಲಿಕಾಪ್ಟರಿನಲ್ಲಿ ತಮ್ಮೊಡನೆ ಪ್ರಯಾಣ ಮಾಡಲು ಉದ್ದೇಶಿಸಿದುದನ್ನು ತಡೆಯಲು ಅವರನ್ನು ಹೊರಗೆ ತಳ್ಳಿ ಬಿಟ್ಟಿದ್ದರು.

ಲೋಕ ಮರ್ಯಾದೆಯನ್ನು ಮೀರಿ ನಡೆಯುವವರು ರಾಜರ ಭಯದಿಂದ ಪಾಪಕಾರ್ಯಗಳನ್ನು ಮಾಡುವುದಿಲ್ಲ. 'ನಿಮರ್ಯಾದಾ: ಕಾಮ ಮನ್ಯುಪ್ರವೃತ್ತಾ ಭೀತಾ

ರಾಜ್ಞೋನಾಧಿಗಚ್ಛಂತಿ ಪಾಪಮ್' ಎನ್ನುತ್ತದೆ ಮಹಾಭಾರತ. ಇಂದಿನ ಬುಲ್ಡೋಜರ್ ಶಿಕ್ಷೆಯ ಭಯವೆಂದರೆ ಅಂದಿನ ಮಹಾಭಾರತದ ಶಾಸನದ ಸ್ಥಿತಿಯಿದ್ದಿರಬೇಕು.

ತನ್ನ ದೇಶದಲ್ಲಿ ಪರಿಪೂರ್ಣನಾದ ಮತ್ತು ಅವರೆಲ್ಲರ ಪ್ರೀತಿ ಗೌರವಗಳನ್ನು ಹೊಂದಿದ ರಾಜನನ್ನು ಪಕ್ಕದ ರಾಜ್ಯದ ಜನರು ತಮ್ಮ ಸ್ಥಿತಿಯನ್ನು ಅವನ ರಾಜ್ಯದೊಂದಿಗೆ ಹೋಲಿಸುತ್ತದೆ. ಅಂತಹ ಸಂದರ್ಭದಲ್ಲಿ ತಮಗಿಂತ ಆ ರಾಜ್ಯದ ಸ್ಥಿತಿಗತಿಗಳೇ ಉತ್ತಮವಿದೆ ಎಂದು ಕಂಡುಕೊಳ್ಳುತ್ತಾರೆ. ಅಂತಹ ಕಾಲ ಘಟ್ಟದಲ್ಲಿ ಜನಪ್ರಿಯ ರಾಜನು ತಮ್ಮ ರಾಜ್ಯವನ್ನು ಆಕ್ರಮಿಸಲಿ ಎಂದು ಆಶಿಸುತ್ತಾರೆ. ಇಂದು ಪಾಕ್ ಆಕ್ರಮಿತ ಕಾಶ್ಮೀರದ ಪ್ರಜೆಗಳು ಬಯಸುವುದು ಇದನ್ನೇ ಇರಬೇಕು.

ಒಂದು ವೇಳೆ ರಾಜನು ವಣಿಕರ ಮತ್ತು ವ್ಯಾಪಾರಿಗಳ ಲಾಭನಷ್ಟಗಳನ್ನು ಉಪೇಕ್ಷಿಸಿ ಅವರಿಂದ ಹೆಚ್ಚಿನ ತೆರಿಗೆಯನ್ನು ವಿಧಿಸಿ ಪೀಡಿಸಿದರೆ ಅವರು ದೇಶವನ್ನೇ ಬಿಟ್ಟು ಇನ್ನೊಂದು ದೇಶವನ್ನು ಆಶ್ರಯಿಸುತ್ತಾರೆ. ರಾಜನು ಹಾಗಾಗಲು ಬಿಡಬಾರದು. ಅವರು ವ್ಯವಹಾರಗಳನ್ನು ನಡೆಸಲು ಮತ್ತು ಧನವಂತರಾಗಲು ನೆರವಾಗಬೇಕು. ಇದು ಭೀಷ್ಮರು ರಾಜನಿಗೆ ನೀಡುವ ಆದೇಶ. ಈ ದಿನಗಳ ಪರಿಸ್ಥಿತಿಯಲ್ಲಿ ಇದರ ಮಹತ್ವವು ಇನ್ನೂ ಹೆಚ್ಚು. ಹತ್ತು ವರ್ಷಗಳ ಹಿಂದೆ ಭಾರತದಲ್ಲಿ ಪ್ರಾಮಾಣಿಕನಾಗಿದ್ದರೆ, ವಾಣಿಜ್ಯ ವ್ಯವಹಾರಗಳನ್ನು ನಡೆಸುವುದು ಕಷ್ಟವೆನ್ನುವ ಮಾತು ಕೇಳಬರುತ್ತಿತ್ತು. ವಿದೇಶಿ ಬಂಡವಾಳಗಾರರು; ಹಾಕಿದ ಬಂಡವಾಳವು ಸಿಕ್ಕಿದರೆ ಸಾಕು ಭಾರತ ಬಿಟ್ಟು ಹೋಗೋಣ ಎನ್ನುವ ಪರಿಸ್ಥಿತಿಯಿದ್ದಿತು. ಆದರೆ ಇಂದು ಜಗತ್ತಿನಲ್ಲಿ ಉತ್ತಮ ವ್ಯಾಪಾರ ಪರಿಸರವಿರುವುದು ಭಾರತದಲ್ಲಿ ಎಂದಾಗಿದೆ.

## ಭವತ್ ಅಗ್ನಿಸ್ತಥಾದಿತ್ಯೋ ಮೃತ್ಯುರ್ವೈ ಶ್ರವಣೋಯಮಃ

ರಾಜನು ಐದು ರೂಪಗಳಲ್ಲಿ ಕಾರ್ಯವೆಸಗುತ್ತಾನೆ ಎಂದು ಭೀಷ್ಮರು ಯುಧಿಷ್ಟರನಿಗೆ ಹೇಳುತ್ತಾರೆ. ಅಗ್ನಿಯಾದ ರಾಜನು ಸೂರ್ಯನಾಗಬಲ್ಲ. ಮೃತ್ಯುವೂ ಆಗಬಲ್ಲ. ಕುಬೇರನಾಗುತ್ತಾನೆ. ಯಮಧರ್ಮನೂ ಆಗುತ್ತಾನೆ. ಇದನ್ನೇ ವಿಸ್ತರಿಸುತ್ತಾ ಅವರು ಗೂಢಚಾರಿಗಳ ಮೂಲಕ ರಾಜ್ಯವನ್ನು ನಿರೀಕ್ಷಿಸುವ ರಾಜನು ಸೂರ್ಯನಾಗುತ್ತಾನೆ. ಕೋಪಗೊಂಡ ರಾಜನು ದುರಾಚಾರಿಗಳನ್ನು ಶತ್ರುಗಳನ್ನು ಸಂಹರಿಸುವಾಗ ಮೃತ್ಯುವೇ ಆಗಿ ಬಿಡುತ್ತಾನೆ. ಅಧರ್ಮಿಷ್ಟರನ್ನು ಶಿಕ್ಷೆಯ ಮೂಲಕ ಸನ್ಮಾರ್ಗಕ್ಕೆ ತರುವಾಗ ಆಗ ಅವನು ಯಮಧರ್ಮನಾಗುತ್ತಾನೆ. ತನ್ನ ಭುಜಬಲ ಬುದ್ಧಿಶಕ್ತಿಯಿಂದ ದೇಶದ ಹಿತಚಿಂತನೆಗೆ ಸಿರಿಯನ್ನು ತುಂಬಿತರುವನೋ ಆಗ ಆತನು ಕುಬೇರನೇ ಎಂದು ಹೇಳುತ್ತಾರೆ. ಭಾರತದ ಈಗಿನ ವಿಚಾರಗಳು ಆಗಿನ ಮಹಾಭಾರತದ ಚಿಂತನೆಯ ಧಾಟಿಯಲ್ಲೇ ಮುಂದುವರಿಯುತ್ತಿದೆ ಎಂದು ಹೇಳಬಹುದು.

ಜಗತ್ತಿನ ದೇಶಗಳ ನಡುವೆ ಒಂದು ಹೆಜ್ಜೆ ಮುಂದಿಡುತ್ತಿರುವ ಭಾರತದ ಕಳೆದ ಪರಿಸ್ಥಿತಿಗೂ ಇಂದಿನ ರೀತಿಗೂ ಇರುವ ವ್ಯತ್ಯಾಸವನ್ನು ಮನಗೊಂಡು ಬರೆದ ಬರಹವಿದು. ಹಿಂದುಗಳು ಪರಮಾರ್ಥದ ಆಸಕ್ತರು. ಲೌಕಿಕ ವ್ಯವಹಾರದಲ್ಲಿ ದಕ್ಷತೆ ಇಲ್ಲದವರು. ಎಂದು ಆಪಾದಿಸುವ ಸ್ಥಿತಿಯನ್ನು ಹೋಗಲಾಡಿಸಿದ ಭಾರತವಿಂದು ನಮ್ಮದು.

# ಮಹಾರಾಣಾ ಪ್ರತಾಪಸಿಂಹ 1540–1597

ಮಹಾರಾಣಾ ಜನನ. ಜ್ಯೇಷ್ಠ ಶುಕ್ಲ ತದಿಗೆ ಅಂದರೆ ಮೇ ತಿಂಗಳ 9ನೇ ತಾರೀಕು. ದೇಶ ಮತ್ತು ಧರ್ಮಕ್ಕಾಗಿ ಪ್ರಾಣವನ್ನು ಕಸವಾಗಿ ಕಂಡ ಹೆಂಗಸರು, ಮಕ್ಕಳು, ಹಾಗೂ ಸೈನಿಕರ ಉದಾಹರಣೆ ಭಾರತವನ್ನು ಬಿಟ್ಟರೆ ಬೇರೆ ಯಾವ ದೇಶದಲ್ಲಿಯೂ ಇಲ್ಲ. ಅದಾವ ಮೌಲ್ಯವು ಅವರನ್ನು ಪ್ರೇರಿಸಿತ್ತೋ? ಆದರೆ ಈ ಉದಾತ್ತಮೌಲ್ಯಕ್ಕೆ ಸರಿಯಾದ ಮಾರ್ಗ ಸಿಗಲಿಲ್ಲವೆಂಬುದನ್ನು ಬಿಟ್ಟರೆ, ಇಂಥ ಲೋಕೋತ್ತರವಾದ ಮೌಲ್ಯದಲ್ಲಿ ಯಾವುದೇ ದೋಷವಿಲ್ಲ.

ಮುಸಲ್ಮಾನರು ನಮ್ಮ ದೇಶದಲ್ಲಿ ಗೆದ್ದದ್ದು ಪರಾಕ್ರಮದಿಂದಲ್ಲ, ಬದಲಾಗಿ ರಣತಂತ್ರ ಮತ್ತು ಕುತಂತ್ರಗಳಿಂದ. ಇದನ್ನು ಅನುಸರಿಸಿದರೆ ನಮಗೆ ಸೋಲೇ ಇರುತ್ತಿರಲಿಲ್ಲ. ಹೀಗಾಗಿ ಕೃಷ್ಣ–ಕೌಟಿಲ್ಯರು ಎತ್ತಿಹಿಡಿದ ಕ್ಷಾತ್ರಮೌಲ್ಯವೇ ಅತಿ ಮಿಗಿಲಾದುದು.

ಈ ಪರಂಪರೆಯ ಜಾಜ್ವಲ್ಯಮಾನ ರತ್ನವೇ ಮಹಾರಾಣಾ ಪ್ರತಾಪಸಿಂಹ. ಉದಯಸಿಂಹನ ಇಪ್ಪತ್ತೂರು ಮಕ್ಕಳಲ್ಲಿ ಇವನು ಮೊದಲನೆಯವನು. ಇವನು ಹುಟ್ಟಿದ್ದು ಕುಂಬಳಗಢದಲ್ಲಿ, ಇವನು ಜನಿಸಿದ್ದು ಮಹಾಶೂರರು ಮೈದಳೆದ ಶಿಶೋಧಿಯಾವಂಶದಲ್ಲಿ. ಇವರ ಕುಲದೈವ ಏಕಲಿಂಗಸ್ವಾಮಿ. ಇವನಂತೂ ಬಾಲ್ಯದಿಂದಲೇ ಪರಮಪರಾಕ್ರಮಿ,

ಕ್ರಿ.ಶ. ಸಾವಿರದೈನೂರ ಎಪ್ಪತ್ತೆರಡರಲ್ಲಿ ಉದಯಸಿಂಹನ ಅಂತ್ಯವಾದಾಗ ಅವನ ಪ್ರೀತಿಯ ಕಿರಿಯ ರಾಣಿಯ ಮಗ ಜಗಮಲ್ಲನು ರಾಜನಾದ. ಆದರೆ ಜನರು ಒಕ್ಕೊರಲಿನಿಂದ ಅದನ್ನು ವಿರೋಧಿಸಿದ್ದಕ್ಕೆ ಅಂಜಿ ಅವನು ಪಲಾಯನ ಮಾಡಬೇಕಾಯಿತು.

ಮುಂದೆ ಜಯಮಲ್ಲನು ತನ್ನ ಸಹೋದರರನ್ನು ಕಟ್ಟಿಕೊಂಡು ಅಕ್ಬರನ ಪರವಾಗಿ ನಿಂತ. ಅವರಲ್ಲಿ ಮುಖ್ಯನಾದವನು ಶಕ್ತಿಸಿಂಹ. ಈತನು ಸತ್ತಾಗ ಪ್ರತಾಪಸಿಂಹನು, "ಒಬ್ಬ ದುಷ್ಟ, ಹೇಡಿ ಸತ್ತ. ಅದಕ್ಕಾಗಿ ಯಾರೂ ದುಃಖ ಪಡಬೇಕಾಗಿಲ್ಲ" ಎಂದಿದ್ದ. ಪ್ರತಾಪಸಿಂಹನಿಗಿದ್ದ ಆಸೆಯೊಂದೇ: ತಾನು ಚಿತ್ತೋಡವನ್ನು ಮರಳಿ ಪಡೆದುಕೊಳ್ಳಬೇಕು. ಏಕೆಂದರೆ ಅದು ಮೇವಾಡದ ಹೃದಯ. ಅವನು ಪರಿಪರಿಯಾಗಿ ಸೆಣಸಾಡಿ ಮೂವತ್ತೇಳು ದುರ್ಗಗಳನ್ನು ವಶಪಡಿಸಿಕೊಂಡನಾದರೂ ಚಿತ್ತೋಡವನ್ನು ಇನ್ನೂ ವಶಪಡಿಸಿಕೊಳ್ಳಲಾಗಲಿಲ್ಲ. ಚಿತ್ತೋಡಗಢವನ್ನು ಪಡೆಯುವವರೆಗೂ ಹಾಸಿಗೆಯ ಮೇಲೆ ಮಲಗುವುದಿಲ್ಲ. ತಟ್ಟೆಯಲ್ಲಿ ಊಟ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಚಾಪೆಯ ಮೇಲೇ ಮಲಗಿ ಎಲೆಯಲ್ಲಿ ಉಣ್ಣುತ್ತಿದ್ದ. ತನ್ನ ಮಗ ಅಮರಸಿಂಹನಿಗೂ ಸಹ ಚಿತ್ತೋಡವೇ ತಮ್ಮ ಗುರಿಯಾಗಬೇಕೆಂದು ಹೇಳಿದ್ದ. ಇವನು ವಶಪಡಿಸಿಕೊಳ್ಳಲಾಗದ ಮೂರು ದುರ್ಗಗಳಲ್ಲಿ ಚಿತ್ತೋಡವೂ ಒಂದು. ಇವನ ವಂಶಸ್ಥರು ಇಂದೂ ಸಹ ತಮ್ಮ ತಟ್ಟೆಯ ಕೆಳಗೆ ಎಲೆಯನ್ನು ಹಾಕಿಕೊಳ್ಳುತ್ತಾರೆ ಹಾಸಿಗೆಯ ಕೆಳಗೆ ಚಾಪೆಯನ್ನು ಹಾಸಿಕೊಳ್ಳುತ್ತಾರೆ.

ಇತಿಹಾಸವು ಎಂಥ ಅನ್ಯಾಯ ಮಾಡಿದೆಯೆಂದರೆ ಪ್ರತಾಪಸಿಂಹನು ಕೇವಲ ಹಳದಿಘಾಟಿಯ ಯುದ್ಧದಲ್ಲಿ ಸೋತನೆಂದು ಹೇಳಿದ್ದನ್ನು ಬಿಟ್ಟರೆ ಇನ್ನುಳಿದಂತೆ ಇವನ ಪರಾಕ್ರಮದ ಬಗೆಗೆ ಸ್ವಲ್ಪವೂ ಬೆಳಕು ಚೆಲ್ಲಲಿಲ್ಲ. ಶೀತಲ್ ಎಂಬ ಕವಿಯು ಪ್ರತಾಪಸಿಂಹನ ಮೇಲೆ ಒಂದು ಕವಿತೆಯನ್ನು ಹಾಡಿದ. ಮಹಾರಾಣಾ ಇದನ್ನು ಆಲಿಸಿ ತುಂಬಾ ಸಂತೋಷಪಟ್ಟು ತನ್ನ ಮುಂಡಾಸನ್ನೇ ಬಹುಮಾನವಾಗಿ ಕೊಟ್ಟನು. ಆ ಬಳಿಕ ಶೀತಲ್ ಯಾವುದೇ ಆಸ್ಥಾನಕ್ಕೆ ಕವಿಗಾಯಕನಾಗಿ ಹೋದರೂ ತನ್ನ ತಲೆಯ ಮೇಲಿದ್ದ ಪ್ರತಾಪಸಿಂಹನ ಮುಂಡಾಸನ್ನು ತೆಗೆದು ಪಕ್ಕಕ್ಕಿಟ್ಟು ಆ ಬಳಿಕವೇ ತಲೆಬಾಗಿಸುತ್ತಿದ್ದನಂತೆ. ಇದಕ್ಕೆ ಕಾರಣ ಪ್ರತಾಪಸಿಂಹನ ಮುಂಡಾಸು ಯಾರ ಮುಂದೆಯೂ ತಲೆಬಾಗಬಾರದೆಂದು! ಮಹಾರಾಣನ ಬಗೆಗೆ ಆ ಮಹಾಜನತೆಗಿದ್ದ ಅಭಿಮಾನ ಈ ತೆರನಾದುದು.

ಅಕ್ಬರನು ಪ್ರತಾಪಸಿಂಹನನ್ನು ಗೆಲ್ಲಲಾಗಲಿಲ್ಲವಲ್ಲ ಎಂಬ ಕೊರಗಿನಿಂದ ತನ್ನ ಬದುಕಿನ ಕೊನೆಯ ವರ್ಷಗಳಲ್ಲಿ ಹಾಸಿಗೆ ಹಿಡಿದ. ಅವನ ಮಗ ಸಲೀಂ ಬೇರೆ ಬಂಡೆದ್ದುಬಿಟ್ಟಿದ್ದ! ಈ ಕೊರಗೂ ಸೇರಿಕೊಂಡು ಅವನು ಕಡೆಗೆ ತೀರಿಕೊಂಡನು. ಅಕ್ಬರ್‌ನಿಗೂ ಸಹ ಕೇವಲ ತನ್ನ ಅಧಿಕಾರದಿಂದ ಯಾವುದೇ ಹಿಂದೂರಾಜನನ್ನು ಹಿಡಿತದಲ್ಲಿಟ್ಟುಕೊಳ್ಳಲಾಗಲಿಲ್ಲವೆಂದ ಬಳಿಕ ಉಳಿದ ಮುಸ್ಲಿಮ್ ದೊರೆಗಳ ಪಾಡೇನು?



ಸುಮಾರು ಎರಡು ಲಕ್ಷ ಸೈನಿಕರ ಜೊತೆ ಅಕ್ಬರ್ ಹಳದೀಘಾಟಿಗೆ ಬಂದನು. ಅಲ್ಲಿಗೆ ಬರುವ ಮುನ್ನ ತನ್ನ ಸ್ವಾಮ್ಯವನ್ನು ಒಪ್ಪುವಂತೆ ಮಾನಸಿಂಹನ ಮುಖಾಂತರ ಮಹಾರಾಣನಿಗೆ ಹೇಳಿ ಕಳಿಸಿದ. ಆದರೆ ಪ್ರತಾಪಸಿಂಹನು "ನಿನ್ನಂತೆ ನಾನು ಅಕ್ಬರನಿಗೆ ತಲೆಬಾಗುವುದಿಲ್ಲ"ವೆಂದು ಮಾನಸಿಂಹನಿಗೇ ಹೇಳಿಕಳುಹಿಸಿದ. ಅಕ್ಬರನಂತೂ "ನಿನ್ನ ಮಗನನ್ನು ಸರದಾರನನ್ನಾಗಿ ಮಾಡುತ್ತೇನೆ, ನನ್ನ ಪ್ರತಿನಿಧಿಯಾಗಿ ನೀನು ನಿನ್ನ ಊರಿನಲ್ಲಿರು" ಎಂದು ಪ್ರತಾಪಸಿಂಹನಿಗೆ ಹೇಳಿದಾಗಲೂ ಎಲ್ಲ ಬಗೆಯ ರಾಜೀಸೂತ್ರಗಳನ್ನು ಮಹಾರಾಣ ತಿರಸ್ಕರಿಸಿದ. ಕೇವಲ ಇಪ್ಪತ್ತರಿಂದ ಇಪ್ಪತ್ತೇಳು ಸಾವಿರ ಸೈನಿಕರನ್ನಿಟ್ಟುಕೊಂಡು ಯುದ್ಧ ಮಾಡಬೇಕಾಯಿತು. ಹಳದೀಘಾಟ್ ತುಂಬ ಇಕ್ಕಟ್ಟಾದ ಕಣಿವೆಯ ಪ್ರದೇಶ. ಪ್ರತಾಪಸಿಂಹನು ಬಲವಾಗಿ ಹೋರಾಡಿದರೂ ಸೋಲಾಯಿತು. ಇದಾದ ಬಳಿಕ ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಆತನು ಬದುಕಿದ್ದ. ಆದರೆ ಸೋತವನಿವನೆಂದು ಯಾರೊಬ್ಬರೂ ಅಪಮಾನ ಮಾಡಲಿಲ್ಲ.

ಜಾಲಪ್ರಾಂತದ ರಾಜಾ ಮಾನಸಿಂಹನು ಪ್ರತಾಪಸಿಂಹನ ಮುತ್ತಿನ ಕಿರೀಟವನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡು ಪ್ರತಾಪಸಿಂಹನಿಗೆ ತನ್ನ ಕುದುರೆ ಚೇತಕ್ ಜೊತೆ ರಣರಂಗದಿಂದ ಪಲಾಯನ ಮಾಡಲು ಅನುವು ಮಾಡಿಕೊಟ್ಟನು. ಇವನನ್ನೇ

ಪ್ರತಾಪಸಿಂಹನೆಂದು ಭ್ರಮಿಸಿ ಅಕ್ಬರನ ಸೈನಿಕರು ಮುಗಿಬಿದ್ದು ಕೊಂದರು. ರಾಣಾ ಪ್ರತಾಪನು ಉದಯಪುರದವರೆಗೂ ಕ್ಷೇಮವಾಗಿ ಬಂದ. ಚೇತಕ್ ಅವನನ್ನು ಕಾಪಾಡಿಕೊಂಡು ಬಂದು ಬಳಲಿಕೆಯಿಂದ ಸತ್ತುಹೋಯಿತು. ಅದಕ್ಕಾಗಿಯೇ ಸಮಾಧಿ ಮತ್ತು ಉದ್ಯಾನಗಳನ್ನು ಕಟ್ಟಿಸಿ ದುಃಖಿಸಿದ ಪ್ರತಾಪಸಿಂಹ.

ಹಳದೀಘಾಟಿಯುದ್ಧದ ಬಳಿಕ ಪ್ರತಾಪಸಿಂಹನು ತನ್ನ ರಣತಂತ್ರವನ್ನು ಬದಲಿಸಿಕೊಂಡು ಕುಂಬಳಗಢದಲ್ಲಿ ನೆಲೆನಿಂತನು. ಭಿಲ್ಲರನ್ನು ಸೇರಿಸಿಕೊಂಡು ಅಜಯ್ಯವಾದ ಸೇನೆಯನ್ನೂ ರೂಪಿಸಿ, ತನ್ಮೂಲಕ ಅಕ್ಬರನನ್ನು ಕೊನೆಯ ಇಪ್ಪತ್ತು ವರ್ಷಗಳಲ್ಲಿ ಒದ್ದಾಡಿಸಿಬಿಟ್ಟನು; ಮೂವತ್ತೇಳು ಕೋಟೆಗಳನ್ನೂ ಗೆದ್ದನು. ಮೇವಾಡದಲ್ಲಿ ಜನರು ಸ್ವಪ್ರೇರಣೆಯಿಂದ ಅಕ್ಬರ್ ಮತ್ತು ಅವನ ಪ್ರತಿನಿಧಿಗಳಿಗೆ ಕಾಲಿಡಲು ಬಿಡಲಿಲ್ಲ; ಯಾವುದೇ ದವಸ-ಧಾನ್ಯವನ್ನೂ ಬೆಳೆಯದೆ ಭೂಮಿಯನ್ನೇ ಬರಡು ಮಾಡಿದರು.

ಪ್ರತಾಪಸಿಂಹನು ತನ್ನ ಕೊನೆಗಾಲದಲ್ಲಿ ಶರಣಾಗತಿಯ ಪತ್ರವನ್ನು ಬರೆದಿದ್ದನೆಂದು ಕೆಲವರು ಶಂಕಿಸಿದ್ದರು. ಆದರೆ ಅದಾವುದೂ ದೃಢಪಟ್ಟಿಲ್ಲ. ಅವನು ಚಿತ್ತೋಡಗಢವನ್ನು ಪಡೆಯಲೆಂದೇ ಬದುಕಿದ, ಹೋರಾಡಿದ, ಮಡಿದ. ಅವನ ಮಗ ಅಮರಸಿಂಹನೂ ತಂದೆಯ ಹೋರಾಟವನ್ನು ಮುಂದುವರಿಸಿದ.

ಮಹಾರಾಣನ ಪರಾಕ್ರಮ ಅಪರಿಮಿತವಾದದ್ದು. ವೀರಪರಂಪರೆಯಲ್ಲಿ ಎದ್ದು ಕಾಣುವ ಹೆಸರು ಈತನದು. ರಾಣಾ ಎಂಬುದರ ಅರ್ಥ 'ರಾಜ' ಎಂದು. ರಾಜ್ಞಾ ಎಂಬ ಪದದಿಂದ ಇದು ನಿಷ್ಪನ್ನವಾಗಿದೆ. ಮೇವಾಡದ ರಾಜರು ತಮ್ಮ ರಾಜ್ಯದ ಒಡೆತನವನ್ನೆಲ್ಲ ಕುಲದೇವತೆ ಏಕಲಿಂಗಸ್ವಾಮಿಗೆ ಅರ್ಪಿಸಿ ತಾವು ಕೇವಲ ಆತನ ವಶವರ್ತಿಗಳಂತಿದ್ದ ಕಾರಣ 'ರಾಜ' ಎಂಬ ಹೆಸರನ್ನು ತಳೆಯದೆ 'ರಾಣಾ' ಎಂದೇ ಉಳಿದಿದ್ದರು! ಪ್ರತಾಪಸಿಂಹನು ಹಠಮಾ-ರಿಯಾಗಿದ್ದನೆಂದು ಕೆಲವರು ಹೇಳುತ್ತಾರೆ. ಆದರೆ ಅಕ್ಬರ್ ಭಯಾನಕವಾದ ತಪ್ಪು ಮಾಡಿದ. ಪ್ರತಾಪಸಿಂಹನ ತಂದೆ ಉದಯಸಿಂಹನಿಂದ ಚಿತ್ತೋಡಗಢವನ್ನು ಕಸಿದುಕೊಳ್ಳುವ ಸಂದರ್ಭದಲ್ಲಿ ತುಂಬ ಬರ್ಬರವಾಗಿ ದಾಳಿ ಮಾಡಿದ, ಊರು-ಮನೆಗಳನ್ನು ಸುಟ್ಟು ಕೋಟೆ ಕೊತ್ತಲಗಳನ್ನು ಪುಡಿಗಟ್ಟಿದನು. ಮೂವತ್ತು ಸಾವಿರ ಜನರನ್ನು ಕೊಂದು ಅವರ ತಲೆಗಳನ್ನು ಕುಯ್ಯಿಸಿ ಅವುಗಳಿಂದೊಂದು ಗೋಪುರವನ್ನೇ ನಿರ್ಮಾಣ ಮಾಡಿಸಿದ!

ಕೆಲವು ದಾಖಲೆಗಳ ಪ್ರಕಾರ ಸತ್ತವರ ಯಜ್ಞೋಪವೀತವನ್ನು ತೂಗಿದರೆ ಅದು ಹತ್ತಾರು ಮಣಗಳಷ್ಟಿತ್ತಂತೆ! ಇದರಿಂದ ಪ್ರತಾಪಸಿಂಹನು ಸಹಜವಾಗಿಯೇ ಕ್ರುದ್ಧಗೊಂಡಿದ್ದ. ಇದಕ್ಕೆ ಇತಿಹಾಸಕಾರರು ಬರೆಯುತ್ತಾರೆ.

The genocide of 30,000 innocent people by Akbar after vanquishing Chithod had made Prathap and his subjects so much bitter that he could never think of having some kind of pact with Mughals. Akbar had treated his Rajput subordinates with honour. Although there are a few examples contrary to this in contemporary works, such as, "Dalpath Vilas'.

“The worth and Effectiveneess of his policies are proved by whether, success Prathap accomplished. Akbar could not take anything from him, even after his long twelve years of efforts. Prathap had left behind almost the same territory for his son, which he had got from his father. Had Prathap sacrificed his life, Amarsingh, would have got insignifacant seat in Akbar’s court. Later incidents automatically obsorbed Prathap of all his changes.

ರಾಣಾ ಪ್ರತಾಪ ಬದುಕಿದ್ದು ಐವತ್ತೇಳು ವರ್ಷಗಳು ಮಾತ್ರ. ತಂದೆಯಿಂದ ಸಂದಾಯವಾದ ಮೇವಾಡ ಪ್ರಾಂತವನ್ನು ಕಾಪಾಡಿಕೊಂಡ, ತಂದೆಯು ಕಾಪಾಡಿದ್ದಕ್ಕಿಂತ ಹೆಚ್ಚಾಗಿ ಬೆಳೆಯಿಸಿಕೊಂಡ; ಆಯಕಟ್ಟಿನ ಸ್ಥಾನದಲ್ಲಿ ನಿಂತುಕೊಂಡ. ಸೂರತ್‌ನಂತಹ ರೇವುಪಟ್ಟಣಗಳ ಮೂಲಕ ಅಕ್ಬರ್ ಯಾವುದೇ ವಾಣಿಜ್ಯ ವ್ಯವಹಾರಗಳನ್ನು ಮಾಡದಂತೆ ತಡೆದ. ತನ್ನ ಜನರೆಲ್ಲರ ಪ್ರೀತಿ, ವಿಶ್ವಾಸಗಳನ್ನು ಗಳಿಸಿಕೊಂಡ. ಭಿಲ್ಲರಿಂದ ಮೊದಲ್ಗೊಂಡು ಎಲ್ಲ ಜನರ ಬೆಂಬಲವನ್ನು ಪಡೆದ.

ಆದರೆ ಶಾಲಾಪಾಠ್ಯಪುಸ್ತಕದಲ್ಲಿ ಪ್ರತಾಪಸಿಂಹನನ್ನು ಒಬ್ಬ ಹತಾಶನಾಯಕನಂತೆ ಚಿತ್ರಿಸುತ್ತಾರೆ ಅಥವಾ ಮಾನಸಿಕವಾಗಿ ದುರ್ಬಲವಾದ ಸೋತ ನಾಯಕನಂತೆ ಬಿಂಬಿಸುತ್ತಾರೆ. ಆಗಿನ ಕಾಲದ ಕವಿಗಳು ಕಾವ್ಯಾತ್ಮಕವಾದ ಕಥೆಗಳನ್ನು ಬರೆದಿದ್ದಾರೆ. ‘ಆರಾವಳಿಯ ದಟ್ಟ ಕಾಡಿನಲ್ಲಿ ಪ್ರತಾಪನ ಮಗಳು ಹಸಿವಿನಿಂದ ಗೋಳಾಡಿದಾಗ, ಅವನ ಹೆಂಡತಿಯು ಕಾಡಿನ ನವಣೆಯಿಂದ ರೊಟ್ಟಿ ಮಾಡಿಕೊಟ್ಟಳು. ಅದನ್ನೂ ಸಹ ಒಂದು ಕಾಡುಬೆಕ್ಕು ಎತ್ತಿಕೊಂಡು ಹೋಯಿತು. ಮಗಳ ಗೋಳಾಟವನ್ನು ನೋಡಲಾರದೆ ಪ್ರತಾಪಸಿಂಹನು ಅಕ್ಬರನಿಗೆ ಸಂಧಿಗಾಗಿ ಪತ್ರ ಬರೆದ’? ಎಂಬ ಹಲವು ಕಾಲ್ಪನಿಕಕಥೆಗಳಿವೆ, ಆದರೆ ಪ್ರತಾಪಸಿಂಹನೆಂದೂ ಸಹ ಅಕ್ಬರನೊಡನೆ ಸಂಧಿಗಾಗಿ ಪತ್ರ ಬರೆಯಲಿಲ್ಲ. ಪೃಥ್ವಿರಾಜಸಿಂಹ ಎಂಬ ಪ್ರತಾಪಸಿಂಹನ ಸಮಕಾಲೀನನು ಪ್ರತಾಪನು ಇಂಥ ಹೇಡಿತನದ ಕೆಲಸವನ್ನು ಮಾಡಿದವನಲ್ಲವೆಂದು ಹೇಳುತ್ತಾನೆ.

ಆಗೀಗ ಸುಳಿಯುವ ದೌರ್ಬಲ್ಯಕ್ಕೆ ರಾವುಗನ್ನಡಿಯನ್ನು ಹಿಡಿಯುವುದು ಯುಕ್ತವಲ್ಲ. ಜೊತೆಗೆ ಅವನು ಸೋತರೂ ಕೂಡ ಗೆದ್ದ; ವೈರಿಯನ್ನು ದುರ್ಬಲಗೊಳಿಸಿದ. ಜನರಿಗೆ ಅಭಿವೃದ್ಧಿಯನ್ನೂ ಕೈಗೂಡಿಸಿದ. ಇದೆಲ್ಲವನ್ನೂ ಕಂಡಾಗ ಪ್ರತಾಪನ ಗೆಲವಿನ ಆದರ್ಶವು ವಾಸ್ತವದ ಆದರ್ಶ, ಬಲ್ಮೆಯ ಆದರ್ಶ, ಬಾಳಿನ ಆದರ್ಶ, ಬದುಕುವ ಆದರ್ಶವೇ ಹೊರತು ಸೋಲಿನ ಆದರ್ಶವಲ್ಲವೆಂದು ತಿಳಿಯುತ್ತದೆ. ಇವನು ಸಮೃದ್ಧರಾಜ್ಯವನ್ನೇ ಉಳಿಸಿಕೊಂಡ. ಚಿತ್ತೋಡವೂ ಸೇರಿ ಕೇವಲ ಮೂರು ದುರ್ಗಗಳು ಮಾತ್ರ ಅವನ ಹಸ್ತಗತವಾಗಿರಲಿಲ್ಲ, ಅಷ್ಟೇ. ಅಕ್ಬರನಿಂದ ಮೂವತ್ತೇಳಕ್ಕೂ ಹೆಚ್ಚು ದುರ್ಗಗಳನ್ನು ಕಸಿದುಕೊಂಡ, ರಜಪೂತರೆಲ್ಲ ಇವನಿಗೆ ಗೌರವ ತೋರಿಸಿದರು.

*(ಭಾರತೀಯ ಕ್ಷಾತ್ರಪರಂಪರೆ – ಶತಾವಧಾನಿ ಆರ್. ಗಣೇಶ ಕೃತಿಯಿಂದ)*

# ತುರ್ತು ಪರಿಸ್ಥಿತಿ–ಸ್ವಾರ್ಥ ಮತ್ತು ಅಧಿಕಾರಲಾಲಸೆಯ ತುರ್ತು

**1975ರ ಜೂನ್ 26ರಂದು ಬೆಳಗಾಗುತ್ತಲೇ ಸ್ವಾತಂತ್ರ ಪ್ರಿಯ ಭಾರತೀಯರಿಗೆ ಅರಿವಾದುದು ಇಂದಿರಾ ಗಾಂಧಿಯವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಸಂವಿಧಾನವನ್ನು ಕಸದ ಮೂಲೆಗೆ ಹಾಕಿದರು ಎಂದು! ದೇಶವನ್ನು ಸೆರೆಮನೆಯಾಗಿ ಬದಲಾಯಿಸಿದರು ಎಂದು ! ಆಗಿನ ಪರಿಸ್ಥಿತಿಯ ನೆನಪಿನಿಂದ ಈ ಲೇಖನ –** *ಸಂಪಾದಕ*

## ಸ್ವಾತಂತ್ರದ ಭಿಕ್ಷೆ ನೀಡಿ:

[ತುರ್ತು ಪರಿಸ್ಥಿತಿ ಬಂದ ಬಳಿಕ ಪೇಜಾವರ ಮಠಾಧೀಶರಾದ ಶ್ರೀವಿಶ್ವೇಶ್ವ ತೀರ್ಥರು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಬರೆದ ಪತ್ರ]

"ನಾನೊಬ್ಬ ಸನ್ಯಾಸಿ, ಓರ್ವ ಭಿಕ್ಷು, ನನ್ನ ಕೆಲಸವೇ ಭಿಕ್ಷಾಟನೆ, ನೀವು ನನಗೆ ಸ್ವಾತಂತ್ರ್ಯದ ಮತ್ತು ಪ್ರಜಾಪ್ರಭುತ್ವದ ರಕ್ಷಣೆಯ ಭಿಕ್ಷೆ ನೀಡಬೇಕೆಂದು ಬೇಡಿಕೊಳ್ಳುತ್ತೇನೆ.



"ನಮ್ಮ ದೇಶದಲ್ಲಿ ಪ್ರಜಾತಂತ್ರ ಸುರಕ್ಷಿತವಾಗಿದೆಯೆಂದು ಪದೇ ಪದೇ ಘೋಷಿಸುತ್ತಿದ್ದೀರಿ. ಅದನ್ನು ಕೇಳಿ ನಗಬೇಕೋ ಅಥವ ಅಳಬೇಕೋ ಜನರಿಗೆ ಗೊತ್ತಾಗುತ್ತಿಲ್ಲ. ಪ್ರಜಾಪ್ರಭುತ್ವದ ಉಚ್ಚ ಪರಂಪರೆ ಒಮ್ಮೆ ನಾಶವಾಯಿತೆಂದರೆ, ಅದನ್ನು ಪುನಃ ನೆಲೆಗೊಳಿಸುವುದು ಬಹು ಕಷ್ಟ. ಮಹಾತ್ಮಾಗಾಂಧಿ ಪಂಡಿತ್ ನೆಹರು ಮುಂತಾದವರು ಸ್ವಾತಂತ್ರ್ಯಗಳಿಸಿ, ಈ ನಾಡಿನಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಅಗಾಧ ಪರಿಶ್ರಮಪಟ್ಟರು. ಆದರೆ ಈಗ ಜನರು ಅವುಗಳ ರಕ್ಷಣೆಗಾಗಿ ಆಂದೋಳನ ಹೂಡಬೇಕೇನು? ಅದಕ್ಕಾಗಿ ಪುನಃ ಲಕ್ಷಾಂತರ ಜನರ ಬಲಿಯಾಗಬೇಕೇನು? ನಮ್ಮ ದೇಶದಲ್ಲೂ ಹಂಗೇರಿ ಅಥವಾ ಜಕೊಸ್ಲಾವಾಕಿಯಾದಲ್ಲಿ ಆದಂತೆ ಆಗಬೇಕೆಂದು ಬಯಸುವಿರಾ? ಈಗ ನೀವು ಆಡುತ್ತಿರುವ ಮಾತಿಗೂ, ಪಾಕಿಸ್ತಾನದ ಸರ್ವಾಧಿಕಾರಿ ಅಯೂಬಾಖಾನ್ ಹೇಳಿದ ಮಾತುಗಳಿಗೂ ಹೋಲಿಸಿಕೊಳ್ಳಿ, ಪ್ರಜಾಪ್ರಭುತ್ವ ಮತ್ತು ವಿರೋಧಿ ಪಕ್ಷಗಳ ಬಗ್ಗೆ 1959ರಲ್ಲಿ ಅವನು ಹೇಳಿದ ಮಾತುಗಳನ್ನೇ ನೀವೂ ಈಗ ಹೇಳುತ್ತಿದ್ದೀರಿ. ಹಾಗಾಗಿ ಎಷ್ಟೇ ಕಹಿಯಾದರೂ ಸತ್ಯ ಹೇಳುವುದು ನನ್ನ ಕರ್ತವ್ಯವಾಗಿದೆ".

## ಅಭಿನವ ಪರಶುರಾಮರಾಗಿ (ಶ್ರೀ ಪೇಜಾವರ ಶ್ರೀಗಳ ಭಾಷಣದಿಂದ):

"ಯಾವುದೇ ಕರ್ತವ್ಯ ನಿರ್ವಹಿಸುವವರಿಗೆ ತ್ಯಾಗ ಸೇವೆ– ಹೋರಾಟ ಅವಶ್ಯಕ. ಇಂದಿನ ಪರಿಸ್ಥಿತಿಯಲ್ಲಂತೂ ಈ ಗುಣಗಳನ್ನು ವಿಶೇಷವಾಗಿ ಬೆಳಸಿಕೊಳ್ಳಬೇಕು, ಧ್ಯೇಯ

ಸಾಧನೆಗೆ ಹೊರಟವರನ್ನು ಅವರ ತಂದೆ ತಾಯಿಗಳು ಅಡ್ಡಿ ಪಡಿಸುವುದು ಸರಿಯಲ್ಲ. ಅದು ನಮ್ಮ ಪರಂಪರೆಗೆ ಖಂಡಿತವಾಗಿಯು ಸಲ್ಲದು. ಇಂದಿನ ಯುವಕರು ಪರಶುರಾಮನಂತೆ ಹೋರಾಡಬೇಕು, ಇದರಲ್ಲಿ ಹಿಂಜರಿಯುವ ಮಾತೇ ಇರಬಾರದು."

(ಇದು ಆಗ ಗುಪ್ತವಾಗಿ ಪ್ರಕಟವಾಗುತ್ತಿದ್ದ ಭೂಗತ ಪತ್ರಿಕೆ)

## ವಂದೇ ಮಾತರಂ

ಸಮಾಚಾರ ಪತ್ರ (2)24 ದಿನಾಂಕ 26.12.76

**ತೇನಾಧೀತಂ ಶ್ರುತಂ ತೇನ ತೇನ ಸರ್ವಮನುಷ್ಠಿ ತಂ ।**
**ಯೇನಾಶಾ: ಪೃಷ್ಠತ: ಕೃತ್ವಾ ನೈರಾಶ್ಯಮವಲಂಬಿತಮ್ ॥**

ಯಾವನು ನಿಜವಾಗಿಯೂ ಆಸೆಯನ್ನು ಹಿಂದಕ್ಕೆ ತಳ್ಳಿ ನಿರಾಶೆಯೊಂದಿಗೆ ಹೋರಾಡುವನೋ ಅವನೇ ನಿಜವಾಗಿ ಕಲಿತವನು. ಅವನ 'ಓದು ಸಾರ್ಥಕ, ಅವನು ಎಲ್ಲವನ್ನೂ ಆಚರಣೆಗೆ ತಂದಂತೆ ಎಂದು ಅರಿಯಬೇಕು.

– ಸಂಪಾದಕೀಯ



**ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ :** ಇಂದು ಸಾರ್ವಜನಿಕ ಜೀವನದ ಶಿಸ್ತಿನ ಬಗೆಗೆ ತುಂಬ ಮಾತುಕತೆ ಕೇಳಿಬರುತ್ತಿದೆ. ಅದರ ಶಿಕ್ಷಣ ಉಪದೇಶ ಮಾತ್ರದಿಂದ ಬರುವಷ್ಟು ಸುಲಭಸಾಧ್ಯವೆಂದಾದಲ್ಲಿ ಈವರೆಗೆ ಪ್ರಪಂಚದಲ್ಲಿ ಅಶಿಸ್ತು, ಉಳಿಯಲು ಸಾಧ್ಯವೇ ಇರಲಿಲ್ಲ. ಒಂದು ಉದಾತ್ತ, ಧ್ಯೇಯ, ತದನುರೂಪವಾಗಿ ಜೀವನವನ್ನು ತಿದ್ದಿ ರೂಪಿಸುವ ಸಂಸ್ಕಾರದ ಯೋಜನೆ, ಇವೆರಡನ್ನೂ ಮೈಗೂಡಿಸಿಕೊಂಡಿರುವ ಹಿರಿಯರ ಜೀವಂತ ಆದರ್ಶ ಈ ಮೂರೂ ಸಹ ಏಕಕಾಲದಲ್ಲಿ ಒಂದೆಡೆ ಸೇರಿರುವಲ್ಲಿ ಮಾತ್ರ ಅಲ್ಪಸ್ವಲ್ಪ ಶಿಸ್ತು ಕಲಿಯಬಹುದಾದ ಸಂಭವವಿದೆ. ಅಷ್ಟಾದರೂ ಮೇಲಿಂದ ಮೇಲೆ ಅನುದ್ದೇಶಿತವಾಗಿ ಬರಬಹುದಾದ ಭ್ರಷ್ಟ ವಿಚಾರಗಳ ಮಲಿನ ವಾತಾವರಣದಲ್ಲಿ ಮನಸ್ಸಿನ ಸ್ವಚ್ಛತೆ ಕಾಪಾಡಲು ಸತತ ಸಾಧನೆಯೂ ಅವಶ್ಯ. ಹೀಗಾಗಿ ಜೀವನವನ್ನು ಶಿಸ್ತು ಬದ್ಧಗೊಳಿಸಲು ಅನೇಕ ರೀತಿಯ ಅವಕಾಶ ಹಾಗೂ ಪ್ರಯತ್ನಗಳು ಬೇಕಾಗುತ್ತವೆ.

ತುರ್ತುಪರಿಸ್ಥಿತಿ ಘೋಷಿಸುವುದರ ಮೂಲಕ ನಮ್ಮ ಜನತೆಗೆ ಶಿಸ್ತನ್ನು ಕಲಿಸಲು ನಮ್ಮ ಪ್ರಧಾನಿ ಹಾಗೂ ಅವರ ಪಕ್ಷದವರು ಗುತ್ತಿಗೆ ವಹಿಸಿದ್ದಾರೆ. ಸಾರ್ವಜನಿಕ ಪ್ರದೇಶಗಳಲ್ಲಿ ಪ್ರದರ್ಶಿಸಲಾಗುವ ಭಾರೀ ಫಲಕಗಳು, ಆಕಾಶವಾಣಿಯ ಘೋಷಣೆ, ಭಾಷಣಗಳು, ಜತೆಯಲ್ಲಿ 'ಮೀಸಾ' ದ ಭೀತಿ, ಇವುಗಳಿಂದ ಶಿಸ್ತಿನ ಪ್ರಜ್ಞೆ ಮೂಡಿಸಬಹುದೆಂದು ಅವರ ನಂಬಿಕೆ. ಆದರೆ ಶಿಸ್ತನ್ನು ರೂಪಿಸುವುದರಲ್ಲಿ, ತತ್ವಕ್ಕಿಂತ ವ್ಯವಹಾರದ ಪಾತ್ರವೇ ಪ್ರಧಾನ'. ಜನತೆಯ ಸದ್ವರ್ತನೆಗೆ ಪ್ರೇರಣೆಯ ಮೂಲ 'ಯುದ್ಯದಾಚರತಿ ಶ್ರೇಷ್ಠ: ಆಗಿದೆಯೇ ವಿನಃ 'ಯದ್ಯದ್ವದತಿ' ಅಲ್ಲ.






ನಮಗೆ ಶಿಸ್ತನ್ನು ಬೋಧಿಸುವಂತಹ ನೈತಿಕ ಅಧಿಕಾರ ನಮ್ಮ ಪ್ರಧಾನಿಯವರಿಗಾಗಲೀ, ಕಾಂಗ್ರೆಸ್ ಪಕ್ಷಕ್ಕಾಗಲೀ ಕಿಂಚಿತ್ತೂ ಇಲ್ಲ. ವೈಯಕ್ತಿಕ ಪ್ರತಿಷ್ಠೆಗೆ ಧಕ್ಕೆ ಬಂದಾಗ ತನ್ನ ಪುರೋಭಿವೃದ್ಧಿಗೆ ಕಾರಣರಾದ ಹಿರಿಯರನ್ನೇ ಧಿಕ್ಕರಿಸಿದ, ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ, ತಾವೇ ಸೂಚಿಸಿದ ಅಭ್ಯರ್ಥಿಯನ್ನು ವಂಚಿಸಿ ಸೋಲಿಸಿದ, ಆತ್ಮಸಾಕ್ಷಿಯ ಹೆಸರಲ್ಲಿ ತಮ್ಮದೇ ಪಕ್ಷದೊಳಗೆ ಬಹಿರಂಗ ಬಂಡಾಯವೆಬ್ಬಿಸಿದ ಘಟನೆಗಳು ನಮ್ಮ ಪ್ರಧಾನಿಯವರ ಶಿಸ್ತುಪ್ರಿಯತೆಗೆ ಸಾಕ್ಷಿ. ಅವರ ಭ್ರಷ್ಟಾಚಾರಗಳಿಗೆ ಅಲಹಾಬಾದ್ ಉಚ್ಚ ನ್ಯಾಯಾಲಯವು ಕೊಟ್ಟ ಪ್ರಶಸ್ತಿ ಪತ್ರವನ್ನು ಸರ್ವೋಚ್ಚ ನಾಯಾಲಯವು ಸಹ ತಳ್ಳಿಹಾಕಿಲ್ಲ ಎಂಬುದು ಗಮನೀಯ. ಸ್ವಾರ್ಥಿ ರಾಜಕಾರಣಿಗಳು, ಲಾಭಬಡುಕ ವಂಚಕರ ನೀತಿಗೆಟ್ಟ, ಗೂಂಡಾಗಳ ಒಕ್ಕೂಟವಾಗಿರುವ ಆಳುವ ಪಕ್ಷ ಮತ್ತು ಅದರ ಯುವಕ ಸಂಘಟನೆಗಳು ಜನತೆಗೆ ಶಿಸ್ತು ಕಲಿಸುವುದೆಂದರೆ ಅದರಂತಹ ವಿಡಂಬನೆ ಇನ್ನೊಂದಿರಲಾರದು. ಅವರು ಕಲಿಸುವುದು ಒತ್ತಟ್ಟಿಗಿರಲಿ, ಸದ್ಯ ತಾವು ಕಿಂಚಿತ್ತಾದರೂ ಶಿಸ್ತು ಕಲಿತುಕೊಂಡಲ್ಲಿ ಅದರಿಂದ ದೇಶಕ್ಕೆ ಮಹದುಪಕಾರವಾದೀತು. ಗುಜರಾತು, ಉತ್ತರ ಪ್ರದೇಶ, ಈಗ ಒರಿಸ್ಸಾ ಮತ್ತು ಬಂಗಾಲಗಳಲ್ಲಿ ಅಧಿಕಾರದ ಮೂಳೆಗಾಗಿ ಶ್ವಾನಜಗಳದಲ್ಲಿ ತೊಡಗಿರುವ ಈ ಜನ ದೇಶಕ್ಕೆ ಶಿಸ್ತು ಕಲಿಸುತ್ತಾರಂತೆ! ಪದವಿ, ಸ್ಥಾನಮಾನಗಳಿಗಾಗಿ ಬೀದಿ ಜಗಳಕ್ಕೂ ಹೇಸದ, ತಮ್ಮ ಪಕ್ಷದ ನಾಯಕರುಗಳ ವಿರುದ್ಧ ಸಹಿ ಸಂಗ್ರಹಿಸಿ ಅವರನ್ನು ಉರುಳಿಸುವುದರಲ್ಲಿ, ನಿಷ್ಣಾತರಾಗಿರುವ ಕಾಂಗ್ರೆಸಿಗರಿಂದ ಶಿಸ್ತಿನ ನಿರೀಕ್ಷೆ ಮಾಡಿದಲ್ಲಿ, ಜನತೆಯದೇ, ಮೂರ್ಖತನವಾದೀತು. ಪಾಪ, ದೋಷ ಅವರದೂ ಅಲ್ಲ. ಕಣ್ಣ ಮುಂದಿರುವ ಧ್ಯೇಯ. ದೊರೆತಿರುವ ಸಂಸ್ಕಾರ ಹಾಗೂ ಅನುಸರಿಸುವ ಆದರ್ಶಗಳೇ ಹಾಗಿರುವಾಗ ಅವರಾದರೂ ಏನು ಮಾಡಬಲ್ಲರು? ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಗಾದೆ ಸುಳ್ಳಲ್ಲ.

## ಪ್ರಚಾರವಾಗದ ಸುದ್ದಿಗಳು

ಸಾಹಿತಿಗಳ ಹೂಂಕಾರ : ಇದೇ ಡಿಸೆಂ. 11, 12, 13 ರಂದು ಮಲೆನಾಡಿನ ಕೇಂದ್ರವಾದ ಶಿವಮೊಗ್ಗದಲ್ಲಿ ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತಷ್ಟೆ. ಅದೇ ಸಂದರ್ಭದಲ್ಲಿ 'ಮಲೆನಾಡ ಅಸೋಸಿಯೇಟ್ಸ್ ಸಂಸ್ಥೆಯವರು ಕೆಲವು ಪ್ರಮುಖ ಲೇಖಕರನ್ನು ಆಹ್ವಾನಿಸಿ ಸಾಹಿತ್ಯ ಸಂಧ್ಯಾ" ಎಂಬ ವಿಶೇಷ ಹಾಗೂ ಪ್ರತ್ಯೇಕ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕರಾದ ಪ್ರೊ. ಎಸ್.ವಿ. ಪರಮೇಶ್ವರ ಭಟ್, ಪ್ರೊ. ಎಂ. ಗೋಪಾಲಕೃಷ್ಣ ಅಡಿಗ, ಕೆ.ಎಸ್. ನರಸಿಂಹಸ್ವಾಮಿ ಮತ್ತು ಡಾ. ಯು. ಆರ್. ಅನಂತಮೂರ್ತಿಯವರು ಲೇಖನಸ್ವಾತಂತ್ರ್ಯದ ಮಹತ್ತ್ವವನು ವಿವರಿಸಿ, ಆತ್ಮಸಾಕ್ಷಿಗೆ ನಿಯತ್ತಿನಿಂದ ನಿರ್ಭಯವಾಗಿ ನಡೆದುಕೊಳ್ಳಲು ಲೇಖಕರಿಗೆ ಕರೆಕೊಟ್ಟರು, ಅಲ್ಲದೆ, ನಾಗರಿಕ ಸಮಾಜದ ಸದಸ್ಯರಾದ ಲೇಖಕರಿಗೆ ಪ್ರಜಾತಂತ್ರ ಪೌರಹಕ್ಕುಗಳು ಮುಂತಾದ ಆದರ್ಶಗಳ ಬಗ್ಗೆ ಕಳಕಳಿ ಇರಬೇಕೆಂದು ಒತ್ತಿ ಹೇಳಿದರು.

**ವಿದ್ಯಾರ್ಥಿ ನಾಯಕನ ಬಂಧನ:** 15 ತಿಂಗಳುಗಳಿಂದ ತಪ್ಪಿಸಿಕೊಂಡಿದ್ದ ಹಾಗೂ ಕಳೆದ ವರ್ಷ ಗೌಹತಿ ವಿಶ್ವ ವಿದ್ಯಾಲಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದ ಜ್ಞಾನಾಭಿರಾಮ ಸೈಕಿಯಾ ಅವರನ್ನು ಅಕ್ಟೋಬರಿನಲ್ಲಿ ಬಂಧಿಸಲಾಯಿತು, ಪೋಲಿಸ್ ಲಾಕಪ್ಪಿನಲ್ಲಿ ಅವರಿಗೆ ಹೊಡೆದು ಚಿತ್ರ ಹಿಂಸೆ ಮಾಡಲಾಗಿದೆ.

**ಕಾಂಗ್ರೆಸಿಗರಿಗೆ ಅಪರಾಧಿಗಳ ಕಂಬಳಿಗಳು:** ಜೈಲಿನ ಅಪರಾಧಿಗಳಿಗಾಗಿ ಮಿಸಲಾಗಿಟ್ಟಿದ್ದ, ಅರು ಮೂಟೆ, ಕಂಬಳಿಗಳನ್ನು ಗೌಹತಿ ಅಧಿವೇಶನದ ಕಾಂಗ್ರೆಸ್ ಪ್ರತಿನಿಧಿಗಳಿಗಾಗಿ ರವಾನಿಸಲಾಯಿತು, ಜೈಲು ಅಪರಾಧಿಗಳ ಕಂಬಳಿಗಳು ಕಾಂಗ್ರೆಸ್ ಪ್ರತಿನಿಧಿಗಳಿಗೆ ಸಿಕ್ಕಿರುವುದು ಸಾಂಕೇತಿಕವೇ.

**ಮೀಸಾ ಬಂದಿಗಳಿಂದ ಕೊಡುಗೆ:** ಅಧಿವೇಶನಕ್ಕೆ ಬಂದ ಅಳುವ ಕಾಂಗ್ರೆಸ್ ಭೂಪತಿಗಳ ಹೊಟ್ಟೆ ತಣ್ಣಗಿರಲೆಂದು, ಮೀಸಾ ಬಂದಿಗಳ ಮಾಮೂಲಿನ ಎಣ್ಣೆ, ಸಕ್ಕರೆಗಳ, ಪಾಲನ್ನು ರದ್ದುಗೊಳಿಸಿ, ಅಲ್ಲಿಗೆ ರವಾನಿಸಲಾಯಿತು, ಅದರ ಬದಲು, ಬಂದಿಗಳು ಮುರಬ್ಬಾ ಉಪಯೋಗಿಸಬಹುದೆಂದು ಹೇಳಲಾಯಿತು. ಅನೇಕ ಬಂದಿಗಳು ಯಾವುದನ್ನು ಮುಟ್ಟದೆ ಪ್ರತಿಭಟಿಸಿದ್ದಾರೆ.

**ಸರಕಾರದ ಕಲ್ಲು ಹೃದಯದ ಫಲ:** ಇಂಫಾಲ್‌ನ ಕಾರ್ಯಕರ್ತ ಫಣಿಭೂಷಣ ದಾಸಗುಪ್ತರು 17 ತಿಂಗಳುಗಳಿಂದ ಡಿ.ಐ.ಆರ್, ಅನ್ವಯ ಬಂಧಿತರಾಗಿದ್ದಾರೆ. ಅವರಿಗೆ ಜಾಮೀನು ನಿರಾಕರಿಸಲಾಯಿತು. ಅವರ ತಂದೆಗೆ ಶೀಘ್ರ ಅನಾರೋಗ್ಯವಿದ್ದಾಗಲೂ ಅವರು ಹೊರಬರಲಾಗಲಿಲ್ಲ. ಕೊನೆಗೆ ವೃದ್ಧ ತಂದೆಗೆ ಹುಚ್ಚು ಹಿಡಿದು, ಮಗನ ಹೆಸರು ಕೂಗುತ್ತ, ಕೂಗುತ್ತ, ನವೆಂಬರ್ 19 ರಂದು ಲಂಡಿಂಗ್‌ನಲ್ಲಿ ಅಸು ನೀಗಿದರು.

**ಸಮಾಜವಾದಿ ಪಕ್ಷದ ಒಮ್ಮತ:** ಮಹಾರಾಷ್ಟ್ರ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಮ್ಮೇಳನವು ನವೆಂಬರ್ 20–21 ರಂದು ಮುಂಬೈಯಲ್ಲಿ ನಡೆಯಿತು. ಅ ಭಾ – ಪ್ರಧಾನ ಕಾರ್ಯದರ್ಶಿ ಸುರೇಂದ್ರ ಮೋಹನ. ಎನ್. ಎಂ. ಜೋಶಿ, ಎಸ್ ಜಿ. ಗೋರೆ ಮತ್ತಿತರ ನಾಯಕರು ಭಾಗವಹಿಸಿದ್ದರು. ಎಲ್ಲ ಪ್ರಜಾತಂತ್ರೀಯ ಪಕ್ಷಗಳೂ ಸೇರಿ ಏಕಪಕ್ಷ ರಚಿಸುವುದಕ್ಕೆ ಸಭೆಯು ಒಮ್ಮತದ ಬೆಂಬಲ ವ್ಯಕ್ತಪಡಿಸಿತು.

**ಪತ್ರಿಕಾ ನೌಕರರ ಅಸಂತೋಷ:** ಕಾರ್ಯನಿರತ ಪತ್ರಕರ್ತರ ವೇತನದ ಬಗ್ಗೆ ಮೂರನೇ ವೇತನ ಅಯೋಗ ನೇಮಕಗೊಂಡು ಬಹಳ ದಿನಗಳಾಗಿದ್ದರೂ, ಅದರ ವರದಿ ಬಾರದಿರುವುದರಿಂದ ಪತ್ರಿಕಾ ನೌಕರರಲ್ಲಿ ತೀವ್ರ ಅಸಂತೋಷವುಂಟಾಗಿದ್ದು, ಅವರು ಮುಷ್ಕರ ಹೂಡಲು ಅಲೋಚಿಸುತ್ತಿದ್ದಾರೆ.

* ಮುಂಬೈ ಸಮಾಜವಾದಿ ನಾಯಕ ಶರದರಾವ್ ಅವರನ್ನು ಮೀಸಾ ಅನ್ವಯ ಬಂಧಿಸಲಾಗಿದೆ.

* ಕಳೆದ ತಿಂಗಳು ಪುಣೆಯಲ್ಲಿ 22 ಮುದ್ರಣಾಲಯಗಳ ಮೇಲೆ ಪೋಲಿಸರು ದಾಳಿನಡೆಸಿ ಶೋಧಿಸಿದರು. ಸುಬ್ರಹ್ಮಣ್ಯನ್ ಸ್ವಾಮಿಯವರಿಗೆ ಸಂಬಂಧಿಸಿದ ವಿಷಯ ಮುದ್ರಿಸುತ್ತಿದ್ದ

ಲಾಟ್ಕರ್ ಪ್ರೆಸ್‌ನ ಮೂವರನ್ನು ಬಂಧಿಸಲಾಗಿದೆ. ಪುಣೆಯ 'ಜನವಾಣಿ ಪ್ರೆಸ್' ಗೆ ಠೇವಣಿ ಹಣ ಇಡುವಂತೆ ಆಜ್ಞೆಯಾಗಿದೆ.

* ಅಹಮದಾಬಾದಿನ ಗುಜರಾತಿ ವಾರಪತ್ರಿಕೆ 'ನಿರೀಕ್ಷಕ' ಮುದ್ರಣವಾಗುತ್ತಿದ್ದ 'ಡೈನಮಿಕ್ ಪ್ರಿಂಟಿಂಗ್ ಪ್ರೆಸ್'ಗೆ ಸರಕಾರ ಬೆದರಿಕೆ ಹಾಕಿದ್ದರಿಂದ. ಪತ್ರಿಕೆ ನಿಂತು ಹೋಗಬೇಕಾಯಿತು. ಪಿ.ಜಿ ಮಾವಳಂಕರ್, ಉಮಾಶಂಕರ ಜೋಶಿ, ಯಶವಂತ ಶುಕ್ಲಾ ಮತ್ತು ಈಶ್ವರ ಪೆಟ್ಲಿಕರ್ ಈ ಉಚ್ಚ ಮಟ್ಟದ ಪತ್ರಿಕೆಯ ಸಂಪಾದಕರಾಗಿದ್ದರು.

* ಮರಾಠಿ ವಾರಪತ್ರಿಕೆ 'ಸಾಧನಾ'ದ 11 ಸಂಚಿಕೆಗಳನ್ನು ಮಹಾರಾಷ್ಟ್ರ ಸರಕಾರ ಮುಟ್ಟುಗೋಲು ಹಾಕಿಕೊಂಡು, ಅದನ್ನು ಮುದ್ರಿಸಿದ ಮುದ್ರಣಾಲಯಕ್ಕೆ ಬೀಗಮುದ್ರೆ ಹಾಕಿತ್ತು. ಸಾಧನಾ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಎಸ್. ಎಂ ಜೋಶಿ ಮತ್ತಿತರರು ಈ ಬಗ್ಗೆ ಮುಂಬೈ ಹೈಕೋರ್ಟಿನಲ್ಲಿ ದಾವಾ ಹೂಡಿದ್ದರು. ಇದೇ ಡಿಸೆಂಬರ್ 9 ರಂದು ನ್ಯಾಯಾಧೀಶರಾದ ವಿ.ಡಿ. ತುಳಜಾಪುರಕರ್ ಮತ್ತು ಬಿ.ಸಿ ಗಾಡ್ಗೀಳರು ಸರಕಾರದ ಆಜ್ಞೆಯನ್ನು ರದ್ದುಗೊಳಿಸಿ ಸರಕಾರವೇ ಅರ್ಜಿದಾರರ ಖರ್ಚು ತುಂಬಿಕೊಡಬೇಕೆಂದು ತೀರ್ಪು ನೀಡಿದ್ದಾರೆ.

* 'ಹಿಮ್ಮತ್' ವಾರ ಪತ್ರಿಕೆಯ ವಿವಿಧ ಸಂಚಿಕೆಗಳಲ್ಲಿ ಅನೇಕ ಲೇಖನ, ವಾರ್ತೆಗಳಿಗೆ ಸೆನ್ಸಾರ್ ಕತ್ತರಿ ಹಾಕಲಾಗಿತ್ತು. ಅದರ ವಿರುದ್ಧ ಮುಖ್ಯ ಸಂಪಾದಕರು ದಾವಾ ಹಾಕಿದ್ದು. ಮುಂಬೈ ಹೈಕೊರ್ಟು ಅದನ್ನು ವಿಚಾರಣೆಗೆ ಸ್ವೀಕರಿಸಿದೆ.

* ಅಲಹಾಬಾದಿನ ಪ್ರಮುಖ ಸರ್ವೋದಯ ಕಾರ್ಯಕರ್ತರಾದ ಚಂದ್ರಮೋಹನ ಭಾಯಿ ಬಂಧಿಸಲ್ಪಟ್ಟಿದ್ದಾರೆ.

## ಗೋವಿನ "ಪಾಡು?

ಇಂದಿರಕ್ಕನ ಗುರುತು ಗೋವಿನ
ಕಥೆಯ ಹೇಳುವೆ ಕೇಳಿ ಜನಗಳೆ
ಸಾಧು ಹಸುವಿನ ಕಾಲು ಬಾಲವ
ಕಟ್ಟಿ, ಕೆಡವಿದಳಿಂದಿರೆ ॥ 1 ॥

ಕೊಂಬು ಕಡಿದಳು ಕಣ್ಣು ತಿವಿದಳು
ಬಾಯಿ ಬಿಗಿದಳು ತುಟಿಯ ಹೊಲಿದಳು
ಬಡಿಯುವಳು ಕಾನೂನು ಕೋಲ
ನಮ್ಮ ಅಭಿನವ ಮಂಥರೆ ॥ 2 ॥

ಹಾಲು ಬಿಡದಲೆ ಎಳೆಯ ಕರುವಿಗೆ
ತಾನೆ ಕುಡಿವಳು ಬಿಟ್ಟು ನಾಚಿಗೆ
ಹಸುಳೆ ಕರುವಿಗೆ ಹೊಟ್ಟೆಗಿಲ್ಲದೆ
ಘೋರವಾಗಿದೆ ತೊಂದರೆ ॥ 3 ॥

ಇಂದಿರಕ್ಕನ ಮಾಟಮಂತ್ರಕೆ
ಓಟು ಕೊಟ್ಟೆವು ಈಗ ಕೆಟ್ಟೆವು
ಪೌರಹಕ್ಕಿಗೆ ದೇಶದೊಳಿತಿಗೆ
ಎಳ್ಳು ನೀರನು ಬಿಟ್ಟೆವು ॥ 4 ॥

ಓಟುಕೊಟ್ಟಾ ಪಾಪ ಕಳೆಯಲು
ಮೂರು ಪ್ರತಿಗಳ ಮಾಡಿ ಪದ್ಯವ
ಅಕ್ಕ ಪಕ್ಕದ ಜನಕೆ ಹಂಚಲು
'ಸೊಕ್ಕು ಮುರಿವುದು ಖಂಡಿತ ॥ 5 ॥

# ಬಿಲ್‌ಗೇಟ್ಸ್ ಎನ್ನುವ ಅಸಾಮಾನ್ಯ

– ರಮೇಶಚಂದ್ರ ನಿಪ್ಪಾಣಿ



ಬಿಲ್‌ಗೇಟ್ಸ್ ಅಂದರೆ ಮೈಕ್ರೋಸಾಫ್ಟ್ ಎನ್ನುವ ಕಂಪನಿಯ ಸ್ಥಾಪಕ, ಪಾಲುದಾರ. 68 ವರ್ಷದ ಗೇಟ್ಸ್ 13100 ಕೋಟಿ ಡಾಲರ್‌ಗಳ ಶ್ರೀಮಂತ. ಜಗತ್ತಿನಾದ್ಯಂತ ಹೆಸರು ವಾಸಿಯಾದ ಯಶಸ್ವೀ ಬಂಡವಾಳದಾರ. 13 ವರ್ಷದ ಬಾಲಕನಾಗಿರುವಾಗಲೇ ಕಂಪ್ಯೂಟರ್ ಪ್ರೋಗ್ರಾಮ್ ಬರೆದ ಜಾಣ. ಮಿತಿಯಿಲ್ಲದ ಸಿರಿವಂತಿಕೆ. ಕೋಟಿಗಟ್ಟಲೆ ಡಾಲರ್‌ಗಳನ್ನು ದಾನ ನೀಡಿದ ದಾನಿ. ಜಗತ್ತಿನಾದ್ಯಂತ ಅಪರಿಮಿತ ರಾಜಕೀಯ ಪ್ರಭಾವವನ್ನು ಬೀರಬಲ್ಲ ಸಂಪತ್ತಿನ ಒಡೆಯ. ಆತನು ಪ್ರಾರಂಭಿಸಿದ ಗೇಟ್ ಫೌಂಡೇಶನ್ ಎನ್ನುವ ಸಂಸ್ಥೆಯು ಆರೋಗ್ಯ ಕ್ಷೇತ್ರದಿಂದ ಪ್ರಾರಂಭಿಸಿ ಶಿಕ್ಷಣದವರೆಗೂ, ಪಶುಸಂಪತ್ತಿನ ವ್ಯವಹಾರದಿಂದ ಸಾರ್ವಜನಿಕ ಸಂಪರ್ಕದ ವಿಚಾರವನ್ನು ನಿರ್ದೇಶಿಸಬಲ್ಲದು ಎನ್ನುವ ಪ್ರಖ್ಯಾತಿಯನ್ನು ಪಡೆದಿದೆ. ಈ ವ್ಯಕ್ತಿ 2008ರಲ್ಲಿ ಮೊದಲ ಬಾರಿ ಭಾರತಕ್ಕೆ ಭೇಟಿ ನೀಡುತ್ತಾನೆ. ಆಗ ಆತನನ್ನು ದೇಶದ ರಾಷ್ಟ್ರಾಧ್ಯಕ್ಷರಿಂದ ಹಿಡಿದು ಪ್ರತಿಯೊಬ್ಬರೂ ಆತನ ಪರಿಚಾರಿಕೆಯನ್ನು ಮಾಡಿ ಕೃತಾರ್ಥರಾದರೆಂದು ಆಗಿನ ಮಾಧ್ಯಮಗಳು ಬರೆದಿದ್ದವು.

ಭಾರತದಲ್ಲಿ 1990ರಲ್ಲಿ ಮೈಕ್ರೋಸಾಫ್ಟ್‌ನ ವ್ಯವಹಾರಗಳು ಪ್ರಾರಂಭವಾದವು. ನಂತರ ಅದು ಕೋವಿಡ್ 19ರ ಹಿಡುಗಿನ ಕಾಲ. ಭಾರತವು ಅದನ್ನು ಹತೋಟಿಯಲ್ಲಿ ಇಡಬಲ್ಲ ಲಸಿಕೆಯನ್ನು ಸಂಶೋಧಿಸುವ ಘಟ್ಟದಲ್ಲಿದ್ದಿತು. ಭಾರತದೊಂದಿಗೆ ಜಗತ್ತಿನ ಇನ್ನು ಕೆಲವು ದೇಶಗಳು ಲಸಿಕೆಯ ಶೋಧವಾದರೆ ಅದನ್ನು ಪೇಟೆಂಟ್ ಮಾಡುವುದರಿಂದ ವಿನಾಯಿತಿ ನೀಡುವಂತೆ ಪ್ರಯತ್ನಿಸುತ್ತಿದ್ದವು. ಬಿಲ್‌ಗೇಟ್ಸ್ ತನ್ನ ಪ್ರಭಾವವನ್ನು ಪ್ರಯೋಗಿಸಿ ಅಂತಹ ವಿನಾಯಿತಿಯನ್ನು ವಿರೋಧಿಸಿದ ವ್ಯಕ್ತಿ. ತನ್ನ ಸಂಸ್ಥೆಯು ಹಲವು ಔಷಧಿ ಕಂಪನಿಗಳೊಂದಿಗೆ ನೆರವಿನ ಒಪ್ಪಂದವನ್ನು ಮಾಡಿದುದರಿಂದ, ಇನ್ನು ಅದಕ್ಕಿಂತ ಹೆಚ್ಚು ಪೇಟೆಂಟ್ ವಿಧಿಸದೆ ವ್ಯವಹರಿಸಿ ಇನ್ನೂ ಹೆಚ್ಚಿನ ಸಹಾಯ ಮಾಡುವ ಅಗತ್ಯವೇನಿದೆ ಎನ್ನುವುದು ಆತನ ವಾದವಾಗಿದ್ದಿತು.

ಬಿಲ್‌ಗೇಟ್ಸ್‌ಗೆ ಜಗತ್ತಿನ ಪ್ರಭಾವಿ ರಾಜಕೀಯ ನೇತಾರರೆಲ್ಲರೂ ಗೊತ್ತು. ಎಲ್ಲಾ ದೇಶಗಳ ಸರ್ಕಾರಗಳ ಔಪಚಾರಿಕ ನೀತಿ, ನಿಲುವು ಕಾರ್ಯಕ್ರಮಗಳ ಆದ್ಯತೆಯನ್ನೇ ಬದಲಿಸಬಲ್ಲ ಪ್ರಭಾವಿ ವ್ಯಕ್ತಿ ಆತ. ತನ್ನ ದಾನದ ಶಕ್ತಿಯಿಂದ ಪ್ರಜಾಪ್ರಭುತ್ವದ ಧಾಟಿಯನ್ನೇ ನಿರ್ಧರಿಸಬಲ್ಲ ಗೇಟ್ಸ್‌ನ ಅಸಾಮಾನ್ಯ ಕೊಡುಗೆಗಳನ್ನು ಜಗತ್ತಿನ ಮಾಧ್ಯಮಗಳೆಲ್ಲವೂ ಹೊಗಳುತ್ತವೆ. ಇಂತಹ ವಾತಾವರಣದಲ್ಲಿ ಸಹಜವಾಗಿ ಆತನ ಕುರಿತು ವಿಶ್ಲೇಷಕ ಧೋರಣೆಯನ್ನು ತಳೆಯುವುದು ಯಾರಿಗೂ ಕೂಡಾ ಅಸಾಧ್ಯವೆ. ಉದಾಹರಣೆಗೆ ಆತನಿಂದಾಗಿ ಜಗತ್ತಿನ ಜನರು ಆರೋಗ್ಯವಂತರಾಗಿರಲು ಸಾಧ್ಯವಾಯಿತು ಎಂದು ಎಲ್ಲರೂ ಅಭಿಪ್ರಾಯವನ್ನು

ಪಟ್ಟಿರುವಾಗ ಆರೋಗ್ಯ ಕ್ಷೇತ್ರದ ಕುರಿತು ಒಂದಿಷ್ಟು ಅರಿವಿಲ್ಲದ ಈ ಮನುಷ್ಯನು ಜಾಗತಿಕ ಆರೋಗ್ಯ ನೀತಿಯನ್ನು ನಿರ್ಧರಿಸಬಲ್ಲನೇ? ಎಂದು ಪ್ರಶ್ನಿಸುವುದು ಅಸಂಗತವೆನಿಸುತ್ತದೆ.

ಬಿಲ್‌ಗೇಟ್ಸ್‌ನ ಕುರಿತು ಉತ್ತಮ ಅಭಿಪ್ರಾಯವನ್ನು ಒದಗಿಸುತ್ತಿರುವ ಸುದ್ದಿಗಳ ಮೂಲವನ್ನು ಹುಡುಕುತ್ತಾ ಹೋದರೆ; ಅಂತಹ ಸಂಸ್ಥೆಗಳೆಲ್ಲವೂ ಗೇಟ್ಸ್ ಪ್ರತಿಷ್ಠಾನದ ಜೊತೆಗೆ ಒಂದಲ್ಲ ಒಂದು ರೀತಿಯಲ್ಲಿ ಸಂಬಂಧ ಹೊಂದಿರುವ ಸಂಸ್ಥೆಗಳೇ ಆಗಿರುತ್ತವೆ. ಹೀಗೆ ಸ್ವತಂತ್ರವಾಗಿರದ ಈ ಮೂಲಗಳಿಂದ ಸಿಗುವ ಪಾರ್ಶ್ವ ಮಾಹಿತಿಗಳೇ ಗೇಟ್ಸ್‌ನನ್ನು ಅಳೆಯುವ ಆಧಾರಗಳಾಗಿರುತ್ತವೆ. ಇಂತಹ ಸನ್ನಿವೇಶದಲ್ಲಿ ಗೇಟ್ಸ್‌ನ ಅವೈಜ್ಞಾನಿಕ ಧೋರಣೆಯಿಂದ ಜಾಗತಿಕವಾಗಿ ತಲೆದೋರಿದ ನಷ್ಟವೇನು ಎನ್ನುವ ಮೂಲಭೂತ ಪ್ರಶ್ನೆಯನ್ನು ಉತ್ತರಿಸುವುದು ಸಾಧ್ಯವಿಲ್ಲದ ಮಾತಾಗುತ್ತದೆ. ಕೋವಿಡ್–19ರ ವಿಪತ್ತಿನ ಕಾಲದ ಗೇಟ್ಸ್ ಧೋರಣೆಯಿಂದ ಆರೋಗ್ಯಭಾಗ್ಯದ ಸಮಾನ ಹಂಚಿಕೆಯು ಸಾಧ್ಯವಾಗಲೇ ಇಲ್ಲ. ಹಲವು ಬಡದೇಶಗಳಿಗೆ ಲಸಿಕೆಯು ತಲುಪಲೇ ಇಲ್ಲ. ಇದರೊಂದಿಗೆ ಕೋವಿಡ್ ಪರಿಣಾಮದ ವಸ್ತುಸ್ಥಿತಿಯ ವಿಶ್ಲೇಷಣೆ ಮಾಡಬೇಕಾದ ಶ್ರೀಮಂತ ಸಂಸ್ಥೆಗಳು ಆ ಕುರಿತು ಮೌನವನ್ನು ವಹಿಸಿದವು.

ಬೀಲ್‌ಗೇಟ್ಸ್ ಪ್ರತಿಷ್ಠಾನವು ಸಕ್ರಿಯವಾಗಿರುವ ಹಲವು ಸಾಮಾಜಿಕ ಕಾರ್ಯಗಳ ಮತ್ತು ವಿಭಾಗಗಳ ಬಗ್ಗೆ ಆತನಿಗೆ ಪ್ರಾಥಮಿಕ ಜ್ಞಾನದ ಅರಿವೇ ಇರುವುದಿಲ್ಲ ಎನ್ನುವುದು ಬಹಳ ಮೂಲಗಳ ಅಭಿಪ್ರಾಯವಾಗಿದೆ. ಹಾಗೆಂದು ಕೋವಿಡ್ ನಂತಹ ಜಾಗತಿಕ ಪಿಡುಗು, ಅಥವಾ ಪರಿಸರದ ಅಗತ್ಯಗಳು, ಕೃಷಿರಂಗದ ಸಮಸ್ಯೆಗಳಂತಹ; ಬಲ್ಲಿದರು ಮಾತ್ರವೇ ಚರ್ಚಿಸಬಲ್ಲ ವೈಜ್ಞಾನಿಕ ಅಂಶಗಳಲ್ಲೂ ಗೇಟ್ಸ್ ಮತ್ತು ಆತನ ಗೇಟ್ಸ್ ಫೌಂಡೇಶನ್ ಸದಾ ತನ್ನ ಅಭಿಪ್ರಾಯದೊಂದಿಗೆ ಸನ್ನದ್ಧವಾಗಿರುತ್ತದೆ.

ಅಮೆರಿಕಾ ಮತ್ತು ಯುರೋಪುಗಳನ್ನು ಬಿಟ್ಟರೆ ಬೀಲ್‌ಗೇಟ್ಸ್ ಆಸಕ್ತಿ ತೋರುವ ದೇಶಗಳಲ್ಲಿ ಭಾರತವೂ ಸೇರಿದೆ. ಅದರಲ್ಲೂ ಭಾರತವೂ ಆರೋಗ್ಯ ಮತ್ತು ಔಷಧ ಕ್ಷೇತ್ರದಲ್ಲಿ ಪ್ರಮುಖ ಪ್ರಭಾವಿಯಾಗಿರುವುದು ಇದಕ್ಕೆ ಕಾರಣವಾಗಿರಬಹುದು. ಭಾರತದ ಔಷಧ ಕಂಪನಿಗಳಲ್ಲಿ ಬೀಲ್‌ಗೇಟ್ಸ್‌ನ ಪಾಲುದಾರಿಕೆಯಿದ್ದಿತು. ಭಾರತದ ಸೀರಂ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದೊಂದಿಗೆ ಒಪ್ಪಂದವನ್ನು ಕುದುರಿಸಿ ಆಫ್ರಿಕಾ ದೇಶಗಳಿಗೆ ಕೋವಿಡ್ ಲಸಿಕೆಯನ್ನು ರಫ್ತು ಮಾಡಬೇಕೆನ್ನುವ ಕಾರ್ಯಕ್ರಮವನ್ನು ಬೀಲ್‌ಗೇಟ್ಸ್ ಸಂಸ್ಥೆಗಳು ಹೊಂದಿದ್ದವು. ಆದರೆ ಭಾರತವು ಮೊದಲು ದೇಶದ ಅವಶ್ಯಕತೆಯ ಒಪ್ಪಂದವನ್ನು ಪೂರೈಸಿದ ಮೇಲೆಯೇ ಅದರ ರಫ್ತು ಸಾಧ್ಯವೆನ್ನುವ ನಿಲುವನ್ನು ತಳೆಯಿತು. ಉತ್ಪಾದಿತ ಲಸಿಕೆಯ ಕಂತುಗಳು ಮೊದಲು ಭಾರತದಲ್ಲಿ ವಿನಿಯೋಗಿಸಬೇಕೆಂದು ತಾಕೀತು ಮಾಡಿತು. ಹೀಗಾಗಿ ಕೋವಿಡ್ ಪ್ರಚಾರದ ಅಭಿಯಾನದಲ್ಲಿ ಬೀಲ್‌ಗೇಟ್ಸ್ ಸಂಸ್ಥೆಗಳೂ ಒಂದಿಷ್ಟು ವಿಫಲವಾದವು ಎನ್ನಬೇಕು. ಇದೇ ರೀತಿ ಇನ್ನು ಹಲವು ರಂಗಗಳಲ್ಲಿ ಬೀಲ್‌ಗೇಟ್ಸ್ ಉಪಕಾರಿಯಾಗಿರುವನೆಂದು ಪ್ರಚಾರ ಗಿಟ್ಟಿಸುವ ಕಾರ್ಯಕ್ರಮಗಳಲ್ಲಿ ಸಟೆಯೆಷ್ಟು ಅಥವಾ ದಿಟವೆಷ್ಟು ಎನ್ನುವುದು ಪ್ರಭಾವಿ ವಲಯಗಳ ಹಂತಗಳಲ್ಲಿ ಅದು ಎಷ್ಟರ ಮಟ್ಟಿಗೆ ಮೆಚ್ಚುಗೆಯ ವಿಶೇಷಣಗಳನ್ನು ಪಡೆದಿದೆ ಎನ್ನುವುದನ್ನು ಅವಲಂಬಿಸಿದೆ.

ಅಂತೂ ಬೀಲ್‌ಗೇಟ್ಸ್ ಎನ್ನುವುದು ರಾಜಕೀಯ ಧೋರಣೆಯೇ? ಪಾಶ್ಚಾತ್ಯ ಪಾರಮ್ಯದ ವಾರಸುದಾರಿಕೆಯೇ? ಶುದ್ಧ ಸೇವಾ ಕಾರ್ಯಕ್ರಮವೇ ಎನ್ನುವುದು ಇನ್ನೂ ನಿಚ್ಚಳವಾಗಲಿಲ್ಲ.

# ಪೌರತ್ವ ತಿದ್ದುಪಡಿ ಕಾಯಿದೆಯ ಜಾರಿ

– ಶ್ರೀನಿವಾಸರಾವ್, **ಹಿರಿಯೂರು**

ಹೇಳಬೇಕೆಂದರೆ, ಜಾರಿಗೆ ಬಂದಿರುವ ಪೌರತ್ವ ತಿದ್ದುಪಡಿಯ ಕಾನೂನು 1947ರಲ್ಲಿ ಸ್ವಾತಂತ್ರ್ಯ ಬಂದ ದಿನಗಳಿಂದ ಹಿಂದು ಮತ್ತು ಸಿಖ್ಖರ ಮೇಲೆ ನಡೆದ ಅತ್ಯಾಚಾರಗಳ ತಿದ್ದುಪಡಿಯ ವಿಳಂಬಿತ ಕಾರ್ಯ. 1947ರಲ್ಲಿ 50ಲಕ್ಷ ಹಿಂದು ಮತ್ತು ಸಿಖ್ಖರು ಪಾಕಿಸ್ತಾನದಿಂದ ಭಾರತಕ್ಕೆ ಸಂತ್ರಸ್ತರಾಗಿ ಬಂದರು. ಮತ್ತೆ ಮುಂದಿನ ವರ್ಷಗಳ ಅಂತರದಲ್ಲಿ ಮತ್ತೆ 2ಕೋಟಿ ಜನ ಹಿಂದುಗಳೂ ಭಾರತಕ್ಕೆ ಬಂದರು. ಇನ್ನು ಪ್ರಾಣತೆತ್ತವರು 10ಲಕ್ಷಕ್ಕೂ ಹೆಚ್ಚು ಜನರು.

ಅತ್ತ 1948ರಲ್ಲಿ ಪಾಕಿಸ್ತಾನಕ್ಕೆ ಹೋದ ಮುಸ್ಲಿಮರು ತಮ್ಮ ಸ್ವರ್ಗದ ಪವಿತ್ರ ಭೂಮಿ ಬಿಟ್ಟು ಮತ್ತೆ ಭಾರತದತ್ತ ಮುಖಮಾಡಿದರು. ಭಾರತದ ನೆಹರೂ ಎನ್ನುವ ಸರ್ಕಾರವು ಅವರನ್ನು ಸ್ವಾಗತಿಸಿ ಅವರಿಗೆ ಭಾರತದಲ್ಲಿ ಬಿಟ್ಟು ಹೋದ ಆ ಮುಸ್ಲಿಮರ ಆಸ್ತಿಯನ್ನು ಮರಳಿ ಹಂಚಿಕೊಟ್ಟಿತು. ಇದರ ಅಪಾಯವನ್ನು ಕಂಡವರು ಸರ್ದಾರ್ ಪಟೇಲ್. ಇದು ಅತ್ಯಂತ ಅಪಾಯಕಾರಿ ಕ್ರಮವೆಂದುಕೊಂಡ ಪಟೇಲರು; ಅಂತಹವರು ಭಾರತಕ್ಕೆ ಬರುವುದನ್ನು ನಿಯಂತ್ರಿಸಲು ಎರಡೂ ದೇಶಗಳು ಅದಕ್ಕೆ ಮಿತಿ ಹಾಕುವ 'ಪರ್ಮಿಟ್ ಸಿಸ್ಟಮ್'ನ್ನು ತರುವಂತೆ ಪಾಕಿಸ್ತಾನವನ್ನು ಒತ್ತಾಯಿಸಿದರು. ಭಾರತ ಬಿಟ್ಟು ಹೋದವರು ಹಿಂದಿರುಗಿ ಬರುವಂತಿಲ್ಲ. ಹಾಗೇನಾದರೂ ಬಂದರೂ ಅವರಿಗೆ ಇಲ್ಲಿಯ ಆಸ್ತಿಯನ್ನು ನೀಡುವ ಪ್ರಶ್ನೆಯೇ ಬರುವುದಿಲ್ಲ ಎಂದು ನಿಶ್ಚಯಿಸಲಾಯಿತು. ಒಟ್ಟಾಗಿ 1948ರಿಂದ 2000ದ ವರೆಗಿನ ವರ್ಷಗಳಲ್ಲಿ ಪೂರ್ವ ಪಾಕಿಸ್ತಾನದಿಂದ ಬಂದ ಹಿಂದುಗಳ ಸಂಖ್ಯೆ ಒಂದೂವರೆ ಕೋಟಿ ಎಂದು ಲೆಕ್ಕಿಸಲಾಗಿದೆ.

ಹೀಗೆ ಬಂದ ಸಂತ್ರಸ್ತರಿಗೆ ಭಾರತೀಯ ನಾಗರಿಕತೆಗೆ ಮನವಿ ಮಾಡುವ ಅವಕಾಶವನ್ನು ಶ್ರೀಘ್ರಗೊಳಿಸಿದುದು ಈಗಿನ ಸರ್ಕಾರದ ಪೌರತ್ವ ತಿದ್ದು ಪಡಿ ಕಾನೂನು. ಮೊದಲು ಈ ತಿದ್ದುಪಡಿಯಿಂದ ಭಾರತೀಯ ನಾಗರಿಕರಾದ ರಾಧಾ, ಲಕ್ಷ್ಮಿ, ಚಂದ್ರಕಲಾ ಮತ್ತು ಭಾವನಾ ಪಾಕಿಸ್ತಾನದ ಸಿಂಧ ಪ್ರಾಂತದಿಂದ ಬಂದವರು.

"ನಾವೀಗ ಸ್ವತಂತ್ರರಾದ ಮನುಷ್ಯರು. ನಮ್ಮ ಹೆಣ್ಣು ಮಕ್ಕಳು ಇನ್ನು ಮುಂದೆ ಶಾಲೆಗಳನ್ನು ಸೇರಬಲ್ಲರು. ಮುಂದಿನ ಭವಿಷ್ಯದಲ್ಲಿ ನಾವೂ ಕೂಡಾ ನಮ್ಮ ಕುಟುಂಬವನ್ನು ಸಾಗಿಸಬಲ್ಲ ಶಕ್ತಿಯನ್ನು ಹೊಂದುವೆವು. ಪಾಕಿಸ್ತಾನ ಬಿಟ್ಟು ಬಂದುದಕ್ಕೆ ನಾವು ಇಂದು ಸ್ವತಂತ್ರರಾಗಿ ನಿರ್ಭಯದಿಂದ ಬದುಕುವ ಮಟ್ಟಕ್ಕೆ ಬಂದೆವು" ಹೀಗೆ ಹೇಳುತ್ತಲೇ ರಾಧಾ ಆನಂದ ಭಾಷ್ಪಗಳನ್ನು ಸುರಿಸಿದರು.

ಪಾಕಿಸ್ತಾನ ಬಂಗ್ಲಾದೇಶ ಅಫಘಾನಿಸ್ತಾನಗಳಲ್ಲಿ ಮುಸ್ಲಿಮರಲ್ಲದವರೆಂದು ಧಾರ್ಮಿಕ ಕಿರುಕುಳಕ್ಕೆ ಒಳಗಾದವರು ಭಾರತಕ್ಕೆ ಬಂದರೆ ಅವರಿಗೆ ಭಾರತೀಯ ಪೌರತ್ವವನ್ನು ಕೊಡಲು ಭಾರತ ಸರ್ಕಾರ ಕ್ರಮಕೈಗೊಂಡಿತು. ಹಲವು ಅಡ್ಡಿ ಆತಂಕಗಳ ನಡುವೆಯೂ ಈ ಸಿ.ಎ.ಎ

ಕಾನೂನು ಅಂಗೀಕಾರಗೊಂಡು ಈಗ ಶಾಸನವಾಗಿ ಬಂದಿದೆ. ಈ ಅಧಿಸೂಚನೆಯು ಬಂದು 2 ತಿಂಗಳುಗಳ ನಂತರ ಭಾರತಕ್ಕೆ ವಲಸೆ ಬಂದ ಮುಸ್ಲಿಮೇತರರಿಗೆ ಭಾರತದ ನಾಗರೀಕರನ್ನಾಗಿ ಮಾನ್ಯತೆ ನೀಡಲು ಸರ್ಕಾರ ಪ್ರಾರಂಭಿಸಿತು.

ಹೀಗಾಗಿ ಹಲವು ದಶಕಗಳಿಂದ ಆತಂಕದಿಂದ ಕಾಯುತ್ತಿದ್ದವರಿಗೆ ಸಾಂತ್ವನ ದೊರಕಿದಂತಾಯಿತು. ಈ ನಡುವೆ ಎಂದಿನಂತೆ ಎಲ್ಲಕ್ಕೂ ಅಪಸ್ವರ ಎತ್ತುವ ಕಾಂಗ್ರೆಸ್ ಮತ್ತು ಇತರ ಪಕ್ಷಗಳು ಈ ಕಾಯಿದೆಯ ವಿರುದ್ಧವೂ ಹಲವು ಸುಳ್ಳುಗಳ ಆರೋಪವನ್ನು ಮಾಡುತ್ತಾ ಸಿ.ಎ.ಎಯನ್ನೂ ವಿರೋಧಿಸಿದ್ದವು. ಮುಖ್ಯವಾಗಿ ವಲಸೆ ಬಂದ ಮುಸ್ಲಿಮರಲ್ಲದವರಿಗೆ ಮಾತ್ರವೇಕೆ? ಬಂದ ಮುಸ್ಲಿಮರಿಗೂ ಪೌರತ್ವ ನೀಡಿ ಎನ್ನುವುದು ಅವುಗಳ ಆಗ್ರಹವಾಗಿತ್ತು. ಇದರೊಂದಿಗೆ ಸಿ.ಎ.ಎ ಬರುತ್ತಲೇ ಭಾರತದಲ್ಲಿ ಇರುವ ಮುಸ್ಲಿಮ್ ನಾಗರೀಕ ಪೌರತ್ವವನ್ನು ಹಿಂದೆಗೆದುಕೊಳ್ಳಲಾಗುತ್ತದೆ ಎಂದು ಕೂಡಾ ಹುಯಿಲೆಬ್ಬಿಸಲಾಗಿತ್ತು. ಈ ಕಾರಣದಿಂದಾಗಿ ದೇಶದ ಹಲವು ಕಡೆ ಹಿಂಸಾತ್ಮಕ ಪ್ರದರ್ಶನಗಳು ನಡೆದಿದ್ದವು.

ಇವೆಲ್ಲವನ್ನೂ ಎದುರಿಸಿ ಹಿಂದುಗಳಿಗೆ ಭಾರತವೇ ಮಾತೃಭೂಮಿ ಎನ್ನುವ ಅಭಯವನ್ನು ನೀಡಿದ ಸರ್ಕಾರವು ಅಭಿನಂದನೆಗೆ ಪಾತ್ರವಾಗಿದೆ.

## ಅಮೆರಿಕಾಕ್ಕೆ ಹಾಲು ನೀಡುವ ಭಾರತ

1960ರ ದಶಕದ ಕಥೆಯಿದು. ಅಮೆರಿಕಾದಿಂದ ಗೋಧಿ ಹೊತ್ತ ಹಡಗುಗಳು ಭಾರತವನ್ನು ತಲುಪಲು 10ದಿನಗಳೇನಾದರೂ ತಡವಾದರೆ ಭಾರತದಲ್ಲಿ ಹಲವು ಕೋಟಿ ಜನರು ಹಸಿವಿನಲ್ಲಿ ಇರಬೇಕಾಗಿತ್ತು. ಹಾಗೆಯೇ ಹಾಲಿನ ಪುಡಿಯ ಪೊಟ್ಟಣಗಳು ಅಲ್ಲಿಂದ ಬರದಿದ್ದರೆ ಭಾರತದ ಮಕ್ಕಳಿಗೆ ಕುಡಿಯಲು ಹಾಲು ಸಿಗುತ್ತಿರಲಿಲ್ಲ. ಅಮೆರಿಕಾವು ಬಡದೇಶಗಳಿಗೆ ನೀಡುವ ಒಪ್ಪಂದದ ಮೂಲಕ ಭಾರತಕ್ಕೆ ಹಾಲಿನ ಪುಡಿ ದೊರಕುತ್ತಿದ್ದಿತು.

ಇದು ಎಷ್ಟೊಂದು ಅವಮಾನಕಾರಿಯಾಗಿದ್ದುವೆಂದರೆ ಸ್ವಾಭಿಮಾನಿ ದೇಶಭಕ್ತನಿಗೆ ಇದು ಸಹಿಸಲು ಅಸಾಧ್ಯವಾಗಿದ್ದಿತು. ಹಾಗಾಗಿಯೇ ಆಗಿನ ಪ್ರಧಾನಿ ಲಾಲಬಹದ್ದೂರ್ ಶಾಸ್ತ್ರಿಯವರು ಉಪವಾಸಬೇಕಾದರೂ ಇರೋಣ, ಅಮೆರಿಕಾದ ಭಿಕ್ಷೆ ಬೇಡವೆಂದು ಭಾವಿಸಿದ್ದರು. ಅದಕ್ಕಾಗಿ ವಾರದಲ್ಲಿ ಒಂದು ಹೊತ್ತು ಊಟ ಬಿಡೋಣವೆಂದರು. ಹಾಗೆಯೇ ದೇಶಕ್ಕೂ ಆ ಕರೆಯನ್ನು ನೀಡಿದರು. ಶಾಸ್ತ್ರೀ ಯವರ ಮೇಲಿನ ಅಭಿಮಾನ ಮತ್ತು ಭಾರತದ ಸ್ವಾಭಿಮಾನಿ ಮನಸ್ಸುಗಳು ಅದನ್ನು ಸ್ವಾಗತಿಸಿದವು. ಕೋಟಿಗಟ್ಟಲೆ ಜನರು ಊಟಬಿಟ್ಟರು.

ಈಗ ಕಥೆ ಬದಲಾಗಿದೆ. ಭಾರತದ ಪ್ರಸಿದ್ಧ ಅಮುಲ್ ಸಹಕಾರಿ ಹಾಲಿನ ಮಂಡಳಿಯು ಅಮೆರಿಕಾದ ಮಿಚಿಗನ್ ಪ್ರಾಂತದಲ್ಲಿ ತನ್ನ ಚಟುವಟಿಕೆಯನ್ನು ವಿಸ್ತರಿಸಿದೆ. ಅಲ್ಲಿ ಅಮೆರಿಕಾದ ನಾಗರಿಕರಿಗೆ ಹಾಲನ್ನು ಉಳಿಸುವುದೆಂತು? ಅದನ್ನು ವಿತರಿಸುವುದು ಹೇಗೆ ಎಂಬುದನ್ನು ಕಲಿಸಿಕೊಡಲಿದೆ. ಅಂತೂ ಅಮೆರಿಕಾದ ಮಕ್ಕಳು ಆರೋಗ್ಯದಿಂದಿರಲು ಈಗ ಭಾರತ ಪ್ರಯತ್ನಿಸುತ್ತಿದೆ.

# ಶಿಕ್ಷಣವು ಬದುಕಲು ಉಪಯೋಗಿಯಾಗಬೇಕು

ಆಗ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋಗುವುದು ವಿದ್ಯಾರ್ಥಿಗಳಿಗೆ ಹೆಮ್ಮೆಯ ವಿಚಾರವಾಗಿದ್ದಿತು. ಹಾಗೆಯೇ ಒಂದು ಹಳ್ಳಿಯ ನಾಲ್ವರು ಸ್ನೇಹಿತರು ಅಲ್ಲಿ ವ್ಯಾಸಂಗ ಮಾಡುವುದೆಂದು ನಿಶ್ಚಯಿಸಿದರು. ಅವರಲ್ಲಿ ಮೂವರು ಬಹಳ ಮೇಧಾವಿಗಳೆಂದು ಹೆಸರು ಪಡೆದಿದ್ದರು. ಅವರಿಗೆ ಕಾಶಿಯಲ್ಲಿ ಅವರೇ ಬಯಸಿದ ವೈದ್ಯಕೀಯ ವಿಜ್ಞಾನದ ಬೇರೆ ಬೇರೆ ವಿಭಾಗಗಳಲ್ಲಿ ಓದುವ ಅವಕಾಶ ದೊರಕಿತು. ನಾಲ್ಕನೆಯವನು ತನಗೆ ಇಷ್ಟವಾದ ಕೃಷಿ ವಿಭಾಗವನ್ನು ಆರಿಸಿಕೊಂಡನು.

ಹೀಗೆ ಐದು ವರ್ಷಗಳನ್ನು ಕಾಶಿಯಲ್ಲಿ ಕಳೆದ ಸ್ನೇಹಿತರು ತಮ್ಮ ತಮ್ಮ ಪದವಿಗಳನ್ನು ಪಡೆದು ಊರಿಗೆ ಹೊರಟರು. ಆಗ ಈಗಿನಂತೆ ವಾಹನಗಳ ಸೌಕರ್ಯ ಎಲ್ಲಿದೆ? ನಾಲ್ವರೂ ಕಾಲ್ನಡಿಗೆಯಲ್ಲಿ ಹೋಗಬೇಕು, ದಾರಿಯಲ್ಲಿ ಪಟ್ಟಣಗಳನ್ನು ದಾಟಿ, ಹಳ್ಳಿಗಳನ್ನು ಮುಟ್ಟಿ ಬೆಟ್ಟ ಗುಡ್ಡ, ಕಾಡು, ಮೇಡುಗಳನ್ನು ಹತ್ತಿ ಇಳಿದು ಹೋಗಬೇಕು.

ನಾಲ್ವರೂ ಸ್ನೇಹಿತರು ಮಧ್ಯಾಹ್ನದ ಹೊತ್ತು ಒಂದು ಕಾಡನ್ನು ಪ್ರವೇಶಿಸಿದರು. ತಾವು ತಂದ ರೊಟ್ಟಿಯನ್ನು ಬಿಚ್ಚಿ ತಿಂದರು. ನೀರು ಕುಡಿದರು. ಕಾಡಿನ ಆ ಜಾಗ ತಂಪಾಗಿದ್ದಿತು. ಮೆಲ್ಲನೆ ಗಾಳಿ ಬೀಸುತ್ತಿದ್ದಿತು. ನಾಲ್ವರೂ ತಮ್ಮ ಕಾಶಿಯ ಶಿಕ್ಷಣದ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಅವರಲ್ಲಿ ಮೂವರಿಗೆ ತಾವು ಓದಿದ ವೈದ್ಯ ಶಾಸ್ತ್ರದ ಬಗ್ಗೆ ಬಹಳ ಅಭಿಮಾನ. ತಾವೆಲ್ಲ ಅದರಲ್ಲಿ ಜ್ಞಾನಿಗಳು ಎನ್ನುವ ಅಹಂಕಾರ. ನಾಲ್ಕನೆಯವನು ಓದಿದ ಬೇಸಾಯದ ಬಗ್ಗೆ ತಿರಸ್ಕಾರ.


ಮಾತನಾಡುತ್ತ ಇದ್ದಂತೆ ಅವರಿಗೆ ಕೊಂಚ ದೂರದಲ್ಲಿ ಒಂದು ಪ್ರಾಣಿಯ ಅಸ್ಥಿಪಂಜರವೊಂದು ಕಂಡಿತು. ಅ ಪ್ರಾಣಿಯು ಸತ್ತು ಬಹಳ ದಿನಗಳಾಗಿದ್ದಿರಬೇಕು. ಎಲುಬುಗಳೆಲ್ಲ ಚೆದುರಿ ಬಿದ್ದಿದ್ದವು. ಬುದ್ಧಿವಂತರೆನಿಸಿದ ಸ್ನೇಹಿತರು ಕೃಷಿಯ ಬಗ್ಗೆ ಓದಿದವನನ್ನು ಆ ಅಸ್ಥಿಪಂಜರದ ಬಗ್ಗೆ ನಿನಗೇನಾದರೂ ಗೊತ್ತೇ ಎಂದು ಕೇಳಿದರು. ಅವನು ಇಲ್ಲವೆಂದು ತಲೆಯಾಡಿಸಿದನು.

ನಾಲ್ವರೂ ಆ ಅಸ್ಥಿಪಂಜರವನ್ನು ಪರೀಕ್ಷಿಸಿದರು. ಮೊದಲನೆಯವನು ಪ್ರಾಣಿ ಶಾಸ್ತ್ರವನ್ನು ಕಲಿತವನು. ಅವನು ಎಲುಬುಗಳನ್ನೆಲ್ಲ ನೋಡಿ "ಇದು ಒಂದು ಸಿಂಹದ ಅಸ್ಥಿಪಂಜರ. ಅದು ಸತ್ತಾಗ ಅದಕ್ಕೆ 5 ಅಥವಾ 6 ವರ್ಷಗಳ ವಯಸ್ಸಾಗಿರಬಹುದು" ಎಂದು ಹೇಳಿದನು. ಇದನ್ನು ಕೇಳಿದ ಬೇಸಾಯಗಾರನು ಭಯಪಟ್ಟು "ಹಾಗಾದರೆ ನಾವೀಗಲೇ ಇಲ್ಲಿಂದ ಹೊರಟುಬಿಡೋಣ, ಇಲ್ಲೆಲ್ಲಾ ಸಿಂಹಗಳು ಓಡಾಡುತ್ತಿರಬಹುದು. ಯಾವುದಕ್ಕೂ ಜಾಗರೂಕರಾಗಿರಬೇಕು" ಎಂದನು. ಅದನ್ನು ಕೇಳಿದ ಮೂವರು ಬುದ್ಧಿವಂತರು ಅವನನ್ನು ಗೇಲಿ ಮಾಡುತ್ತ ನಕ್ಕರು.

ಎರಡನೆಯ ಬುದ್ಧಿವಂತನು ಶರೀರ ಶಾಸ್ತ್ರವನ್ನು ಓದಿ ದೇಹದ ಅಂಗಾಂಗಗಳನ್ನು ಸೇರಿಸಿ ಅದನ್ನು ಮೊದಲಿನ ರೂಪಕ್ಕೆ ತರಬಲ್ಲವನು. ಅವನು "ನಾನೀಗ ಇದನ್ನೆಲ್ಲ ಸೇರಿಸಿ ಮೊದಲಿನ

ಸಿಂಹದಂತೆ ಮಾಡಬಲ್ಲೆ" ಎಂದು ಅಲ್ಲೆಲ್ಲ ಬಿದ್ದ ಸತ್ತ ಸಿಂಹದ ಉಳಿದ ದೇಹದ ಭಾಗಗಳನ್ನು ಒಟ್ಟು ಸೇರಿಸಲು ಪ್ರಾರಂಭಿಸಿದನು. ಆಗಲೂ ನಾಲ್ಕನೆಯವನು "ಅದನ್ನು ಮಾಡಿ ನಾವೇನು ಮಾಡಲಿಕ್ಕಿದೆ? ಮೊದಲು ಈ ಕಾಡಿನಿಂದ ಹೊರಗೆ ಹೋಗಿಬಿಡೋಣ, ಸಂಜೆಯಾದರೆ ದಾರಿಯೂ ತಪ್ಪಬಹುದು. ಕಳ್ಳರು ನಮ್ಮನ್ನು ಕಾಡಬಹುದು ಹೋಗಿಬಿಡೋಣ" ಎಂದನು. ಆಗಲೂ ಉಳಿದ ಸ್ನೇಹಿತರು ಅವನನ್ನು ಹೀಯಾಳಿಸುತ್ತ ನಕ್ಕುಬಿಟ್ಟರು. ಅವರು ಮಾತ್ರ ಬುದ್ಧಿವಂತರು, ಉಳಿದ ಆ ಸ್ನೇಹಿತನು ಯಾವುದೇ ಕೆಲಸಕ್ಕೆ ಬಾರದವನು ಎಂದು ಅವರು ಅಂದುಕೊಂಡಿದ್ದರು.

ಅಷ್ಟಾಗುವಾಗ ಎರಡನೆಯವನು ಸಿಂಹದ ತಲೆಬುರುಡೆ, ಚರ್ಮ, ಇದನ್ನೆಲ್ಲಾ ಒಟ್ಟು ಸೇರಿಸಿ ಸಿಂಹದ ರೂಪವನ್ನು ನಿರ್ಮಿಸಿಬಿಟ್ಟಿದ್ದನು. ನೋಡಿದರೆ ಅದು ಜೀವಂತ ಸಿಂಹದಂತೆಯೇ ಕಾಣುತ್ತಿದ್ದಿತು. ಆದರೆ ಅದು ಜೀವಂತವಾಗಿರಲಿಲ್ಲ ಅಷ್ಟೆ. ಅದನ್ನು ನೋಡುತ್ತಲೇ ಮೂರನೆಯವನಿಗೆ ತಡೆಯಲಾಗಲಿಲ್ಲ. ಉಳಿದವರನ್ನು ಮೀರಿಸಿ ತನ್ನ ಜ್ಞಾನವನ್ನು ತೋರಿಸಬೇಕು ಎಂದು ಅವನಿಗೆ ತವಕ. ಅವನು "ಆಹಾ ಸಿಂಹವು ನೋಡಲು ಎಷ್ಟು ಚೆನ್ನಾಗಿದೆ; ಇದಕ್ಕೆ ಪ್ರಾಣ ಬರುವಂತೆ ಮಾಡಿದರೆ ಅದು ನಿಜವಾದ ಮೇಧಾವಿತನ. ನಾನು ಕಲಿತ, ಪ್ರಾಣ ಬರುವಂತೆ ಮಾಡುವ ವಿದ್ಯೆಯನ್ನು ತೋರಿಸಲು ಇದು ಒಳ್ಳೆಯ ಸಮಯ. ನಾನೀಗ ಈ ಸಿಂಹವನ್ನು ಉಸಿರಾಡುವಂತೆ ಮಾಡುವೆ" ಎಂದನು. ಈಗ ಮಾತ್ರ ನಾಲ್ಕನೆಯವನು ಹೌಹಾರಿಬಿಟ್ಟನು. "ಅಯ್ಯೋ, ಅಯ್ಯೋ ಸಿಂಹಕ್ಕೆ ಪ್ರಾಣ ಬಂದರೆ ನಮ್ಮ ಗತಿಯೇನು? ಅದನ್ನೊಂದು ಮಾಡಬೇಡಿ ನಿಮ್ಮ ದಮ್ಮಯ್ಯ" ಎಂದು ಕಿರುಚಿಕೊಂಡನು.



ಆದರೆ ಬುದ್ಧಿವಂತರು ಆ ದಡ್ಡನ ಮಾತನ್ನು ಎಲ್ಲಿ ಕೇಳುತ್ತಾರೆ? ನಾಲ್ಕನೆಯವನು ಸಿಂಹಕ್ಕೆ ಜೀವ ಕೊಡುವಾಗ ಉಳಿದ ಇಬ್ಬರು ಬಹಳ ಕುತೂಹಲದಿಂದ ನೋಡುತ್ತಿದ್ದರೆ, ನಾಲ್ಕನೆಯವನು ಓಡಿ ಪಕ್ಕದಲ್ಲಿರುವ ಒಂದು ಮರವನ್ನು ಹತ್ತಿಬಿಟ್ಟನು. ಅವನನ್ನು ತಮಾಷೆ ಮಾಡುತ್ತ ನಗುತ್ತಿದ್ದ ಸ್ನೇಹಿತರು ನೋಡುನೋಡುತ್ತಿದ್ದಂತೆ ಸಿಂಹವು ಮೆಲ್ಲನೆ ತನ್ನ ಬಾಲವನ್ನು ಅಲ್ಲಾಡಿಸಿತು. ಒಂದು ಘರ್ಜನೆಯನ್ನು ಮಾಡಿತು. "ಆಹಾ ಎಂತಹ ಜ್ಞಾನ ನಮ್ಮದು, ನಮಗೆ ಸಾಟಿಯಾದವರು ಯಾರಿದ್ದಾರೆ?" ಎಂದು ಹೆಮ್ಮೆಪಡುತ್ತಿದ್ದ ಮೂವರ ಮೇಲೆ ನೆಗೆಯಿತು. ಆಹಾರ ತಿನ್ನದೆ ತಿಂಗಳುಗಳೇ ಆಗಿದ್ದವು ಅಂತ ಕಾಣುತ್ತದೆ. ಮೂವರನ್ನೂ ಕೊಂದು ತಿಂದು ತೇಗುತ್ತಾ ಅಲ್ಲೇ ನಿದ್ದೆ ಹೋಯಿತು.



# ಕಶೀರದಲ್ಲಿ ಕಬೀರ

ಮಹಾಲೀಲೆಯ ಆಟ
ಅವ್ಯಕ್ತನ ತಿಗುರಿಯಾಟ

ಹುಚ್ಚು ನೆಟ್ಟವನೆ
ಹೂದಂಡವ ಹಿಡಿದು
ನನ್ನ ಎತ್ತ ಓಡಿಸುತಲಿರುವೆ

ಬೆಟ್ಟ ಪರ್ವತದ ಮುಂದಲೆ
ನೇವರಿಸಿ ಮೈಯ ನಾದಿ
ಕಡೆದ ನವನೀತ ಚೆಲ್ಲಿ
ಜಗಕೇ ಅಮ್ಮಿ ಉಣಿಸುವ
ತಾಯಿಬೇರಿನ ಭಾವ ಉನ್ಮೀಲನ

ಚೆಲ್ಲಿ ಹರಿದಿದೆ ಅಲ್ಲಲ್ಲಿ
ಹಾಲನೊರೆ ಅಂಟಿದೆ
ಪರ್ವತ ಸ್ತನದ ಇಕ್ಕೆಲಗಳಲಿ

ನೀನೇ ಕರುಣಿಸಿದ ಕಣ್ಣುಗಳು
ನೀ ಬಡಿಸಿಟ್ಟ
ಸೌಂದರ್ಯ
ಗಸಗಸೆ ಪಾಯಸ ಉಂಡುಂಡು
ಮತ್ತೇರಿ ಅರೆ ತೆರೆ ರೆಪ್ಪೆ
ಒಳಗೆಲ್ಲೋ ಕರಗಿದ ಕಳೆದ ನೋಟ

ಕಸರತ್ತು ಆಡುವ ಸರ್ಕಸಿನವನ
ಶೃಂಗದಾಟ
ಜೀಕುವ ಉಯ್ಯಾಲೆಯ ಜೀಕು
ಕ್ಷಣಯುಗ ಯುಗಕ್ಷಣ
ಹೊತ್ತು ಮುಳುಗಲಿಲ್ಲ
ಅರಿಯದ ಬೆಪ್ಪು


ನೆಲ ಮುಗಿಲಿನ ಅಪ್ಪುಗೆ
ಬಿಗಿ ಸಡಿಲಿಸುತ್ತಿಲ್ಲ
ನಭ ಭುವಿಯ ಮಡಿಲಿನಲಿ
ತನ್ನ ತಾ ಕಳೆದ ಹಾಗೆ
ಅರೆಯಚ್ಚರದ ನಶೆಯ
ಸ್ನಾನ
ಕಂಡದ್ದು.. ಕಂಡದ್ದೇ?
ಕಂಡದ್ದೇನು?
ಯಾವ ಪರಿಚಯ ತಾಯಿ

ಅತಿವೃಷ್ಟಿಗೆ ಕುರುಡಾಗಿರುವೆ
ಧಮನಿ ಧಮನಿಗಳಲಿ
ಹರಿಯುವ ಪಂಚಾಮೃತ
ರಜತಗಿರಿಯ ಪುಳಕಿಸುವ
ಹಸಿರು, ಕೆಂಪು, ಬಿಳಿ
ಎಲೆ – ಹೂವುಗಳು
ಕೇಸರ
ಋತುಗಾನ
ಧಿಮಿಕಿಟ ನರ್ತನ


ಋತುಸ್ನಾನದ ಹಿಮಸುರಿದು
ಇಳೆ ರಾಣಿ
ಶುಭ್ರ ಶ್ವೇತಧಾರಿಣಿ

ಜಗದಾಚೆಯ ಜಗವಿದು
ಕಣ್ಣಿನ ಆಚೆಯ ಕಣ್ಣಿಗೆ
ಅಮ್ಮನುಣಿಸುವ ತುತ್ತು
ಸಿಂಗಾರದ ಕರುಣ ಧಾರೆ

ತಾಯಿ ಭಾರತೀಯ ಮುಕುಟ
ಬೆರಗಿನಾಚೆಯ ಕಶೀರ
ಬೆರಗಿನಲಿ ಅಲೆ ಅಲೆದು ಕಬೀರ
ಶರಣಾಗಿದೆ ಆತ್ಮ ತಾದಾತ್ಮ್ಯ



**ಪೂರ್ಣಿಮಾ ಸುರೇಶ್,** ಉಡುಪಿ







# ನಿಮಗೆಷ್ಟು ಗೊತ್ತು

– ಬಿ.ಈ. ಸೀತಾಲಕ್ಷ್ಮೀ, ಯು.ಎಸ್.ಎ.

1) ಭಾರತದ ಯಾವ ನಾಯಕನ ಜನ್ಮದಿನವನ್ನು ವಿಶ್ವ ವಿದ್ಯಾರ್ಥಿಗಳ ಜನ್ಮದಿನವನ್ನಾಗಿ ಆಚರಿಸಲಾಗುತ್ತದೆ?
2) ಕಣ್ಣಿನಲ್ಲಿ ಪ್ರತಿಬಿಂಬ ಮೂಡುವ ಭಾಗ ಯಾವುದು?
3) 'ಜ್ಞಾಪಕ ಚಿತ್ರ ಶಾಲೆ' ಕೃತಿಯ ಕರ್ತೃ ಯಾರು?
4) ಕುರುಕ್ಷೇತ್ರ ಯುದ್ಧದಲ್ಲಿ ಶಲ್ಯನನ್ನು ಕೊಂದವರು ಯಾರು?
5) ಟಿಬೆಟ್ ನಲ್ಲಿ ಉಗಮವಾಗುವ ಸಟ್ಲೇಜ್ ನದಿಗೆ ಹಿಂದೆ ಇದ್ದ ಹೆಸರೇನು?
6) ಬೆಂಗಳೂರಿನ ವಿಮಾನ ನಿಲ್ದಾಣದ ಬಳಿಯಿರುವ ಪ್ರಗತಿಯ ಪ್ರತಿಮೆ (ಸ್ಟ್ಯಾಚೂ ಆಫ್ ಪ್ರಾಸ್ಪೆರಿಟಿ) ಯಾವ ಮಹಾನ್ ವ್ಯಕ್ತಿಯದ್ದಾಗಿದೆ?
7) ಗ್ರೇಟ್ ಇಂಡಿಯನ್ ಬಸ್ಟರ್ಡ್ ಪಕ್ಷಿಯು ಭಾರತದ ಯಾವ ರಾಜ್ಯದ ಪಕ್ಷಿಯಾಗಿದೆ?
8) ದುರ್ಗಾವತಿ ಹುಲಿ ಸಂರಕ್ಷಿತ ಪ್ರದೇಶವು ಯಾವ ರಾಜ್ಯದಲ್ಲಿದೆ?
9) ವಿಶ್ವ ಪರಿಸರ ದಿನವನ್ನು ಎಂದು ಆಚರಿಸಲಾಗುತ್ತದೆ?
10) ಡ್ಯೂರಾಂಡೊ ಕಪ್ ಯಾವ ಆಟಕ್ಕೆ ಸಂಭಂದಿಸಿದೆ?



**ಉತ್ತರಗಳು**


1) ಡಾ. ಎ.ಪಿ.ಜೆ. ಅಬ್ದುಲ್ ಕಲಾಂ
2) ರೆಟಿನಾ
3) ಡಿ.ವಿ. ಗುಂಡಪ್ಪ
4) ಯುಧಿಷ್ಠಿರ
5) ಶತದ್ರೂ
6) ನಾಡ ಪ್ರಭು ಕೆಂಪೇಗೌಡ
7) ರಾಜಸ್ಥಾನ
8) ಮಧ್ಯಪ್ರದೇಶ
9) ಜೂನ್ 5 ರಂದು
10) ಫುಟ್‌ಬಾಲ್



(9–10 ಉತ್ತರಗಳು ಸರಿಯಾದರೆ ಅತ್ಯುತ್ತಮ, 7–8 ಉತ್ತಮ)

# ಶಬ್ದಶೋಧ–198

ರಚನೆ: ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು




## ಎಡದಿಂದ ಬಲಕ್ಕೆ

1. ಬೆಟಗೇರಿ ಕೃಷ್ಣ ಶರ್ಮರ ಕಾವ್ಯನಾಮ (5)
3. ಹಾಸ್ಯ ಕಲಾವಿದೆ ಸುಧಾ ಅವರ ಊರು (4)
5. ಚಿದಂಬರಂನಲ್ಲಿರುವ ಮೂಲದೇವರು (4)
8. ರಂಗು, ರಂಗಾಗಿರುವ ಕಿತ್ತಲೆಹಣ್ಣು (3)
10. ಇಲ್ಲಿ ವಿಷ್ಣುವನ್ನು ಹುಡುಕಿ (4)
12. ಹುಲ್ಲಿನ ಬಣವೆಗೆ ಹೀಗೂ ಹೇಳಬಹುದು (4)
13. ಸೊಂಟಪಟ್ಟಿ ಅಥವಾ ನಡುಪಟ್ಟಿ (5)







## ಮೇಲಿನಿಂದ ಕಳಗೆ

1. ಕನ್ನಡ ಕುಲಪುರೋಹಿತ ವೆಂಕಟರಾಯರ ಊರು (3)
2. ತಿರುಪತಿ ತಿಮ್ಮಪ್ಪ – ಕಾಂಚನ ಬ್ರಹ್ಮನಂತೆ
   ಉಡುಪಿ ಕೃಷ್ಣ – ಅನ್ನ ಬ್ರಹ್ಮನಂತೆ
   ಪಂಡರಾಪುರ ಪಾಂಡುರಂಗ – ನಾದ ಬ್ರಹ್ಮನಂತೆ
   ಗದುಗಿನ ವೀರನಾರಾಯಣ ಯಾವ ಬ್ರಹ್ಮ?
3. ಮನುವಿಗೆ ಸಿಕ್ಕ ಪಾರಿತೋಷಕ (4)
4. ಬೇಹುಗಾರ (4)
6. ಸಂಸ್ಕೃತದ, ಕಾದಂಬರಿ ಕೃತಿಯ ಕರ್ತೃವಿನ ಹೆಸರು ತಲೆಕೆಳಗಾಗಿದೆ, ಅಲ್ಪಪ್ರಾಣವಾಗಿದೆ. (4)
7. ಗ್ರಾಮದ ಜನಸಾಮಾನ್ಯರಿಗೆ ಸಂಬಂಧಿಸಿದ್ದು (4)
8. ನಾವಲ್ಲಾ ಇದು ದೋಣಿ (2)
9. ಖನಿಜಗಳ ಅದಿರು ಇರುವ ಸ್ಥಳ (2)
11. ಕನ್ನಡದ 'Readers Digest' ಎಂದು ಹೆಸರಾದ ಮಾಸಪತ್ರಿಕೆ ಹಿಂದುಮುಂದಾಗಿದೆ
12. ವಾಲಿಯ ಮಗ (3)

## ಶಬ್ದಶೋಧ–197 ಉತ್ತರ

***ರಚನೆ:*** *ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು*

| | | | | | | | | |
|---|---|---|---|---|---|---|---|---|
| | | | 1 ಲ | ಗೋ | 2 ರಿ | | | |
| | | | ಕ್ಷ | | ಲೇ | | | |
| 3 ಶ | ಕಾ | 4 ಪ್ರ | | | | 5 ರಾ | ವು | 6 ತ |
| ಕು | | 7 ಹಾ | ಕಿ | ಮಾಂ | ತ್ರಿ | ಕ | | ಮ |
| 8 ನಿ | ಕ | ರ | | | | 9 ಟಿ | ನಿ | ಸ್ |
| | | | 10 ಪ | ಗ | 11 ಡೆ | | | |
| | | | ಡೆ | | ನ | | | |
| 12 ಕಿ | ರು | 13 ಬ | | 14 ಕೈ | | 15 ಕಾ | ಲ್ಚೆಂ | 16 ಡು |
| ರ | | 17 ಕ | ಣ್ಣಾ | ಮು | ಚ್ಚಾ | ಲೆ | | ರು |
| 18 ಗಿ | ರ | ಡ್ಡ | | ಗಿ | | 19 ಮಾ | ಸು | ಕು |

# ಈಗಿನ್ನು ಅಮೆರಿಕಾ ದೇಶಕ್ಕೆ ಸ್ವಾತಂತ್ರ್ಯದ ಕುರಿತು ಸಮಾಜಾಯಿಷಿ

**– ಕರುಣಾಕರ, ಹೊಸಗದ್ದೆ**

ಇಸ್ರೇಲಿನ ವಿರುದ್ಧ ಪಾಲೆಸ್ಟೀನ್ ಹಮಾಸ್ ಉಗ್ರರ ಪರವಾಗಿ ಅಮೆರಿಕಾದ ನೆಲದಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆಯ ಉಗ್ರ ಪ್ರದರ್ಶನಗಳು ಕಾಡ್ಗಿಚ್ಚಿನಂತೆ ದೇಶವಿಡೀ ಹಬ್ಬುತ್ತಿದೆ. ಈತ್ತೀಚೆಗೆ ಮಿಚಿಗನ್ ವಿಶ್ವ ವಿದ್ಯಾಲಯದ ಪ್ರಾಂಗಣಗಳಲ್ಲಿ ಇಸ್ರೇಲಿನ ಸರ್ಕಾರವನ್ನು ಅಣಕಿಸುವ, ಹೆಣಗಳ ಪ್ರತಿಕೃತಿಗಳು ವಿಶ್ವವಿದ್ಯಾಲಯದ ರಸ್ತೆಗಳಲ್ಲಿ, ಪಾರ್ಕುಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ವಿದ್ಯಾರ್ಥಿಗಳನ್ನು 'ಪಬ್ಲಿಕ್ ಸೇಫ್ಟಿ' ಕಾನೂನಿನ ಅಡಿಯಲ್ಲಿ ವ್ಯಾಪಕವಾಗಿ ಬಂಧಿಸಲಾಗುತ್ತಿದೆ. ಪ್ರತಿಭಟಿಸುತ್ತಿರುವ ವಿದ್ಯಾರ್ಥಿಗಳಿಗೆ ಕೋಳಗಳನ್ನು ಹಾಕಿ ಎಳೆದೊಯ್ಯಲಾಗುತ್ತಿದೆ. ಪ್ರಾಧ್ಯಾಪಕರು ತಮ್ಮ ಕಣ್ಣ ಮುಂದೆ ನಡೆಯುತ್ತಿರುವ ಪೋಲಿಸ್ ಮತ್ತು ವಿದ್ಯಾರ್ಥಿಗಳ ನಡುವಿನ ಮಾರಾಮಾರಿಯನ್ನು ನೋಡುತ್ತಾ ಅಸಹಾಯಕರಂತೆ ನಿಂತಿರುವ ಸ್ಥಿತಿಯು ಬಂದಿದೆ.




ಭಾರತದಲ್ಲಿ ಜೆ.ಎನ್.ಯು ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಗಳು ನಡೆದಿದ್ದವು. ಆಗ ಭಾರತ ವಿರೋಧಿ ಘೋಷಣೆಗಳನ್ನು ವಿದ್ಯಾರ್ಥಿಗಳು ಕೂಗಿದ್ದರು. ಉಗ್ರ ಕಸಬ್‌ನನ್ನು ಮೆಚ್ಚಿ ಹೊಗಳುವ ಘೋಷಣೆಗಳಿದ್ದವು. ಭಾರತವು ಹಲವು ಭಾಗಗಳಾಗಿ ಒಡೆಯಲಿ ಎಂದು ಕೂಗಿದ್ದರು. ಹರಿಯಾಣಾ ಮತ್ತು ಪಂಜಾಬಿನಿಂದ ಬಂದ ರೈತರ ದಂಡು ಕೆಂಪು ಕೋಟೆಯಲ್ಲಿ ಹಾರುತ್ತಿದ್ದ ತ್ರಿವರ್ಣ ಧ್ವಜವನ್ನು ಇಳಿಸಿ ಇನ್ನೊಂದು ಬಾವುಟವನ್ನು ಏರಿಸಿದ್ದರು. ದೆಹಲಿಯನ್ನು ಉತ್ತರಕ್ಕೆ ಸಂಪರ್ಕಿಸುವ ಹೆದ್ದಾರಿಗಳನ್ನು ಮುಚ್ಚಿ ಅದನ್ನು ಸಾರ್ವಜನಿಕ ಶೌಚಾಲಯಗಳನ್ನಾಗಿಸಿದರು. ಪ್ರದರ್ಶನಕಾರರಿಗೆ ಮದ್ಯ, ಮಾಂಸ, ಊಟ, ತಿಂಡಿಗಳನ್ನು ಹಂಚುವ ಧಾಬಾಗಳನ್ನಾಗಿಸಿದ್ದರು.

ಈಗ ಅಮೆರಿಕಾದ ವಿಶ್ವವಿದ್ಯಾಲಯಗಳ ಆವರಣವು ಹಮಾಸ್ ಪರ ಪ್ರತಿಭಟನಾಕಾರರು ರಾತ್ರಿ ಹಗಲು ಸಮಯ ಕಳೆಯುವ ಡೇರೆಗಳಿಂದ ತುಂಬಿವೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಸ್ಥಾಪಕ ಜಾನ್ ಹಾರ್ವರ್ಡ್‌ನ ಪ್ರತಿಮೆಯನ್ನು ಹತ್ತಿ ಅಲ್ಲಿ ಹಾರಾಡುತ್ತಿದ್ದ ಅಮೆರಿಕಾ ಧ್ವಜವನ್ನು ಕಿತ್ತು ಬಿಸಾಡಲಾಗಿದೆ. ಎಲ್ಲಾ ವಿಶ್ವವಿದ್ಯಾಲಯಗಳ ಪ್ರಾಂಗಣಗಳು ಹರಿದ ಫಲಕಗಳು, ಘೋಷಣಾ ಪತ್ರಗಳು ಮತ್ತು ಅಣಕು ಪ್ರತಿಭಟನಾ ಸಾಮಗ್ರಿಗಳಿಂದ ತುಂಬಿವೆ.

ರಸ್ತೆಗಳಲ್ಲಿ ಇಟ್ಟ ಬ್ಯಾರಿಕೇಡ್‌ಗಳನ್ನು ಕಿತ್ತು ಎಲ್ಲೆಂದರಲ್ಲಿ ಬಿಸಾಕಿ ಬಿಟ್ಟಿದೆ. ಕೊಲಂಬಿಯಾ ವಿಶ್ವ ವಿದ್ಯಾಲಯದಲ್ಲಿ ಪ್ರಾರಂಭವಾದ ಈ ಪ್ರದರ್ಶನಗಳೀಗ ದೇಶವ್ಯಾಪಿಯಾಗಿವೆ. ಎಲ್ಲೆಲ್ಲಿ ಅಮೆರಿಕಾ ಧ್ವಜಗಳಿದ್ದವೋ ಅಲ್ಲೆಲ್ಲ ಪಾಲಿಸ್ಟೀನ್ ಧ್ವಜಗಳನ್ನು ಹಾರಿಸುತ್ತಿದ್ದಾರೆ.

ಭಾರತದಲ್ಲಿ ಆ ದಿನಗಳಲ್ಲಿ ನಡೆದ ಪ್ರತಿಭಟನೆಯ ಪರವಾಗಿದ್ದವರು, ಅಮೆರಿಕಾ ಪತ್ರಿಕೆಗಳು, ಸರ್ಕಾರವನ್ನು ಮೇಲ್ಜಾತಿಯ ನಾಜಿಗಳು ಎಂದು ಕರೆದರು. ಅಮೆರಿಕಾ ನ್ಯೂಯಾರ್ಕ್‌ಟೈಮ್ಸ್ ಭಾರತವೀಗ ಸರ್ವಾಧಿಕಾರದಲ್ಲಿ ನರಳುತ್ತಿದೆ ಎಂದಿತು. ಪತ್ರಿಕೆಗಳಂತೂ ಭಾರತದ ಸ್ಥಿತಿ ಉಸಿರುಗಟ್ಟಿಸುವಂತೆ ಇದೆ ಎಂದಿತು. ಪ್ರಜಾಪ್ರಭುತ್ವವೆಂದರೆ ಅಭಿಪ್ರಾಯದ ಪೂರ್ಣ ಸ್ವಾತಂತ್ರ್ಯವೆಂದು ಭಾರತಕ್ಕೆ ಉಚಿತ ಸಲಹೆಗಳನ್ನು ಅಮೆರಿಕಾ ಪತ್ರಿಕೆಗಳು ನೀಡಿದವು. ವಿದ್ಯೆಕಲಿಯಲು ಬಂದ ವಿದ್ಯಾರ್ಥಿಗಳಿಗೆ ನಿರ್ಭಯ ವಾತಾವರಣವನ್ನು ನಿರ್ಮಿಸುವುದು ಭಾರತ ಸರ್ಕಾರದ ಹೊಣೆ ಎಂದು ಉಚ್ಚರಿಸಿದವು.

ಹೀಗೆ ಅಂದಿನ ದಿನಗಳಲ್ಲಿ ಭಾರತವನ್ನು ಎಚ್ಚರಿಸುತ್ತಿದ್ದ ಅಮೆರಿಕಾ ವಿಶ್ವವಿದ್ಯಾಲಯಗಳಲ್ಲಿ ಈಗ ಪೊಲೀಸರ ದಂಡು ಬಂದು ಇಳಿದಿದೆ. ಎಲ್ಲೆಂದರಲ್ಲಿ ಪೊಲೀಸರೇ ತುಂಬಿರುವರು. ಕೊಲಂಬಿಯಾ ಪ್ರಾಂತದ ಸ್ಪೀಕರ್; ಅಧ್ಯಕ್ಷರು ರಾಜಿನಾಮೆ ನೀಡಬೇಕೆಂದು ಕರೆ ನೀಡಿದರು. ಅಮೆರಿಕಾ ಈಗ ಜಗತ್ತಿಗಾಗಿ ತಾನು ಹೆಣೆದ ಬಲೆಯಲ್ಲಿ ತಾನೇ ಸಿಕ್ಕಿಬಿದ್ದಿದೆ. ಯೇಲ್ ವಿಶ್ವವಿದ್ಯಾಲಯದಲ್ಲಿ 120 ವಿದ್ಯಾರ್ಥಿಗಳನ್ನು ಬಂಧಿಸಿ ಹೆಡೆಮುರಿಕಟ್ಟಿ ಎಳೆದೊಯ್ದರು. ಇಸ್ರೇಲಿಗೆ ನೀಡುವ ನೆರವನ್ನು ನಿಲ್ಲಿಸಲು ಕರೆ ನೀಡಲಾಗಿದೆ. ಯಹೂದಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಯುತ್ತದೆ. ಕಾನೂನು ವಿರುದ್ಧ ಚಟುವಟಿಕೆಗಳ ಹೆಸರಿನಲ್ಲಿ ಸರ್ಕಾರವೀಗ ವಿದ್ಯಾರ್ಥಿಗಳ ಮೇಲೆ ಮುಗಿಬಿದ್ದಿದೆ.


ಇಷ್ಟಾಗಿ ಭಾರತದ ಪ್ರತಿಕ್ರಿಯೆಯು ಮಾತ್ರ ಗಾಂಭೀರ್ಯದಿಂದ ಕೂಡಿದೆ. "ಅಮೆರಿಕಾ ಸರ್ಕಾರವು ವಿದ್ಯಾರ್ಥಿಗಳಿಗೆ ಕಾನೂನು ನೀಡಿದ ಸ್ವಾತಂತ್ರ್ಯವನ್ನು ಒದಗಿಸುವ ವಾತಾವರಣವನ್ನು ಕಲ್ಪಿಸಬೇಕು. ಪ್ರಜಾಪ್ರಭುತ್ವವೆಂದರೆ ಸ್ವಾತಂತ್ರ್ಯವನ್ನೂ ಸ್ವಾತಂತ್ರ್ಯದ ಪರಿಮಿತಿಯನ್ನೂ ಸಮತೋಲನದಿಂದ ರಕ್ಷಿಸುವ ಹೊಣೆಯಾಗಿದೆ. ಸ್ವಾತಂತ್ರ್ಯವು ಹೇಗಿರಬೇಕೆಂದರೆ ನಾವು ಬೇರೆಯವರಿಗೆ ಸಲಹೆ ನೀಡುವಾಗ ಯಾವ ನಿಲುವನ್ನು ಹೊಂದಿರುವೆವೋ ಹಾಗಿರಬೇಕು" ಎಂದು ಹೇಳಿಕೆಯನ್ನು ನೀಡಿದೆ.

ಸದ್ಯದಲ್ಲಿ ಅಮೆರಿಕಾದ ಕೊಲಂಬಿಯಾದಂತೆ ಹಲವು ವಿಶ್ವವಿದ್ಯಾಲಯಗಳು ತಮ್ಮ ಕಾಲೇಜುಗಳನ್ನು ಮುಚ್ಚಿಸಿವೆ. ನ್ಯಾಯಾರ್ಕ್ ಮತ್ತು ಯೇಲ್ ವಿಶ್ವವಿದ್ಯಾಲಯುಗಳಲ್ಲಿ ಪ್ರತಿಭಟನೆ ಮಾಡುವ ವಿದ್ಯಾರ್ಥಿಗಳನ್ನು ಸಾರಾಸಗಟಾಗಿ ಬಂಧಿಸಲಾಗಿದೆ. ಹಾರ್ವರ್ಡ್ ವಿಶ್ವ ವಿದ್ಯಾಲಯದ ಆವರಣಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿದೆ.

ಸಲಹೆ ನೀಡುವುದು; ವ್ಯಂಗವಾಗಿ ಪ್ರತಿಕ್ರಿಯಿಸುವುದು, ಭಾರತದ ನಿಲುವನ್ನು ಸದಾ ಹೀಯಾಳಿಸುವುದೇ ಮೊದಲಾದ ಕ್ರಮಗಳನ್ನು ಅವಲಂಬಿಸಿಕೊಂಡ ಅಮೆರಿಕಾ ಈಗ ತಾನು ಹೇಳಿದುದನ್ನು ನುಂಗಬೇಕಾಗಿದೆ. ಭಾರತದ ಕರ್ಮ ಸಿದ್ಧಾಂತವನ್ನು ಅಮೆರಿಕಾದ ಕ್ರೈಸ್ತರೂ ಅನುಭವಿಸಬೇಕಾಗಿದೆ.

# ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ

– ಪಾರಿಜಾತ. ಬಿ.ಎಸ್. ಬೆಂಗಳೂರು.



ಮನುಷ್ಯನು ಬಹಳ ಹಿಂದಿನಿಂದಲೂ ತನ್ನ ದೇಹ ಹಾಗು ಮನಸ್ಸನ್ನು ಹಗುರಾಗಿಸಲು ಪ್ರಕೃತಿಯ ಮಗುವಾಗಿ ಅಂಬೆಗಾಲಿಕ್ಕುತ್ತಾ, ತೆರೆದ ಬೆಳಕಿನ ಕಂಗಳಲ್ಲಿ ಅನೇಕ ವಿಸ್ಮಯಗಳನ್ನು ತುಂಬಿಕೊಳ್ಳುತ್ತಾ ಬದುಕಿದ್ದಾನೆ. ನೀರು,ಗಾಳಿ, ಮರಗಿಡ, ಪ್ರಾಣಿ ಪಕ್ಷಿಗಳ ಒಡನಾಟದಲ್ಲಿ ತನ್ನನ್ನು ಕಂಡುಕೊಂಡಿದ್ದಾನೆ. ತನ್ನ ಜೀವನದ ಹಾದಿಯು ಸುಖಮಯವಾಗಿರಲು ತನಗೆ ಸರಿಯೆನಿಸಿದ ಕಾರ್ಯಗಳನ್ನು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರಣಗಳೊಂದಿಗೆ ಕೈಗೊಂಡು ಸದಾ ಶಾಂತ ಜೀವನವನ್ನು ತನ್ನದಾಗಿಸುವ ಪ್ರಯತ್ನದಲ್ಲಿದ್ದಾನೆ. ಫಲಾಪೇಕ್ಷೆಯಿಲ್ಲದೆ ಸಮಾಜದ ಕಲ್ಯಾಣಕ್ಕಾಗಿ ತಮ್ಮನ್ನು ತಾವು ಮುಡಿಪಾಗಿಸಿ ಜೀವನ ಮುಡುಪಾಗಿಸಿದವರು ಅನೇಕರಿದ್ದಾರೆ. ಕಾಲಾಂತರದಿಂದಲೂ ಇತರರಿಗೆ ಪ್ರೇರಣೆಯಾಗಿ, ಮಾರ್ಗದರ್ಶಕರಾಗಿ ಸಮಾಜದ ಸುಧಾರಕರಾಗಿ ಹಚ್ಚ ಹಸಿರಾಗಿ ಉಳಿದವರಿದ್ದಾರೆ.

ಇಂತಹ ಗುರು ಪರಂಪರೆಯ ಅತ್ಯಂತ ಮಹತ್ವದ ಸಾಧನೆಗೈದ ಅನೇಕ ಗುರುಪೀಠಗಳಲ್ಲಿ ಶ್ರೀರಂಭಾಪುರಿ ಪೀಠವು ಒಂದು. ಇದು ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನಲ್ಲಿದೆ. ವೀರಶೈವರ ಪಂಚ ಪೀಠಗಳಲ್ಲಿ ಇದು ಮೊದಲನೆಯದು. ಕರ್ನಾಟಕದ ಕಾಶ್ಮೀರ ಎಂದು ಕರೆಯಲಾಗುವ ಹಚ್ಚಹಸಿರಿನ ರಮಣೀಯ ಪ್ರಕೃತಿಯ ನೆಲೆಯಾದ ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ ಶ್ರೀ ರೇಣುಕಾಚಾರ್ಯರು ನೆಲೆ ನಿಂತು ಸ್ಥಾಪಿಸಿದ ಪೀಠವು ಇದಾಗಿದೆ.

## ಐತಿಹಾಸಿಕ ಹಿನ್ನೆಲೆ

ಈ ಪೀಠವು ತನ್ನದೇ ಆದ ಸಾವಿರಾರು ವರ್ಷಗಳ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಯುಗಯುಗಗಳಲ್ಲೂ ಈ ಗುರು ಪರಂಪರೆಯು ಮಹತ್ವವನ್ನು ಹೊಂದಿದೆ. ಆಂಧ್ರ ಪ್ರದೇಶದ ಕೋಲನುಪಾಕದ ಸೋಮೇಶ್ವರ ಲಿಂಗದಿಂದ ಉದ್ಭವಿಸಿದ ಶ್ರೀಜಗದ್ಗುರು ಶ್ರೀ ರೇಣುಕಾಚಾರ್ಯರು ಪ್ರತೀ ಯುಗದಲ್ಲಿಯೂ ಅವತರಿಸುತ್ತಾ ಬಂದಿದ್ದಾರೆಂದು ನಂಬುವರು. ದ್ವಾಪರಯುಗದಲ್ಲಿ ಶ್ರೀ ರೇಣುಕಾ ಶಿವಾಚಾರ್ಯರು ಅಗಸ್ತ್ಯ ಮುನಿಗಳಿಗೆ ಉಪದೇಶಿಸಿದ ವೀರಶೈವ ಸಿದ್ಧಾಂತ ಕುರಿತು ಶ್ರೀಶಿವಯೋಗಿ ಶಿವಾಚಾರ್ಯರವರು ಸಂಗ್ರಹಿಸಿ ಬರೆದಿಟ್ಟಿರುವ “ಸಿದ್ಧಾಂತ ಶಿಖಾಮಣಿ” ಗ್ರಂಥದಲ್ಲಿ ಉಲ್ಲೇಖವಿದೆ. ಕೃತಯುಗದಲ್ಲಿ

ಏಕಾಕ್ಷರ ಶಿವಾಚಾರ್ಯರಾಗಿ. ತ್ರೇತಾಯುಗದಲ್ಲಿ ಏಕವಕ್ತ್ರ ಶಿವಾಚಾರ್ಯರಾಗಿ, ದ್ವಾಪರಯುಗದಲ್ಲಿ ಶ್ರೀ ರೇಣುಕ ಶಿವಾಚಾರ್ಯರಾಗಿ, ಕಲಿಯುಗದಲ್ಲಿ ಶ್ರೀ ರೇವಣಾರಾಧ್ಯರಾಗಿ ಅವತರಿಸಿದ್ದಾರೆ.




### ಪೌರಾಣಿಕ ಹಿನ್ನೆಲೆ

ಹಿಂದೆ ತ್ರೇತಾಯುಗದಲ್ಲಿ ಶ್ರೀರಾಮನೊಂದಿಗೆ ಯುದ್ಧದಲ್ಲಿ ಸೋತು ನೋವಿನ ಮಡುವಿನಲ್ಲಿದ್ದ ರಾವಣನು ತನ್ನ ತಮ್ಮನಾದ ವಿಭಿಷಣನನ್ನು ಕುರಿತು " ನಾನು 9 ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಬೇಕೆಂಬ ಸಂಕಲ್ಪವನ್ನು ಮಾಡಿದ್ದೆ", ಅದರಂತೆ 6 ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ್ದೇನೆ. ಇನ್ನೂ 3 ಕೋಟಿ ಬಾಕಿ ಇದೆ ತಮ್ಮನಾಗಿ ನೀನು ಈ ಅಣ್ಣನ ಸಂಕಲ್ಪವನ್ನು ಪೂರ್ಣಗೊಳಿಸು ಎಂದು ಹೇಳಿ ಕಣ್ಮುಚ್ಚಿದನು. ಆತನ ನುಡಿಯಂತೆ ವಿಭೀಷಣನು ಹೇಗೆ ಕಾರ್ಯ ಕೈಗೊಳ್ಳುವುದೆಂದು ಯೋಚಿಸುತ್ತಿರುವಾಗ ಲಂಕಾಕ್ಕೆ ಬಂದ ಶ್ರೀ ಜಗದ್ಗುರು ರೇಣುಕಾ ಭಗವತ್ಪಾದರನ್ನು ಕಂಡನು. ಅವರ ಹಿರಿಮೆಯನ್ನು ಮಹಿಮೆಯನ್ನು ತಿಳಿದು ಅವರ ಪಾದಪೂಜೆ ಸಹಿತ ಆತಿಥ್ಯವನ್ನು ಕೈಗೊಂಡನು. ನಂತರ ತನ್ನ ಅಣ್ಣನ ಸಂಕಲ್ಪವನ್ನು ಅವರಲ್ಲಿ ತಿಳಿಸಲು ಅವರು ಮೂರು ಕೋಟಿ ಆಚಾರ್ಯರ ಅವತಾರವನ್ನು ತಾಳಿ ಸಂಕಲ್ಪವನ್ನು ಪೂರ್ಣಗೊಳಿಸಿ, ವಿಭೀಷಣನನ್ನು ಆಶೀರ್ವದಿಸಿದರು. ಲಂಕಾದ ಜಾಫ್ನದಿಂದ 15 ಕಿಮೀ ದೂರದಲ್ಲಿರುವ ಕಿರುಮಲೈ ಪ್ರದೇಶದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಆಶ್ರಮಗಳು ಮಠಗಳು ನೂರಾರು ವೀರಶೈವ ಮನೆತನಗಳು ಇಂದಿಗೂ ನಿದರ್ಶನಗಳಾಗಿವೆ. ನಂತರ ಇವರು ಪ್ರಕಟವಾಗಿಯೂ, ಗುಪ್ತವಾಗಿಯೂ ಭೂಮಿಯಲ್ಲೆಲ್ಲ ಸಂಚರಿಸಿ, ತಮ್ಮ ಕಾರ್ಯವನ್ನು ನಡೆಸಿ, ಕೊಲ್ಲಿಪಾಕಿ ಕ್ಷೇತ್ರದ ಶ್ರೀ ಸೋಮೇಶ್ವರ ಲಿಂಗದಲ್ಲಿ ಲೀನವಾದರು. ಕ್ರಿ.ಶ. 950 ಅನೇಕ ಭಾಷೆಗಳಲ್ಲಿ ರಚಿತವಾದ 59 ಗ್ರಂಥಗಳಲ್ಲಿ ಜಗದ್ಗುರು ಶ್ರೀ ರೇವಣಸಿದ್ಧರ ಮಹಿಮೆ ಹಾಗು ಚರಿತ್ರೆಯನ್ನು ವಿವರಿಸಲಾಗಿದೆ. ಈ ಪರಂಪರೆಯ ಸಾಲಿನಲ್ಲಿ ಇವರ ನಂತರ 28 ಪೀಠಾಧಿಪತಿಗಳಾಗಿದ್ದು ನಂತರ 29ನೇ ಪೀಠಾಧಿಪತಿಯಾಗಿ ಶ್ರೀ ರೇಣುಕ ಸಿದ್ಧೇಶ್ವರರು ದೇಶದೆಲ್ಲೆಡೆ ಸಂಚರಿಸಿದರು. ಇವರು ಸಂಚರಿಸಿದ ಸ್ಥಳಗಳಲ್ಲೆಲ್ಲಾ ದೇವಾಲಯಗಳು ಸಾಕ್ಷಿಗಳಾಗಿ ಇಂದಿಗೂ ನಿಂತಿವೆ. ಕಲಬುರುಗಿಯ ರಟಗಲ್ಲ ರೇವಣಸಿದ್ಧೇಶ್ವರ, ತುಮಕೂರಿನ ಸಿದ್ಧರ ಬೆಟ್ಟ, ಸೊಲ್ಲಾಪುರದ ಸಿದ್ಧೇಶ್ವರ ದೇಗುಲ, ಬೆಂಗಳೂರಿನ ರಾಮನಗರದ ರೇವಣಸಿದ್ಧೇಶ್ವರ ಬೆಟ್ಟ, ಶಿವಗಂಗಾದ ರೇವಣ ಸಿದ್ಧ ದೇಗುಲ ಇತ್ಯಾದಿ. ಶ್ರೀ ಜಗದ್ಗುರು ಶಂಕರಾಚಾರ್ಯರಿಗೆ ಶ್ರೀ ಚಂದ್ರ ಮೌಳೇಶ್ವರ ವಿಗ್ರಹ ಹಾಗು ಗಣಪತಿಯ ವಿಗ್ರಹವನ್ನು ಅವರು ನೀಡಿದರೆಂಬ ಮಾಹಿತಿ ದಾಖಲಾಗಿದೆ.

ಈ ಗುರು ಪರಂಪರೆಯ ಕಾಲದಲ್ಲಿ ಪೀಠಾಧಿಪತಿಗಳು, ವಿಕ್ರಮಾದಿತ್ಯನಿಗೆ ಖಡ್ಗ ಪ್ರದಾನ, ಬಿಜ್ಜಳನಿಗೆ ಖಡ್ಗ ಪ್ರದಾನ ಮಾಡಿದ ಉಲ್ಲೇಖಗಳಿವೆ. ಅನೇಕ ಕೆರೆಕಟ್ಟೆ ಬಾವಿಗಳ ನಿರ್ಮಾಣ, ಅನೇಕರ ಬಂಧನ ಮುಕ್ತಿ ಮೊದಲಾಗಿ ಇವರು ಕೈಗೊಂಡ ಕಾರ್ಯಗಳು ಸಾಮಾಜಿಕ,

ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳ ಅಭಿವೃದ್ಧಿಗೆ ಕಾರಣವಾಗಿವೆ. ಈ ಪೀಠಾಧಿಪತಿಗಳಲ್ಲಿ ಎರಡನೇಯವರಾದ ಶ್ರೀ ರುದ್ರಮುನಿಗಳು ಕಾಲಜ್ಞಾನವನ್ನು ಬರೆದಿದ್ದು "ರುದ್ರಮುನಿ ಕಾಲಜ್ಞಾನವೆಂದೆ" ಹೆಸರಾಗಿದೆ. ಬಾಳೆಹೊನ್ನೂರು, ಕೇದಾರ, ಕಾಶಿ, ಉಜ್ಜಯಿನಿ, ಶ್ರೀಶೈಲ ವೀರಶೈವ ಪಂಚಪೀಠಗಳು ಭಾರತದಲ್ಲಿವೆ. ಪ್ರಸ್ತುತ ಶ್ರೀ ಸಂಸ್ಥಾನವು ಧಾರ್ಮಿಕ, ಶೈಕ್ಷಣಿಕ ಹಾಗು ಸಾಮಾಜಿಕ ಸಾಂಸ್ಕೃತಿಕ ಯೋಜನೆಗಳ ಮೂಲಕ ಸಮಾಜದ ಜನರ ಕಲ್ಯಾಣಕ್ಕಾಗಿ ದೇಶದ ಅಭಿವೃದ್ಧಿಗಾಗಿ ಉತ್ತಮ ಕಾರ್ಯವನ್ನು ಕೈಗೊಂಡಿದೆ. ಪ್ರಸ್ತುತ ಶ್ರೀ ಶ್ರೀ ಶ್ರೀಜಗದ್ಗುರು ಪ್ರಸನ್ನರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮೀ–ಜಿಯವರು ಬಾಳೆಹೊನ್ನೂರು ಶ್ರೀ ಸಂಸ್ಥಾನದ 121 ನೇ ಪೀಠಾಧಿಪತಿಯಾಗಿ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗು ಸಾಂಸ್ಕೃತಿಕ ಕ್ಷೇತ್ರಗಳ ಉತ್ತಮ ಕಾರ್ಯಕ್ರಮಗಳ ಮೂಲಕ ಲೋಕಕಲ್ಯಾಣ ಕಾರ್ಯವನ್ನು ಕೈಗೊಂಡಿದ್ದಾರೆ. ಮಠದಲ್ಲಿ ವಿದ್ಯಾರ್ಜನೆ ಬಯಸಿ, ಅರಸಿ ಬರುವ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಕಲ ವ್ಯವಸ್ಥೆಯೂ ಇದೆ. ಪ್ರಸ್ತುತ ಸುಮಾರು 400 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗದಲ್ಲಿ ತೊಡಗಿದ್ದಾರೆ.

ಬಾಳೆಹೊನ್ನೂರು ಕೇಂದ್ರ ಪ್ರದೇಶದಿಂದ ಸುಮಾರು 7 ಕಿ.ಮೀ ದೂರದಲ್ಲಿನ ಈ ಮಠವು ವಿಶಾಲವಾದ ಪ್ರದೇಶದಲ್ಲಿದೆ. ಸುಂದರ ಕಂಬಗಳ ಗೋಪುರದ ಆಕರ್ಷಕ ಹೆಬ್ಬಾಗಿಲನ್ನು ಹೊಂದಿದೆ. ಒಳಭಾಗದಲ್ಲಿ ಪ್ರಶಾಂತ ವಾತಾವರಣದ ವಿಶಾಲ ಪ್ರದೇಶವು ಕಣ್ಮನ ಸೆಳೆಯುತ್ತದೆ. ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಸೂಕ್ತವಾದ ವಾತಾವರಣ ಇಲ್ಲಿದೆ.

**ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ :** ಭದ್ರ ನದಿಯ ದಂಡೆಯಲ್ಲಿ ಮಲಯಾಚಲದ ಸುಂದರ ಪ್ರಕೃತಿಯ ನಡುವೆ ವಿಶಾಲ ಮುಂಭಾಗವನ್ನು ಹೊಂದಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದ ಮುಖ್ಯ ಕೇಂದ್ರ ಬಿಂದು. ವಿಶಾಲವಾದ ಪಡಸಾಲೆ, ಕಲ್ಲಿನ ಕಂಬಗಳು, ಒಳಭಾಗದಲ್ಲಿ ವಿಶಾಲವಾದ ಹಜಾರ, ಗರ್ಭಗೃಹದಲ್ಲಿ ಶ್ರೀ ರೇಣುಕಾಚಾರ್ಯರು ದರ್ಶನವಿತ್ತರೆ ವಿಗ್ರಹದ



ಮುಂಭಾಗದಲ್ಲಿ ಲಿಂಗರೂಪಿಯಾಗಿ ವಿರಾಜಮಾನರಾಗಿದ್ದಾರೆ. ಇಲ್ಲಿ ಅನ್ನದಾನಕ್ಕೆ ಅಕ್ಕಿ ಸೇವೆ ನೀಡುವ ಅವಕಾಶವಿದೆ. ಈ ದೇಗುಲದ ಒಳ ಆವರಣದಲ್ಲಿ ಶ್ರೀ ಭಗವತ್ಪಾದರ ಮಾಹಿತಿ, ಮೈಸೂರು ಒಡೆಯರು ಇಲ್ಲಿಗೆ ಬೇಟಿ ನೀಡಿದ ಮಾಹಿತಿ ಒಳಗೊಂಡತೆ ಆಕರ್ಷಕ ಚಿತ್ರಪಟಗಳಿವೆ.

**ಶ್ರೀವೀರಭದ್ರಸ್ವಾಮಿ ದೇಗುಲ :** ಮಠದ ಆವರಣದಲ್ಲಿ ಎಡಭಾಗಕ್ಕೆ ಚೋಳರ ಕಾಲದ ಶೈಲಿಯ ಕಲ್ಲಿನ ಕಟ್ಟಡದಲ್ಲಿ ಮೂರು ಅಂಕಣದ ದೇಗುಲವು ಆಕರ್ಷಿಸುತ್ತದೆ. ಕಲ್ಲಿನ ಕಂಬಗಳು ಗೋಡೆಗಳಿಂದ ಆವೃತವಾದ ದೇಗುಲದ ಮಧ್ಯ ಭಾಗದಲ್ಲಿ ಬಸವ ಇನ್ನಿತರ ದೇವರ ವಿಗ್ರಹಗಳಿವೆ. ಇಲ್ಲಿನ ಕಂಬವೊಂದರಲ್ಲಿ ಶ್ರೀ ಶ್ರೀ ರುದ್ರಮುನಿ ಭಗವತ್ಪಾದರು ವಿಭೂತಿಯಲ್ಲಿ ಚಿತ್ರಿಸಿದ ಬಸವ ಕಾಲಾಂತರದಲ್ಲಿ ಉಬ್ಬು ಶಿಲೆಯಾಗಿ ಉದ್ಭವಗೊಂಡು ಬೆಳೆಯುತ್ತಿದೆ ಎನ್ನಲಾಗುವ ಶಿಲ್ಪವಿದೆ. ಗರ್ಭಗುಡಿಯಲ್ಲಿ ಶ್ರೀ ವೀರಭದ್ರ ಸ್ವಾಮಿಯು ಸುಂದರನಾಗಿ ವಿರಾಜಿಸಿದ್ದಾನೆ.

**ಶ್ರೀ ಭದ್ರಕಾಳಿ ದೇಗುಲ :** ಶ್ರೀವೀರಭದ್ರ ದೇವರ ಸಾನ್ನಿಧ್ಯದೊಂದಿಗೆ ಇಲ್ಲಿ ತಾಯಿ ಭದ್ರಕಾಳಿಯ ದೇಗುಲವಿದೆ. ವಿಶಾಲ ಆವರಣದಲಿ ಪುಟ್ಟ ಗುಡಿಯಲ್ಲಿ ತಾಯಿ ನೆಲೆಸಿದ್ದಾಳೆ.

**ಶ್ರೀ ಚೌಡೇಶ್ವರಿ ದೇಗುಲ :** ಪಕ್ಕದ ಆವರಣದಲ್ಲಿ ಎತ್ತರದ ಮೆಟ್ಟಿಲುಗಳನ್ನೇರಿದರೆ ತಾಯಿ ಚೌಡೇಶ್ವರಿಯು ನೆಲೆಸಿದ್ದಾಳೆ. ವಿಶಾಲವಾದ ದೇಗುಲದ ಆವರಣದ ಗರ್ಭಗೃಹದಲ್ಲಿ ಸುಂದರ ಕಪ್ಪು ಶಿಲೆಯ ಪುಟ್ಟ ವಿಗ್ರಹ ರೂಪದ ತಾಯಿ ದರ್ಶನ ನೀಡುತ್ತಾಳೆ.

**ಶ್ರೀ ರುದ್ರಮುನಿ ಶಿವಾಚಾರ್ಯರ ಸ್ಥಳ :** ಪೀಠದ ಎರಡನೇಯ ವರಾದ ಶ್ರೀ ಶ್ರೀ ರುದ್ರಮುನಿ ಶಿವಾಚಾರ್ಯರು ಜೀವಂತ ಸಮಾಧಿಯಾದ ಸ್ಥಳವು ಇಲ್ಲಿದೆ. ಇದೊಂದು ಶಕ್ತಿ ಪೀಠವಾಗಿ ನಂಬಿ ಬರುವ ಭಕ್ತರ ಬೇಡಿಕೆಯನ್ನು ಈಡೇರಿಸುತ್ತಿದೆ.

ಹೊರ ಆವರಣದಲ್ಲಿ ಮುಕ್ತಿ ಸ್ಥಳವಿದೆ. ಇಲ್ಲಿ 15 ಆಚಾರ್ಯರ ಲಿಂಗೈಕ್ಯರಾದ ಗದ್ದುಗೆ (ಸಮಾಧಿ) ಗಳಿವೆ. ನಂತರ ಮುಂದುವರೆದರೆ ಲಿಂಗೈಕ್ಯರಾದ 104 ಆಚಾರ್ಯರ ಪ್ರತಿಬಿಂಬವಾಗಿ ಗದ್ದುಗೆಗಳನ್ನು ಸ್ಥಾಪಿಸಿ ಅದರ ಮೇಲೆ ಶಿವಲಿಂಗಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿ ನಿಲಯಗಳು, ಭೋಜನ ಶಾಲೆ ಸುಸಜ್ಜಿತವಾಗಿವೆ. ಆವರಣದಲ್ಲಿ ಶಿಲಾಶಾಸನಗಳು, ಐತಿಹಾಸಿಕ ಮಾಹಿತಿ ನೀಡುವ ಶಿಲೆಗಳು ಇಲ್ಲಿವೆ.

### ಯಾತ್ರಿಕರಿಗೆ ವಿಶೇಷ ಮಾಹಿತಿ

- ಬೆಂಗಳೂರಿನಿಂದ ಸುಮಾರು 300ಕಿ.ಮೀ ದೂರವಿದೆ.
- ಇಲ್ಲಿ ವಸತಿ ವ್ಯವಸ್ಥೆ ಇದ್ದು, ಬೆಳಿಗ್ಗೆ ಮಧ್ಯಾನ ರಾತ್ರಿ ತಿಂಡಿ, ಊಟದ ವ್ಯವಸ್ಥೆಯಿದೆ.
- ಶೃಂಗೇರಿ, ಮಂಗಳೂರು, ಉಡುಪಿ, ಶಿವಮೊಗ್ಗ ಹತ್ತಿರವಿದ್ದು ಬಸ್ಸುಗಳ ವ್ಯವಸ್ಥೆಯಿದೆ.
- ಮಾರ್ಚ್ ತಿಂಗಳಿನಲ್ಲಿ ಶ್ರೀ ವೀರಭದ್ರಸ್ವಾಮಿಯ ಜಾತ್ರಾ ಮಹೋತ್ಸವ ನಡೆಯುತ್ತದೆ.
- ಬಾಳೆಹೊನ್ನೂರು ಸುತ್ತಮುತ್ತಲ ಪ್ರದೇಶದಲ್ಲಿ ಆಕರ್ಷಿಸುವ ಜಲಪಾತಗಳು, ಬೆಟ್ಟಗುಡ್ಡಗಳು, ತೋಟಗಳು ಕಣ್ಮನ ಸೆಳೆಯುತ್ತವೆ.
- ವಿದ್ಯಾರ್ಥಿಗಳಿಗೆ ವಸತಿ, ಊಟದ ವ್ಯವಸ್ಥೆಯೊಂದಿಗೆ ಉತ್ತಮ ತರಬೇತಿಯನ್ನು ನೀಡಲಾಗುತ್ತದೆ.

# ಫೋಟೊ... ನಿನದೆಂಥಾ ಮಾಟವೆ

– ಶಾರದಾ ವಿ. ಮೂರ್ತಿ
ಮೈಕೋ ಬಡಾವಣೆ, ಬೆಂಗಳೂರು

ನಮ್ಮ ಹತ್ತಿರದ ಸಂಬಂಧಿಕರೊಬ್ಬರ ಮಗಳ ಮದುವೆಗೆ ಬಳಗದವರೆಲ್ಲಾ ಸೇರಿದ್ದೆವು. ಮದುವೆ ಶಾಸ್ತ್ರಗಳನ್ನೆಲ್ಲಾ ನೋಡುವ ಇಚ್ಛೆಯಿಂದ ಮಂಟಪದ ಎದುರಿನಲ್ಲಿ ಸಾಕಷ್ಟು ಮುಂದೆಯೇ ಕುಳಿತಿದ್ದೆವು. ಜತೆಜತೆಗೇ ಹರಟೆಯೂ ಸಾಗುತ್ತಿತ್ತು. ಆದರೆ ತುಸು ಹೊತ್ತಿನಲ್ಲಿಯೇ ನಮ್ಮ ಈ ವೀಕ್ಷಣೆಗೆ ಸಂಪೂರ್ಣವಾಗಿ ಅಡ್ಡಿಯಾಗಿತ್ತು.

ಮಂಟಪಕ್ಕೆ ಅಡ್ಡವಾಗಿ, ನಮಗೆ ಸ್ವಲ್ಪವೂ ಕಾಣದಂತೆ ಛಾಯಾಗ್ರಾಹಕರು ಹಾಗೂ ವೀಡಿಯೋದವರು ಮುತ್ತಿಕೊಂಡಿದ್ದರು. ನಮಗೆ ಮದುವೆ ನೋಡಲು ಅವಕಾಶವಾಗುವಂತೆ ನಿಂತುಕೊಂಡು ಫೋಟೊ ತೆಗೆಯುವಂತೆ ನಮ್ಮಲ್ಲಿ ಹಿರಿಯರೊಬ್ಬರು ಅವರನ್ನು ವಿನಂತಿಸಿಕೊಂಡರು. ಆದರೆ ಅವರ ಮಾತನ್ನು ಅಡ್ಡ ನಿಂತಿದ್ದವರು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಕೊನೆಗೆ ಆ ಹಿರಿಯರು ತುಸು ಅಸಹನೆಯಿಂದ, ಆದರೆ ನಯವಾಗಿಯೇ "ನಾವು ಮದುವೆ ನೋಡುವುದಕ್ಕೆ ಅಂತ ಬಂದಿದ್ದೀವಿ. ನಮಗೂ ಸ್ವಲ್ಪ ಅವಕಾಶ ಮಾಡಿಕೊಡ್ತೀರಾ..." ಎಂದು ಕೇಳಿದಾಗ ಆ ಛಾಯಾಗ್ರಾಹಕರಿಗಂತೂ ವಿಪರೀತ ಕೋಪ ಬಂದು ಬಿಟ್ಟಿತು.

"ನಮಗೆ ಫೋಟೋಗೆ, ವೀಡಿಯೋಗೆ ಅಂತಾನೇ ಕರೆಸಿದ್ದಾರೆ. ನಮಗೆ ಸರಿ ಅನ್ನಿಸಿದ ಹಾಗೆ ನಾವು ನಿಂತು ಫೋಟೊ ತೆಗೆಯಬೇಕಾಗುತ್ತೆ. ನಾವು ತೆಗೆದಿರೋ ಫೋಟೊಗಳು ಶಾಶ್ವತವಾಗಿ ಇರುವಂತಹವು. ಹಾಗಿರುವಾಗ ನಾವು ತೆಗೆದಿರೋ ಫೋಟೋಗಳು ಸರಿ ಬಾರದಿದ್ದರೆ ನಮ್ಮ ವೃತ್ತಿಗೇ ಕಳಂಕ ತಾನೇ? ನೀವು ಸ್ವಲ್ಪ ಹೊಂದಾಣಿಕೆ ಮಾಡ್ಕೋಬೇಕು. ಅರ್ಥ ಮಾಡಿಕೊಳ್ಳಿ. ಹಾಗೇ ಪಕ್ಕದಲ್ಲಿ ಟಿ.ವಿ. ಯ ಪರದೆಯಲ್ಲಿ ಬರ್‍ತಾ ಇದೆಯಲ್ಲ ದೃಶ್ಯಗಳು... ನೋಡಿಕೋಳ್ಳಿ" ಎಂದು ತುಟಿ ಮೀರಿದ ಮಾತುಗಳನ್ನಾಡಿದಾಗ ನಮಗೆಲ್ಲರಿಗೂ ವಿಪರೀತ ಅವಮಾನವಾಗಿತ್ತು. ಆದರೂ ಮದುವೆ ಮನೆಯಲ್ಲಿ ಬೇಡದ ದೃಶ್ಯ ಸೃಷ್ಟಿಸುವುದು ಬೇಡವೆಂದುಕೊಂಡು ನಾವೇ ಸುಮ್ಮನಾದೆವು.

ಆಗೀಗ ಮಂಟಪದತ್ತ ದೃಷ್ಟಿ ಹರಿಸುತ್ತಾ ಕಂಡಷ್ಟಕ್ಕೇ ತೃಪ್ತಿಪಟ್ಟುಕೊಳ್ಳುತ್ತಿದ್ದೆವು. ಹಾಗೆಯೇ ನಮ್ಮೆಲ್ಲರ ದೃಷ್ಟಿಯೂ ಒಂದು ಪಕ್ಕದಲ್ಲಿ ಟಿ. ವಿ. ಪರದೆಯಲ್ಲಿ ಬರುತ್ತಿದ್ದ ದೃಶ್ಯಗಳತ್ತ ಹೊರಳಿತ್ತು. ಅದರಲ್ಲಿ ಆಗ ಮದುವೆಯ ಮಂಟಪದಲ್ಲಿ ನಡೆಯುತ್ತಿದ್ದ ಶಾಸ್ತ್ರಗಳು. ಅದಕ್ಕಿಂತ ಹೆಚ್ಚಾಗಿ ಅಲ್ಲಿ ಹಿಂದೆ ಮುಂದೆ ಇದ್ದವರು, ಮಂಟಪದ ಸಿಂಗಾರ ಅಲ್ಲಿರುವ ಪರಿಕರಗಳು, ಎಲ್ಲವನ್ನು ತೋರಿಸುತ್ತಿದ್ದವು. ಶಾಸ್ತ್ರಗಳು, ವಿಧಿ ವಿಧಾನಗಳನ್ನು ಪೂರ್ಣವಾಗಿ ಅವರು ಅಲ್ಲಿ ತೋರಿಸುತ್ತಿರಲಿಲ್ಲ. ಹಾಗೆಯೇ ಪಕ್ಕದಲ್ಲಿದ್ದ ಮತ್ತೊಂದು ಟಿ. ವಿ. ಪರದೆಯಲ್ಲಿ ಮತ್ತಷ್ಟು ದೃಶ್ಯಾವಳಿಗಳು ಸರಿದು ಹೋಗುತ್ತಿದ್ದವು. ಅತ್ತ ಕಣ್ಣು ಹಾಯಿಸಿದಾಗ ಅವೆಲ್ಲಾ ಮದುವೆಯ ನಂತರದ ಫೋಟೋಗಳಂತೆ ಭಾಸವಾಗುತ್ತಿತ್ತು. ಮದುವೆಗೆ ಮೊದಲಿನ

ಛಾಯಾ ಚಿತ್ರೀಕರಣವೆಂದು ಅರ್ಥವಾಗಲು ತುಸು ತಡವಾಗಿತ್ತು. ಪ್ರಿ ವೆಡ್ಡಿಂಗ್ ಫೋಟೋ ಶೂಟ್ ಎಂಬ ಹೆಸರಿನಲ್ಲಿ ಈಗ ಮದುವೆಗೆ ಮೊದಲು ಪ್ರಚಲಿತವಿರುವ ಮುಖ್ಯ ಕಾರ್ಯಕ್ರಮವಂತೆ. ಅದು ನಮಗೆ ನೋಡುವುದಕ್ಕೆ ಬಲು ಕಷ್ಟವೆನಿಸುತ್ತಿತ್ತು. ಆದರೆ ಹೆಚ್ಚು ಜನರು ನೋಡಲಿ ಎಂದು ಅದನ್ನು ಚಿತ್ತರಿಸುವ ವ್ಯವಸ್ಥೆ ಮಾಡಿದವರಿಗೆ ಬಲು ಆನಂದ ಇರಬೇಕು. ಎಲ್ಲದಕ್ಕೂ ಅದು ಈಗಿನ ಟ್ರೆಂಡ್ ಎಂಬ ಅಭಿದಾನ! ಎಲ್ಲರೂ ಮಾಡುತ್ತಾರಲ್ಲ ಎಂದು ನಾವೂ ಮಾಡುವುದು. ಇಲ್ಲವಾದರೆ ನಾವು ಹಳೆಯ ಕಾಲದವರಾಗುತ್ತೇವಲ್ಲ.

ಮದುವೆ ನೋಡಲೆಂದು ಬಂದವರು ಇಂತಹ ಬೇಡದ ದೃಶ್ಯಾವಳಿಗಳನ್ನೆಲ್ಲಾ ನೋಡಬೇಕೆ... ಬೇಡವೆಂದರೆ ಅತ್ತ ಕಣ್ಣು ಹಾಯಿಸದಿದ್ದರಾಯಿತು. ಅದನ್ನು ನೋಡಲೇಬೇಕೆಂಬ ಆಗ್ರಹವಿಲ್ಲವಲ್ಲ! ಮದುವೆಗೆ ಮೊದಲಿನ ಚಿತ್ರೀಕರಣವೀಗ ಮದುವೆಯ ಪಟ್ಟಿಯಲ್ಲಿ ಭದ್ರವಾಗಿ ಸೇರಿಕೊಂಡಿದೆ. ಬೇಡವೆಂದರೂ ಕಣ್ಣೆದುರೆ ಸುಳಿಯುತ್ತಿದ್ದರೆ ದೃಷ್ಟಿ ಅತ್ತ ಹೊರಳದಿದ್ದೀತೆ!

ಆದರೆ ಹಿಂದಿನಿಂದ ನಡೆದುಕೊಂಡು ಬಂದಿರುವ ಮದುವೆಯ ಪದ್ಧತಿಗಳು ಶಾಸ್ತ್ರ, ವಿಧಿವಿಧಾನಗಳು, ಸಂಪ್ರದಾಯಗಳು ಎಲ್ಲವೂ ಅರ್ಥಬದ್ಧವಾಗಿವೆ. ನೋಡಲು ಸಂತೋಷವಾಗುತ್ತದೆ. ಹಾರ ಹಾಕುವುದು, ಜೀರಿಗೆ ಬೆಲ್ಲ, ಕಂಕಣ ಕಟ್ಟುವುದು, ಧಾರೆ, ಸಭಾಪೂಜೆ, ತಾಳಿ ಧಾರಣೆ, ಆರತಿ ಅಕ್ಷತೆ.. ಹೀಗೆ ಎಲ್ಲಾ ಆಚರಣೆಗಳಿಗೂ ಮಂತ್ರ, ಅರ್ಥಗಳಿರುತ್ತವೆ. ಈ ಆಚರಣೆಗಳನ್ನು ಎಲ್ಲರೂ ಬಂದು ನೋಡಲಿ, ಅಕ್ಷತೆ ಹಾಕಿ ಮದುಮಕ್ಕಳಿಗೆ ಶುಭ ಹಾರೈಸಲಿ ಎಂದೇ ಅಲ್ಲವೆ, ಮದುವೆಗೆ ಎಲ್ಲರನ್ನೂ ಆಹ್ವಾನಿಸುವುದು; ಹಾಗೆಯೇ ಎಲ್ಲಾ ಮದುವೆಗಳಲ್ಲೂ ಟಿ. ವಿ. ಯಲ್ಲಿ ಬಿತ್ತರಿಸುವ ವ್ಯವಸ್ಥೆಯೂ ಇರುವುದಿಲ್ಲ ವ್ಯವಸ್ಥೆ ಇದ್ದರೂ ಪ್ರತ್ಯಕ್ಷವಾಗಿ ಕಣ್ಣೆದುರಿನಲ್ಲಿ ನಡೆಯುತ್ತಿರುವುದನ್ನು ಟಿ.ವಿ.ಯಲ್ಲಿ ನೋಡಬೇಕೆ ಎಂಬ ಮನದ ಅನಿಸಿಕೆಗೆ ಏನೆಂದು ಸಾಂತ್ವನಿಸಲಾದೀತು.



ಅನೇಕರು ಯಾವುದೇ ಸಮಾರಂಭಗಳಿಗೆ ಬರುವುದು ಆಪ್ತೇಷ್ಟರೊಂದಿಗೆ ಮನಸ್ಸು ಬಿಚ್ಚಿ ಮಾತನಾಡಲೆಂದು. ಎಲ್ಲರ ಮನೆಗಳಿಗೆ ಭೇಟಿ ಕೊಡುವುದಂತೂ ಕಷ್ಟ. ಹಾಗೆಂದೇ ಕೆಲವರು ಮಾತ್ರ ಸಮಾರಂಭಕ್ಕೆ ಸಾಕ್ಷಿಯಾಗಿರುತ್ತಾರಾದರೂ ಅವರ ಪ್ರಪಂಚ ಬೇರೆಯದೇ ಆಗಿರುತ್ತದೆ. ಮಂಟಪಕ್ಕೆ ಬೆನ್ನು ಹಾಕಿ ಸುತ್ತ ದುಂಡು ಮೇಜಿನ ಪರಿಷತ್ತು ನಡೆಸುವವರೂ ಇದ್ದಾರೆ. ಮಂಟಪಕ್ಕೆ ಕೋಟೆಕಟ್ಟಿ ನಿಂತವರ ಬಗ್ಗೆ ಇವರಿಗೇನೂ ಆಕ್ರೋಶವಿರದು.

ಇನ್ನು ಕೆಲವರು ಸಮಾರಂಭ ನಡೆಯುವ ಛತ್ರದ ವಿವಿಧೆಡೆಗಳಲ್ಲಿ ಇರುವ ಸುಂದರ ದೃಶ್ಯಗಳೊಂದಿಗೆ ತಮ್ಮ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಾರೆ. ಹಾಗೆಯೇ ಅದನ್ನು ತಮ್ಮ ಸ್ಟೇಟಸ್‌ಗೆ ಹಾಕಿ ಬಿಟ್ಟರೆ ಅವರ ಫೋನ್ ನಂಬರ್ ಇರುವವರಿಗೆಲ್ಲಾ ತಲುಪಿಸಿದಂತಾಗುತ್ತದೆ. ತಾವು ಇಂತಹ ಕಡೆ ಹೋಗಿದ್ದು. ಅಲ್ಲಿಯ ದೃಶ್ಯ ವೈಭವ, ಊಟ ಉಪಚಾರ ಎಲ್ಲವೂ ಛಾಯಾಚಿತ್ರದಲ್ಲಿ ಸೆರೆಯಾಗಿ ತಮ್ಮ ಫೋನಿರುವವರ ದೃಷ್ಟಿಗೆ ಸಿಗುತ್ತದೆ. ಈ ಫೋಟೊ, ವಿಡಿಯೋ ಹಾವಳಿಯಿಂದಾಗಿಯೇ ಮದುವೆ ಮೂಹೂರ್ತ ಮೀರಿದ್ದನ್ನು ಕೇಳುತ್ತಿರುತ್ತೇವೆ, ಫೋಟೊ, ವಿಡಿಯೋಗಳ ಹಾವಳಿ ಮಿತಿಮೀರಿ ಸಮಯವೂ ಮೀರುವುದರಿಂದ ನಂತರ ಗಡಿಬಿಡಿ, ಆತುರಕ್ಕೆ ಎಡೆಕೊಡುತ್ತದೆ. ಕೊನೆಗೆ ಶಾಸ್ತ್ರೋಕ್ತ ಆಚರಣೆಗೆ ಭಂಗ ಬರುತ್ತದೆ.

ಆರತಕ್ಷತೆಯ ಕಾರ್ಯಕ್ರಮಕ್ಕಂತೂ ಬಂದವರು ಗಂಟೆಗಟ್ಟಲೆ ಕಾಯುವುದೇ ಆಗಿಬಿಡುತ್ತದೆ. ಅವರು ಆಮಂತ್ರಣ ಪತ್ರಿಕೆಯಲ್ಲಿ ಮುದ್ರಿಸಿದ ಸಮಯಕ್ಕೆ ಸರಿಯಾಗಿ ಹೋದರೆ ಮಂಟಪ ಬಿಕೋ ಎನ್ನುತ್ತಿರುತ್ತದೆ. ಮಂಟಪಕ್ಕೆ ಸಿಂಗಾರ ನಡೆಯುತ್ತಿರುತ್ತದೆ. ಮದುವೆ ಮಕ್ಕಳು, ಅವರ ಮನೆಯವರು ಎಲ್ಲರೂ ಬ್ಯೂಟಿ ಪಾರ್ಲರ್‌ನವರ ವಶವರ್ತಿಗಳಾಗಿರುತ್ತಾರೆ. ಎಲ್ಲರ ಮೂಲಕ ರೂಪವನ್ನೇ ಮರೆಮಾಚಿ ಬೇರೆಯದೇ ರೂಪವನ್ನು ಕೊಡುವಾಗ ಸಮಯ ಜಾರುತ್ತಿರುತ್ತದೆ. ಅವರೆಲ್ಲರೂ ವಿವಿಧ ಬಗೆಯ ಸಿಂಗಾರ ಪ್ರಸಾದನಗಳಿಂದ ವಿಶಿಷ್ಟ ಮಾದರಿಯಲ್ಲಿ ಅಲಂಕೃತರಾದ ಮೇಲೆ ವಿವಿಧ ಭಂಗಿಗಳಲ್ಲಿ ವಿವಿಧ ಕೋನಗಳಲ್ಲಿ ಫೋಟೋ ತೆಗೆಯಲೇ ಬೇಕಲ್ಲ... ಸಮಯಕ್ಕೆ ಸರಿಯಾಗಿ ಹೋದವರು ಸಹನೆಯಿಂದ ಗಂಟೆಗಟ್ಟಲೆ ಕಾದು ಮದುಮಕ್ಕಳಿಗೆ ಶುಭ ಹರಸಬೇಕಾಗುತ್ತದೆ. ಹಾಗೆಯೇ ಹೋಗೋಣವೆಂದು ಕೊಂಡರೆ ಮದುಮಕ್ಕಳನ್ನು ಹರಸಿ ಉಡುಗೊರೆ ಕೊಡಬೇಕಾದ ಸಂಪ್ರದಾಯವಿದೆಯಲ್ಲ.. ಹರಸದೆ ಹಾಗೇ ಹೋದರೆ ಅವರಿವರು ಏನಾದರೂ ಅಂದುಕೊಂಡರೆ ಎಂಬುದಾಗಿದೆ.

ಇದರಿಂದಾಗಿಯೇ ಹೆಚ್ಚಿನವರು ತಡವಾಗಿಯೇ ಬರುತ್ತಾರೇನೋ.. ಬೇಗ ಬಂದವರಿಗೆ ಮಾತ್ರ ಸಮಯ ಉರುಳಿದಂತೆಲ್ಲಾ ಚಡಪಡಿಕೆ.. ಆರತಕ್ಷತೆಗೆ ಮೊದಲೇ ಕೂರಿಸಿಬಿಟ್ಟರೆ ಮದು ಮಕ್ಕಳು ಎಲ್ಲರೂ ಬರುವವರೆಗೂ ಕುಳಿತಿರಬೇಕು. ಮೂರು ನಾಲ್ಕು ಗಂಟೆಗಳ ಕಾಲ ಫೋಟೋ ವಿಡಿಯೋಗೆ ನಿಂತುಕೊಂಡು ಹರಸಿದವರನೆಲ್ಲಾ ಮುಗುಳ್ನಕ್ಕು ಮಾತನಾಡುವಾಗ ಅವರು ಬಳಲಿ ಹೋಗುತ್ತಾರೆ ಎನ್ನುವುದು ಕುಟುಂಬದವರ ಅನಿಸಿಕೆಯೇನೋ.

ನಮ್ಮ ಆತ್ಮೀಯರೊಬ್ಬರು ಹೇಳುವಂತೆ ಅವರು ಹೀಗೆ ಸರತಿಯ ಸಾಲಿನಲ್ಲಿ ನಿಲ್ಲುವುದಿಲ್ಲವಂತೆ. ಬದಲಾಗಿ ಅವರೇ ಮದುಮಕ್ಕಳ ಫೋಟೋ ತೆಗೆದುಕೊಳ್ಳುತ್ತಾರಂತೆ. ಅದರೊಂದಿಗೆ ಶುಭ ಹಾರೈಕೆಗಳಂತೂ ಇದ್ದೇ ಇರುತ್ತದೆ. ನಂತರ ತಾವು ತೆಗೆದ ಫೋಟೋವನ್ನು ತಾವು ಆರತಕ್ಷತೆಗೆ ಬಂದ ಸಾಕ್ಷಿಗಾಗಿ ಮನೆಯವರಿಗೆ ಕಳುಹಿಸಿಕೊಡುತ್ತಾರಂತೆ. ರಿಸೆಪ್ಷನ್‌ಗೆ

ಬಂದ ಪ್ರತಿಯೊಬ್ಬರೂ ಮದುಮಕ್ಕಳಿಗೆ ಶುಭ ಹರಸುವುದು, ಫೋಟೋ ಅಬ್ಬಬ್ಬ... ಫೋಟೋ ಮಹಾತ್ಮೆಗೆ ಏನೆನ್ನಬೇಕು.

ಮದುವೆ ಗಡಿಬಿಡಿಯೆಲ್ಲಾ ಮುಗಿದು ನಂತರ ಮದುಮಕ್ಕಳೊಂದಿಗೆ ತೆಗೆದ ಛಾಯಾಚಿತ್ರವನ್ನು ಅವರವರ ಫೋನ್‌ಗೆ ಕಳುಹಿಸುವುದು ಮನೆಯವರಿಗೆ ಸಮಯಬೇಡುವ ಮಹತ್ತರವಾದ ಮತ್ತೊಂದು ಕೆಲಸ. ಮನೆಯಲ್ಲಿ ತೆಗೆದ ರಾಶಿರಾಶಿ ಫೋಟೋಗಳನ್ನು ಹಾಗೂ ವೀಡಿಯೋಗಳನ್ನು ಎಷ್ಟು ಬಾರಿ ವಿರಾಮದಲ್ಲಿ ಕುಳಿತು ನೋಡುತ್ತೇವೆ ಎನ್ನುವುದು ಮಾರ್ಮಿಕವಾದ ಪ್ರಶ್ನೆಯೇ! ಅಷ್ಟೊಂದು ವಿರಾಮ ಸಿಕ್ಕುತ್ತದೆಯೇ ಎನ್ನುವುದು ತಿಳಿಯದು.

ಅಂತೆಯೇ ಯಾವುದೇ ಪ್ರವಾಸಿ ತಾಣಕ್ಕೆ ಹೋದರೂ ಅಲ್ಲಿಯ ಆಕರ್ಷಕ ದೃಶ್ಯಗಳನ್ನು ಚಿತ್ತಭಿತ್ತಿಯಲ್ಲಿ ಶಾಶ್ವತವಾಗಿಸಿಕೊಳ್ಳುವ ಬದಲು ಫೋಟೋ ತೆಗೆದುಕೊಳ್ಳಲು ಹಪಹಪಿಸುತ್ತೇವೆ. ನಮಗೋ... ಆ ಅಪರೂಪದ ದೃಶ್ಯಗಳನ್ನು ಮರೆಯದಂತೆ ಶಾಶ್ವತವಾಗಿ ಹಿಡಿದಿಟ್ಟುಕೊಳ್ಳುವ ಹಂಬಲ. ಹಾಗೆಯೇ ಮಕ್ಕಳ ಬಾಲಲೀಲೆಯ ಫೋಟೋಗಳನ್ನು ವೀಡಿಯೋವನ್ನು ಹಂತ ಹಂತವಾಗಿ ಮುಂದೆ ನೋಡಲು ಖುಷಿಯೇ ಹೌದು.

ಒಟ್ಟಾರೆ ಛಾಯಾಚಿತ್ರ ಸಾಗಿ ಬಂದ ದಾರಿಯೇ ವಿಸ್ಮಯಕಾರಿಯಾದದ್ದು. ಆ ಕಾಲದಲ್ಲಿ ಫೋಟೋ ಬೇಕೆಂದಾಗ ತೆಗೆಯಲಾಗುತ್ತಲೇ ಇರಲಿಲ್ಲ. ಅರವತ್ತೆರಡು ವರ್ಷಗಳ ಕೆಳಗೆ ಸ್ವರ್ಗಸ್ಥರಾದ ನಮ್ಮ ಮಾವನವರ ಒಂದೂ ಭಾವಚಿತ್ರ ಇಲ್ಲ. ಫೋಟೋ ತೆಗೆಯುವುದು ಅಷ್ಟೊಂದು ವಿರಳವಾಗಿದ್ದ ಕಾಲವದು. ವರುಷಗಳು ಉರುಳಿದಂತೆ ಮದುವೆಯಾದ ಹೊಸದರಲ್ಲಿ ಪತಿ ಪತ್ನಿಯರು ಫೋಟೋ ಸ್ಟುಡಿಯೋಗೆ ಹೋಗಿ ತಮ್ಮದೊಂದು ಫೋಟೋ ತೆಗೆಸಿಕೊಂಡು ಫ್ರೇಂ ಹಾಕಿಸಿಟ್ಟುಕೊಂಡರೆ ಪರಮಾನಂದದ ಅನುಭವ. ಆಗೆಲ್ಲಾ ಕಪ್ಪು ಬಿಳುಪಿನ ಫೋಟವೇ ಇರುತ್ತಿದ್ದುದು.

ಮಕ್ಕಳಿಗೆ ವರ್ಷವಾಗುವಾಗ ಹಾಗೂ ಹೆಣ್ಣು ಮಕ್ಕಳಿಗೆ ಮಲ್ಲಿಗೆ ಮೊಗ್ಗಿನ ಜಡೆ ಹಾಕಿದಾಗ ಒಮ್ಮೆ ಫೋಟೋ ತೆಗೆಸುವವರೂ ಇದ್ದರು. ಸ್ವಂತವಾಗಿ ಕ್ಯಾಮರಾ ಇಟ್ಟುಕೊಳ್ಳುತ್ತಿದ್ದವರು ತೀರಾ ಅಪರೂಪ. ಫೋನಿನಲ್ಲೇ ಫೋಟೋ ತೆಗೆಯುವ ತಂತ್ರಜ್ಞಾನ ಬಂದಮೇಲಂತೂ ಎಲ್ಲವನ್ನು ಸೆರೆಹಿಡಿಯುವ ಗೀಳು. ಬೇಡವಾದದ್ದನ್ನು ಅಳಿಸಿ ಬಿಡಬಹುದಲ್ಲ! ಕ್ಯಾಮರಾ ಬೇರೆಯಾಗಿ ಇಟ್ಟುಕೊಳ್ಳುವ ತೊಂದರೆಯೂ ಇರದು. ಆದರೆ ಫೋಟೋಗ್ರಫಿಯಲ್ಲಿ ಪರಿಪೂರ್ಣತೆಯನ್ನು ಬಯಸುವವರು ಫೋಟೋ ತೆಗೆಯಲು ಕ್ಯಾಮರಾವನ್ನೇ ಬಳಸುತ್ತಾರೆ. ಈಗ ಫೋಟೋಗಳು ಪ್ರಚಾರದ ಬಹು ದೊಡ್ಡ ಭಾಗವಾಗಿವೆ. ಯಾವುದೇ ಒಂದು ಸಣ್ಣ ಕೆಲಸ ಮಾಡಿದರೂ ಫೋಟೋ ಬೇಕೇ ಬೇಕು. ಪ್ರಚಾರಕ್ಕೆ ಫೋಟೋ ಸಾಕ್ಷಿಯಾಗಬೇಕು.



ನಮ್ಮ ಆತ್ಮೀಯ ಸ್ನೇಹಿತೆಯೊಬ್ಬರು ತಮ್ಮ ಪ್ರವಾಸದಲ್ಲಿ ಕಂಡ ಒಳ್ಳೊಳ್ಳೆಯ ದೃಶ್ಯಾವಳಿಗಳನ್ನು ಒಳ್ಳೆಯ ಶೀರ್ಷಿಕೆ ಹಾಗೂ ಪರಿಚಯ ಬರಹದೊಂದಿಗೆ ಹಾಕುತ್ತಾರೆ.

ಆ ಮೂಲಕ ನಮಗೂ ಪ್ರವಾಸ ಮಾಡಿಸುವುದಲ್ಲದೆ ಸ್ಥಳಗಳ ಬಗ್ಗೆ ಕುತೂಹಲ ಮೂಡಿಸುತ್ತಾರೆ. ದೇವಾಲಯವಿರಬಹುದೂ ಕಲಾ ಮಂದಿರ ಇರಬಹುದು. ಅಲ್ಲಿರುವ ಚಂದದ ದೃಶ್ಯಾವಳಿಗಳನ್ನು ಛಾಯಾಚಿತ್ರದ ಮೂಲಕ ನಮಗೆ ಕಟ್ಟಿಕೊಡುತ್ತಾರೆ.

ನಮ್ಮ ಮಾಹಿತಿಗೆ ಬೇಕಾದ ವಿವರಗಳಿದ್ದರೆ ಅದನ್ನು ಬರೆದುಕೊಳ್ಳುವ ತೊಂದರೆ ತೆಗೆದುಕೊಳ್ಳದೆ ಫೋಟೋ ಕ್ಲಿಕ್ಕಿಸಿಕೊಳ್ಳುವವರೇ ಹೆಚ್ಚು. ರಸ್ತೆಗಳಲ್ಲಿ ಯಾವುದಾದರೂ ದುರಂತಗಳು ಸಂಭವಿಸಿದಾಗ ಸಂಬಂಧ ಪಟ್ಟವರಿಗೆ ತುರ್ತು ಸಹಾಯ ಮಾಡುವುದನ್ನು ಬಿಟ್ಟು ಹತ್ತಾರು ಫೋಟೋಗಳು ಕ್ಲಿಕ್ ಆಗುವುದನ್ನು ಪತ್ರಿಕೆಗಳಲ್ಲಿ ಓದಿರುತ್ತೇವೆ, ಅಪಘಾತವಾದವರ ಜೀವವುಳಿಸಲು ಇರಬಹುದಾದ ಬಲು ಮಹತ್ವದ ಆ ಒಂದೆರಡು ನಿಮಿಷಗಳು ಫೋಟೋದಲ್ಲಿ ಕರಗಿಹೋಗುವುದು ಸರಿಯೇ?

ಅಪಾಯದ ಸ್ಥಳಗಳಲ್ಲಿ ಫೋಟೋ ಅದರಲ್ಲೂ ಸೆಲ್ಫೀ ತೆಗೆಯುವ ಗೀಳಿಗೆ ಬಲಿಯಾಗಿ ಜೀವ ತೆತ್ತವರಿದ್ದಾರೆ. ಎಚ್ಚರಿಕೆಯ ಮಾತುಗಳು ಅವರಿಗೆ ರುಚಿಸದು. ಸಿ.ಸಿ.ಟಿ,ವಿ ಯಲ್ಲಿ ಸೆರೆಯಾದ ಚಿತ್ರಗಳು ಅಪರಾಧಿಗಳ ಪತ್ತೆಗೆ ಅನುಕೂಲವಾಗುವಂತೆ; ಇಡಬಾರದ ಸ್ಥಳಗಳಲ್ಲಿ ಗುಪ್ತ ಕ್ಯಾಮರಾ ಇಟ್ಟು ಬ್ಲಾಕ್ ಮೇಲ್ ಮಾಡುವವರೂ ಇದ್ದಾರೆ. ವಿಕೃತ ಮನಸ್ಸಿನವರು ಫೋಟೋಗಳನ್ನು ತಮಗೆ ಬೇಕಾದಂತೆ ಬೇರೆಯದಕ್ಕೆ ಜೋಡಿಸಿ ಹಣ ಸುಲಿಯುವವರೂ ಇದ್ದಾರೆ.

ಪತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕೆನ್ನುವುದು ಫೋಟೋ ವಿಷಯಕ್ಕೆ ಹೆಚ್ಚು ಅನ್ವಯವಾಗುತ್ತದೆ. ಎಷ್ಟೋ ಬಾರಿ ಫೋಟೋದಲ್ಲಿ ನೋಡಿದವರನ್ನು ಎದುರು ಕಂಡಾಗ "ಇವರೇ ಅವರಾ" ಎಂದು ಗಲಿಬಿಲಿಯಾಗುವುದೂ ಇದೆ. ಹಲವಾರು ಕ್ಯಾಮರಾ ತಂತ್ರಗಳು ಇರುವುದರಿಂದ ಅನುಭವೀ ಕೈಗಳು ಏನೆಲ್ಲಾ ಚಳಕ ಮಾಡಬಲ್ಲವು! ಛಾಯಾಚಿತ್ರ ಪ್ರಪಂಚದಲ್ಲಿ ಇಷ್ಟೆಲ್ಲಾ ಸುಧಾರಣೆ ಆಗಿರುವಾಗ ಎಲ್ಲವನ್ನು ಸದುದ್ದೇಶಕ್ಕಾಗಿ, ಸವಿನೆನಪಿಗಾಗಿ, ಮನಸ್ಸಿನ ಸಂತೋಷಕ್ಕಾಗಿ, ಉಪಯೋಗಿಸಿಕೊಳ್ಳುವಂತಾಗಲಿ. ಹಾಗೆಯೇ ಫೋಟೋಗ್ರಫಿ ಒಳ್ಳೆಯ ಹವ್ಯಾಸವಾಗಲಿ. ಎಂಬುದೇ ಹಾರೈಕೆ.

ಹಿಂದುವಾಣಿಗೆ ಚಂದಾದಾರರಾಗಲು

ವಾರ್ಷಿಕ ಚಂದಾ ರೂ. 130/– ಅಥವಾ ದ್ವೈವಾರ್ಷಿಕ ಚಂದಾ ರೂ. 250/–ರ
ಎಂ.ಓ./ಡಿ.ಡಿ.ಗಳನ್ನು "ಹಿಂದುವಾಣಿ" ಹೆಸರಿನಲ್ಲಿ ಕಳುಹಿಸಬಹುದು
ಅಥವಾ
ಕರ್ನಾಟಕ ಬ್ಯಾಂಕ್, ಚಾಮರಾಜಪೇಟೆ ಶಾಖೆ, ಬೆಂಗಳೂರು.
ಖಾತೆ ಹೆಸರು : "ಹಿಂದುವಾಣಿ" A/c No: 0582500102391901ಕ್ಕೆ
ವರ್ಗಾಯಿಸಬಹುದು.
I.F.S.C Code : KARB0000058
ನಂತರ 9663881653 ಮೊಬೈಲಿಗೆ ಅಥವಾ ದೂರವಾಣಿ 080–26604641ಕ್ಕೆ
ಕರೆ ಮಾಡಿ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.






ಕರ್ನಾಟಕ ದಕ್ಷಿಣ ಬಜರಂಗ ದಳ ಶೌರ್ಯ ಪ್ರಶಿಕ್ಷಣ ವರ್ಗ, ಬೆಂಗಳೂರು




ಪರಿಷದ್ ಶಿಕ್ಷಾವರ್ಗ
ಕರ್ನಾಟಕ, ಕುಮಟಾ




ಬಸವ ಜಯಂತಿ ದಾಸೋಹ, ಅರಸೀಕೆರೆ




ರಕ್ತದಾನ
ವೀರನಗರ, ಮಂಗಳೂರು





ಸಾಮೂಹಿಕ ವಿವಾಹ ಸಮಾರಂಭ ಭದ್ರಾವತಿ



ರಾಮೋತ್ಸವ, ಹೆಬ್ಬಾಳ, ಬೆಂಗಳೂರು






ಹನುಮಾನ್ ಚಾಲೀಸಾ ಸಂಕೀರ್ತನ
ಮಡಿವಾಳ

Regd. No. RNP/KA/BGS/636/2024-2026
Post at Bengaluru PSO 560 026 on 6/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 44
RNI No. KARKAN/2002/08081
Date of Publication 01-06-2024







ದುರ್ಗಾವಾಹಿನಿ ಶೌರ್ಯ ಪ್ರಶಿಕ್ಷಣ ವರ್ಗ, ಬೆಂಗಳೂರು



ಸತ್ಸಂಗ ಸಾಂಘಿಕ್, ಬಿಟಿಎಂ ಪ್ರಖಂಡ



ಸೀತಾನವಮಿ, ಪುತ್ತೂರು



ಮಾತೃಶಕ್ತಿ ವರ್ಗ, ಬೆಂಗಳೂರು



ಸೀತಾನವಮಿ, ಬೈಲಕುಪ್ಪೆ

ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

# ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8 & 8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy